ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ದರ ₹50/–

ಅಕ್ಟೋಬರ್–ನವೆಂಬರ್ 2022 ವಿಶೇಷ ಸಂಚಿಕೆ

ಸಂಪುಟ : 45 ಸಂಚಿಕೆ : 1 – 2

Akhila Karnataka Shikshaka Samachar - Special Issue - October - November 2022





ಶತಮಾನೋತ್ಸವ ಆಚರಿಸಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ
ಪೂಜ್ಯ ಡಾ. ಶರಬಸವಪ್ಪ ಅಪ್ಪಾಜಿ
ಮಾತೋಶ್ರೀ ಡಾ.ದಾಕ್ಷಾಯಿಣಿ ಅವ್ವಾಜಿ
ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ
ಶರಣಬಸವ
Sharnbasva
ಕಲಬುರಗಿ–585103
ಕರ್ನಾಟಕ ಭಾರತ
ಸ್ಥಾಪನೆ : 2017
ವಿಶ್ವವಿದ್ಯಾಲಯ
University
Kalaburagi-585 103
Karnataka India
ESTD. : 2017
ಮಾತೋಶ್ರೀ ಗೋದುತಾಯಿ ದೊಡ್ಡಪ್ಪ ಅಪ್ಪಾ
ಪರಮ ಪೂಜ್ಯ ದೊಡ್ಡಪ್ಪ ಅಪ್ಪಾ
ವಿದ್ಯಾಭಂಡಾರಿ ಪೂಜ್ಯ ಡಾ. ಶರಬಸವಪ್ಪ ಅಪ್ಪಾಜಿ
8ನೇ ಮಹಾದಾಸೋಹ ಪೀಠಾಧಿಪತಿಗಳು,
ಶರಣಬಸವೇಶ್ವರ ಸಂಸ್ಥಾನ, ಕಲಬುರಗಿ
ಅಧ್ಯಕ್ಷರು, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ
ಕುಲಾಧಿಪತಿಗಳು, ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
ಮಾತೋಶ್ರೀ ಡಾ. ದಾಕ್ಷಾಯಿಣಿ ಅವ್ವಾಜಿ
ಚೇರಪರ್ಸನ್, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ,
ಕಲಬುರಗಿ ಹಾಗೂ ಆಡಳಿತ ಮಂಡಳಿ ಸದಸ್ಯರು,
ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
ಪೂಜ್ಯ ಚಿರಂಜೀವಿ ದೊಡ್ಡಪ್ಪ ಅಪ್ಪಾಜಿ
9ನೇ ಮಹಾದಾಸೋಹ ಪೀಠಾಧಿಪತಿಗಳು,
ಶರಣಬಸವೇಶ್ವರ ಸಂಸ್ಥಾನ, ಕಲಬುರಗಿ
ದಿನಾಂಕ: 11,12, ಮತ್ತು 13ನೇ ನವೆಂಬರ 2022, ಜನಸೇವ ವಿದ್ಯಾ ಕೇಂದ್ರ, ಚನ್ನೇನಹಳ್ಳಿ, ಬೆಂಗಳೂರಿನಲ್ಲಿ ಜರುಗುತ್ತಿರುವ
ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ನವದೆಹಲಿ ಇವರ
8ನೇ ರಾಷ್ಟ್ರೀಯ ಅಧಿವೇಶನಕ್ಕೆ ಶುಭ ಹಾರೈಕೆಗಳು
: ಶುಭ ಕೋರುವವರು :
ಪೂಜ್ಯ ಡಾ.ಶರಣಬಸವಪ್ಪ ಅಪ್ಪಾಜಿ ಫ್ಯಾಮಿಲಿ ಟ್ರಸ್ಟ್, ಕಲಬುರಗಿ
ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ
ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ
ಡಾ. ನಿರಂಜನ್ ನಿಷ್ಠಿ
ಉಪ ಕುಲಪತಿಗಳು
ಶರಣಬಸವ ವಿಶ್ವವಿದ್ಯಾಲಯ
ಶ್ರೀ ಬಸವರಾಜ ದೇಶಮುಖ
ಕಾರ್ಯದರ್ಶಿಗಳು,ಶರಣಬಸವೇಶ್ವರ
ವಿದ್ಯಾವರ್ಧಕ ಸಂಘ ಮತ್ತು ಆಡಳಿತ ಮಂಡಳಿ
ಸದಸ್ಯರು ಶರಣಬಸವ ವಿಶ್ವವಿದ್ಯಾಲಯ
ಡಾ. ವಿ.ಡಿ. ಮೈತ್ರಿ
ಸಮ ಕುಲಪತಿಗಳು
ಶರಣಬಸವ ವಿಶ್ವವಿದ್ಯಾಲಯ
ಶ್ರೀ ಎನ್.ಎಸ್. ದೇವರಕಲ್
ಸಮ ಕುಲಪತಿಗಳು
ಶರಣಬಸವ ವಿಶ್ವವಿದ್ಯಾಲಯ
ಡಾ. ಅನಿಲಕುಮಾರ ಬಿಡವೆ
ಕುಲಸಚಿವರು
ಶರಣಬಸವ ವಿಶ್ವವಿದ್ಯಾಲಯ
ಡಾ. ಬಸವರಾಜ ಎಸ್. ಮಠಪತಿ
ಕುಲಸಚಿವರು (ಮೌಲ್ಯಮಾಪನ)
ಶರಣಬಸವ ವಿಶ್ವವಿದ್ಯಾಲಯ
ಡಾ. ಲಕ್ಷ್ಮೀ ಪಾಟೀಲ್ ಮಾಕಾ
ಡೀನ್
ಶರಣಬಸವ ವಿಶ್ವವಿದ್ಯಾಲಯ
ಪ್ರೊ. ಕಿರಣ್ ಮಾಕಾ
ಹಣಕಾಸು ಅಧಿಕಾರಿ
ಶರಣಬಸವ ವಿಶ್ವವಿದ್ಯಾಲಯ

## ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

## ವಿಶೇಷ ಸಂಚಿಕೆ

**ಅಕ್ಟೋಬರ್–ನವೆಂಬರ್ 2022**

**ಸಂಪುಟ : 45** **ಸಂಚಿಕೆ : 1 – 2**

Akhila Karnataka Shikshaka Samachar

Special Issue - October - November 2022


# ಗುರು-ಶಿಷ್ಯ ಪರಂಪರೆ



॥ ವ್ಯಾಸೋಚ್ಛಿಷ್ಟಂ ಜಗತ್‌ಸರ್ವಂ ॥

# Sri Aurobindo

## 150th Birth Anniversary



"India is the guru of the nations, the physician of the human soul in its profounder maladies; she is destined once more to new-mould the life of the world and restore the peace of the human spirit"

"The sun of India's destiny would rise and fill all India with its light and overflow India and overflow Asia and overflow the world. Every hour, every moment could only bring them nearer to brightness of the day that God had decree.

# ಸಂಪಾದಕೀಯ

ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿವೆ. ಈ ವರ್ಷ ಆಗಸ್ಟ್ 15ಕ್ಕೆ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದ್ದೇವೆ. ಆಚರಿಸುವ ಉತ್ತಮ ವಾತಾವರಣವು ಈಗ ದೇಶದಲ್ಲಿದೆ. 75ರ ಅಮೃತ ಆಚರಣೆಯ ಸಂದರ್ಭದಲ್ಲಿಯಾದರೂ ಈ ವಾತಾವರಣ ದೇಶದಲ್ಲಿರುವುದು ನಮಗೆ ಸಂತೋಷದ ವಿಷಯ. ಕಳೆದ 3-4 ವರ್ಷಗಳಿಂದ ದೇಶದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಉತ್ತಮ ಅಭಿವೃದ್ಧಿಯಾಗುತ್ತಿರುವುದು ನಿಮಗೆಲ್ಲಾ ತಿಳಿದಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ತಾಂತ್ರಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಇದುವರೆಗೂ ಕಾಣದಂತಹ ಬೆಳವಣಿಗೆಗಳು ಇಂದು ಕಂಡುಬರುತ್ತಿವೆ. ಸ್ವಾತಂತ್ರ್ಯ ಬಂದ 70 ವರ್ಷಗಳ ಆಚರಣೆ ಮಾಡುವಾಗ ನಮಗೆ ಸಾರ್ಥಕ್ಯದ ಭಾವವಿತ್ತೆ? 70 ವರ್ಷಗಳಲ್ಲಿ ನಮ್ಮ ದೇಶ ಸಾಧಿಸಿದ್ದಾದರೂ ಏನು? ಯಾವ ಮನೋಭಿಲಾಷೆಯೊಂದಿಗೆ ತಮ್ಮ ಜೀವನವನ್ನೇ ಮುಡುಪಿಟ್ಟು ಸ್ವಾತಂತ್ರ್ಯಗಳಿಸಿದರೋ ಅವರ ಕನಸುಗಳನ್ನು ನಾವು ನನಸು ಮಾಡುವ ದಾರಿಯಲ್ಲಿ ಸಾಗಿದ್ದೇವೆಯೇ? ಸ್ವಾತಂತ್ರ್ಯ ಬಂದು ಒಂದು ಪೀಳಿಗೆಯೇ ಮುಗಿಯುತ್ತಾ ಬಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ, ಸ್ವಾತಂತ್ರ್ಯ ಬಂದ ಸಂದರ್ಭದ ಸವಿಘಳಿಗೆಯನ್ನು ಸವಿದವರಿಗೆ ಇಂದಿನ ದಿನದಂದು ತಾವು ನಡೆದ ದಾರಿಯನ್ನು ತಿರುಗಿ ನೋಡಿದರೆ ಅವರ ಅನಿಸಿಕೆ ಏನಾಗಿರಬಹುದು? ತಮ್ಮ ಜೀವನದ ವೈಯಕ್ತಿಕ ಸಮಯ ಮತ್ತು ಸುಂದರ ಘಳಿಗೆಗಳನ್ನು ಬಲಿಕೊಟ್ಟ ಸ್ವಾತಂತ್ರ್ಯ ಹೋರಾಟಗಾರರಿಗೆ ನಾವು ನೀಡಿರುವ ಕಾಣಿಕೆ ಏನು? ತಮ್ಮ ಮುಂದಿನ ಪೀಳಿಗೆಯು ತಮ್ಮಂತೆ ಯಾರ ಅಡಿಯಾಳಾಗದೆ ಸ್ವತಂತ್ರವಾಗಿ ಬದುಕಿದ್ದು, ಸುಂದರ ಜೀವನ ಕಳೆಯಲಿ ಎಂದು ತಮ್ಮ ಜೀವನವನ್ನು ಬಲಿದಾನ ಮಾಡಿದವರಿಗೆ ನಾವು ನೀಡಿರುವ ಬಹುಮಾನವಾದರೂ ಏನು? ಎಂದು ನಾವೆಲ್ಲಾ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಸ್ವಾತಂತ್ರ್ಯ ಪಡೆದಾಗ ಅಖಂಡವಾಗಿದ್ದ ಭಾರತ ಅನೇಕರ ಕುತಂತ್ರದಿಂದ ಇಬ್ಭಾಗವಾಗಿದ್ದು ಈಗ ಇತಿಹಾಸ. ಮತ್ತೆ ಅಖಂಡ ಭಾರತವನ್ನು ನೋಡುವುದು ಯಾವಾಗ? ಅಖಂಡ ಭಾರತವನ್ನು ಮಾಡಲು ನಾವು ಇಟ್ಟಿರುವ ಹೆಜ್ಜೆಗಳಾದರೂ ಯಾವುವು? ಅರವಿಂದರ 150ನೇ ವರ್ಷದ ಜನ್ಮದಿನವನ್ನು ಆಚರಿಸುತ್ತಿರುವಾಗ ನಾವೆಲ್ಲಾ ಯೋಚಿಸಬೇಕಾಗಿರುವ ವಿಷಯವೇನೆಂದರೆ ಕೇವಲ ರಾಜಕೀಯವಾಗಿ ಬ್ರಿಟಿಷರಿಂದ ಬಿಡುಗಡೆ ಹೊಂದುವುದೇ ಸ್ವಾತಂತ್ರ್ಯವಾಗಿತ್ತೇ? ಸ್ವಾತಂತ್ರ್ಯ ಪಡೆದು 75 ವರ್ಷಗಳು ಕಳೆದರೂ ಮೆಕಾಲೆ ಶಿಕ್ಷಣದಿಂದ ಹೊರಬರಲು ಈಗ ಪ್ರಯತ್ನಿಸುತ್ತಿದ್ದೇವೆ. ರಾಷ್ಟ್ರೀಯ ಶಿಕ್ಷಣನೀತಿ ಈ ದಾರಿಯಲ್ಲಿ ಮಹತ್ತರವಾದ ಹೆಜ್ಜೆಯಲ್ಲವೇ? ಭಾರತದಲ್ಲಿ ಭಾರತೀಯ ಶಿಕ್ಷಣ ನೀಡಲು, ಸ್ವತಂತ್ರವಾಗಿ 75 ವರ್ಷಗಳೇ ಬೇಕಾಗಿ ಹೋಯಿತಲ್ಲ. ಇನ್ನಾದರೂ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೇವಲ ಹುಳುಕನ್ನು ಹುಡುಕದೇ ಅನುಷ್ಠಾನಕ್ಕೆ ಮಹತ್ವ ನೀಡಬೇಕು. ರಕ್ತ ಮತ್ತು ಮಾಂಸದಿಂದ ಭಾರತೀಯರಾದರೂ ಬುದ್ಧಿಯಿಂದ ಗುಲಾಮರನ್ನಾಗಿ ಮಾಡಬೇಕೆಂದುಕೊಂಡಿದ್ದುದು ಶಿಕ್ಷಣದ ಬದಲಾವಣೆಯಿಂದಲೇ ಅಲ್ಲವೇ? ಈಗ ನಾವು ಮತ್ತೆ ಶಿಕ್ಷಣದ ಬದಲಾವಣೆಯಿಂದಲೇ ಪೂರ್ಣ ಭಾರತೀಯರಾಗಬೇಕಾದುದು ಅತ್ಯವಶ್ಯ. ಶಿಕ್ಷಣಕ್ಷೇತ್ರದ ಬದಲಾವಣೆಯಿಂದ

ಮಾತ್ರವೇ ಎಲ್ಲವೂ ಸಾಧ್ಯವಿಲ್ಲ. ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದಲಾವಣೆ ಅನಿವಾರ್ಯವೆಂದೇ ಇಂತಹ ಮಹತ್ತರ ಪರಿವರ್ತನೆಗಳಾಗುತ್ತಿರುವುದು. ಇಂದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಮರಳಿ ತರಲೇಬೇಕಾಗಿದೆ.

ಭಾರತದ ಮೇಲೆ ಎಷ್ಟೇ ದಾಳಿಗಳಾಗಿದ್ದರೂ ಭಾರತವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲು ಯಾರಿಂದಲೂ ಸಾಧ್ಯವಾಗಲಿಲ್ಲ. ಆದರೆ ಬ್ರಿಟಿಷರು ಸಂಪದ್ಭರಿತ ಭಾರತವನ್ನು ತಮ್ಮದನ್ನಾಗಿಸಿಕೊಳ್ಳಲು ಬಯಸಿದಾಗ ಭಾರತೀಯರೆನಿಸಿಕೊಂಡು ವಿದೇಶಿ ವ್ಯಾಮೋಹಕ್ಕೆ ಒಳಗಾದ ಸ್ವಾರ್ಥಿಗಳಿಂದಲೇ ನಾವು ಭಾರತಮಾತೆಯನ್ನು ಪರಕೀಯಳನ್ನಾಗಿಸಿದೆವು. ಇನ್ನಾದರೂ ವಿದೇಶಿ ಭಾಷೆ, ಸಂಸ್ಕೃತಿಯ ವ್ಯಾಮೋಹಕ್ಕೆ ಒಳಗಾಗದೇ ನಮ್ಮತನವನ್ನು ಎಲ್ಲಾ ಕ್ಷೇತ್ರದಲ್ಲೂ ಮೆರೆಯಬೇಕಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣವನ್ನು ನೀಡುವುದರೊಂದಿಗೆ ನಮ್ಮ ಸ್ವದೇಶಿ ಭಾಷೆಗಳಿಗೆ ಹೆಚ್ಚಿನ ಮಹತ್ವ ಕೊಡುವುದು, ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ಜವಾಬ್ದಾರಿ ನಮ್ಮೆಲ್ಲರದು.

ಸಂಪೂರ್ಣ ಸ್ವರಾಜ್ ಎಂಬುದು ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತವಾಗಿರದೇ 'ಸ್ವ' ಎಂಬುದು ಎಲ್ಲದರಲ್ಲೂ ಪ್ರಸ್ಫುಟಿತಗೊಳ್ಳಬೇಕಾಗಿದೆ. ಆಗ ಮಾತ್ರ ಅರವಿಂದರ 150ನೇ ಜನ್ಮಜಯಂತಿಯ ಆಚರಣೆ ಅರ್ಥಪೂರ್ಣವಾಗುತ್ತದೆ. ಸ್ವಾತಂತ್ರ್ಯ ದಿನದ ಅಮೃತೋತ್ಸವದ ಸಂಭ್ರಮ ಪರಿಪೂರ್ಣತೆಯನ್ನು ಪಡೆಯುತ್ತದೆ.

---

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ 8ನೇ ಅಧಿವೇಶನದ ಶುಭಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮುಖವಾಣಿಯಾದ **'ಶಿಕ್ಷಕ ಸಮಾಚಾರ'** ಪತ್ರಿಕೆ ತನ್ನ 47ನೇ ವರ್ಷದ ಪ್ರಬುದ್ಧ ಹಂತದಲ್ಲಿ ನಡೆಯುತ್ತಿದೆ. ಈ ನಿಮಿತ್ತ ಪತ್ರಿಕೆಯ ಒಂದು ವಿಶೇಷ ಸಂಚಿಕೆಯನ್ನು ಸಿದ್ಧಪಡಿಸಿ, ನಮ್ಮ ಹೆಮ್ಮೆಯ ಸ್ವಾತಂತ್ರ್ಯ ಹೋರಾಟಗಾರರಿಗೆ ಕೃತಜ್ಞತೆ ಮತ್ತು ಗೌರವಗಳೊಂದಿಗೆ ಸಮರ್ಪಿಸುತ್ತಿದೆ. ಆದುದರಿಂದಲೇ ಈ ಸಂಚಿಕೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸೇವೆಯೊಂದಿಗೆ ಕೃತಾರ್ಥರಾದ ವಿವಿಧ ಕ್ಷೇತ್ರಗಳ ಮಹನೀಯರನ್ನು ಸ್ಮರಿಸಲಾಗಿದೆ, ಜೊತೆಗೆ ಸಂಘಟನೆಯ ಧ್ಯೇಯಗಳಲ್ಲಿ ಒಂದಾದ ಶಿಕ್ಷಣಕ್ಷೇತ್ರದ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡ ಲೇಖನಗಳನ್ನು ವಿದ್ವಾಂಸರಿಂದ ಪಡೆದುಕೊಳ್ಳಲಾಗಿದೆ. ಇವೆಲ್ಲದರೊಂದಿಗೆ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕಸಂಘ ಹಾಗೂ ಶಿಕ್ಷಕಸಮಾಚಾರದ ಹುಟ್ಟು, ಬೆಳವಣಿಗೆ, ಕಾರ್ಯಚಟುವಟಿಕೆಗಳನ್ನು ಸಹ ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ. ಇವೆಲ್ಲದರೊಂದಿಗೆ ಇದೇ ನವೆಂಬರ್ ತಿಂಗಳಿನಲ್ಲಿ ನಾಡಿನಾದ್ಯಂತ ಆಚರಿಸುತ್ತಿರುವ ಕನ್ನಡ ರಾಜ್ಯೋತ್ಸವದ ಹಿನ್ನೆಲೆಯಲ್ಲಿ 'ಏಕೀಕರಣ'ದ ಕುರಿತು ಸಂಕ್ಷಿಪ್ತ ಲೇಖನವನ್ನೂ ಇಲ್ಲಿ ನೀಡುತ್ತಿದ್ದೇವೆ. ಎಲ್ಲ ಸಹೃದಯ ಕನ್ನಡ ಬಂಧುಗಳಿಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

**– ಸಂಪಾದಕರು**

# ಪರಿವಿಡಿ


1. **ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ನನ್ನ ಆತ್ಮಕಥೆ** 9
– ಹೆಚ್ ನಾಗಭೂಷಣರಾವ್

2. **'ಇಂಡಿಯಾ'ದಿಂದ 'ಭಾರತ'ದೆಡೆಗೆ –** 23
– ಕೃ. ನರಹರಿ

3. **ಸ್ವಾತಂತ್ರ್ಯಪ್ರಾಪ್ತಿ – ಸಿಹಿ ಮತ್ತು ಕಹಿ** 26
– ಕೆ. ಬಾಲಕೃಷ್ಣಭಟ್

4. **ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ** 32
– ಆರ್. ಸೀತಾಲಕ್ಷ್ಮಿ

5. **ಎ.ಬಿ.ಆರ್.ಎಸ್.ಎಂ. – ಒಂದು ಪರಿಚಯ** 38
– ಶಿವಾನಂದ ಸಿಂಧನಕೇರಾ

6. युवा क्रान्तिकारी डॉ. केशव बलिराम हेडगेवार 39
- डॉ. गीताराम शर्मा

7. **ಭಾರತೀಯ ಶಿಕ್ಷಣ ಪರಂಪರೆ** 46
– ರಾಮಚಂದ್ರಭಟ್ ಕೋಟೆಮನೆ

8. **ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸಾಧು, ಸಂತ ಮತ್ತು ಸಂನ್ಯಾಸಿಗಳ ಪ್ರೇರಣೆ** 52
– ಸ್ವಾಮಿ ವೀರೇಶಾನಂದ ಸರಸ್ವತೀ

9. **Contribution of Sanskrit to Indian Science** 58
- Dr. Y.S. Gayatri

10. **ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳು** 62
– ಚಕ್ರವರ್ತಿ ಸೂಲಿಬೆಲೆ

11. **Towards teaching authentic History of India** 68
- Dr. Rajaram Hegde

12. **ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಕೊಡುಗೆ** 72
– ನಂ. ನಾಗಲಕ್ಷ್ಮಿ

13. स्वतन्त्रता आन्दोलन में वैज्ञानिकों का योगदान 78
- सीताराम व्यास

14. **ಸ್ವಾತಂತ್ರ್ಯ ಹೋರಾಟದಲ್ಲಿ ವರ್ಣಚಿತ್ರಕಾರರ ಪಾತ್ರ** 81
– ಡಾ॥ ಲೋಕೇಶ್ ಟಿ.ಎನ್

15. **ಕರ್ನಾಟಕ ಏಕೀಕರಣದ ಕಥೆ** 85
– ಜೆ.ಎಂ. ಜೋಶಿ

# ಸಂಪಾದಕ ಮಂಡಳಿ

ಗೌರವ ಸಂಪಾದಕರು

**ಹೆಚ್. ನಾಗಭೂಷಣರಾವ್**

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು

**ಜೆ.ಎಮ್. ಜೋಶಿ**

ವ್ಯವಸ್ಥಾಪಕ ಸಂಪಾದಕರು

**ಸಂದೀಪ ಬೂದಿಹಾಳ**

ಗೌರವ ಸಲಹೆಗಾರರು

**ಚಿದಾನಂದ ಆ.ಕೆ. ಪಾಟೀಲ**

**ಮಮತಾ ಡಿ.ಕೆ.**

ಸಂಪಾದಕ ಮಂಡಳಿ

**ಎನ್. ನಾಗರಾಜ್**

**ನಂ. ನಾಗಲಕ್ಷ್ಮಿ**

**ಆರ್. ಸೀತಾಲಕ್ಷ್ಮಿ**

ವಿನ್ಯಾಸಕಾರರು

**ಕಾಳಾಚಾರ್ಯ ಸಾಂವಶಿ**

ಕಛೇರಿ ವ್ಯವಸ್ಥಾಪಕರು

**ವರಲಕ್ಷ್ಮಿ ಕೆ.ಎನ್**

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಆತ್ಮಕಥೆ



**– ಹೆಚ್. ನಾಗಭೂಷಣರಾವ್**
ಪೋಷಕರು,
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ(ರಿ),
ಬೆಂಗಳೂರು

ನಮ್ಮ ಶಿಕ್ಷಕ ಸಂಘವು ಇಂದು ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ತನ್ನ ಶಾಖೆಗಳನ್ನು ಹೊಂದಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಇದು ಭಾರತದಲ್ಲೇ ಅತಿದೊಡ್ಡ ಶಿಕ್ಷಕ ಸಂಘಟನೆಯಾದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದೊಂದಿಗೆ ಸಂಲಗ್ನ ಹೊಂದಿದೆ. ಅದರ ಆದೇಶದಂತೆ ಇದೇ ಆಗಸ್ಟ್ ಒಂದರಂದು ನಮ್ಮ ರಾಜ್ಯದ 2000 ಶಾಲೆಗಳಲ್ಲಿ 'ಭಾರತಮಾತಾ ಪೂಜನ' ಕಾರ್ಯಕ್ರಮವನ್ನು ಹಮ್ಮಿಕೊಂಡು, ಆ ಶಾಲೆಯ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯಗಳಿಸಿದ ಇತಿಹಾಸವನ್ನು ತಿಳಿಸಿ, ಭಾವೀ ಪ್ರಜೆಗಳಾದ ಅವರಲ್ಲಿ ದೇಶಭಕ್ತಿಯ ಭಾವ ಚಿಗುರುವಂತೆ ಮಾಡಿದೆ. ಇದೇ ಸಂದರ್ಭದಲ್ಲಿ ಆಯಾ ಕ್ಷೇತ್ರದ ಸ್ವಾತಂತ್ರ್ಯ ಯೋಧರನ್ನು ಸನ್ಮಾನಿಸಿ ಧನ್ಯತೆಯನ್ನು ಅನುಭವಿಸಿದೆ. ಕಳೆದೆರಡು ವರ್ಷಗಳಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿನಲ್ಲಿ 'ನನ್ನ ಶಾಲೆ, ನನ್ನ ತೀರ್ಥಕ್ಷೇತ್ರ' ಎಂಬ ವಿನೂತನ ಯೋಜನೆಯನ್ನು ಕೈಗೆತ್ತಿಕೊಂಡು ಎಪ್ಪತ್ತೈದು ಸರ್ಕಾರಿ ಶಾಲೆಗಳನ್ನು ರಾಜ್ಯಾದ್ಯಂತ ಗುರುತಿಸಿ, ಅವುಗಳನ್ನು ಆದರ್ಶಶಾಲೆ ಗಳಾಗಿ ಪರಿವರ್ತಿಸುವ ಪ್ರಯತ್ನವನ್ನು ಮಾಡುತ್ತಿದೆ. ಪ್ರಾಯಶಃ ರಾಜ್ಯದ ಬೇರಾವ ಶಿಕ್ಷಕ ಸಂಘಟನೆಯೂ ಇಂತಹ ವಿನೂತನ ಕಾರ್ಯಕ್ರಮವನ್ನು ಮಾಡಿರಲಿಕ್ಕಿಲ್ಲ.

"ಹಾಗಾದರೆ ಇಂತಹ ಅಪರೂಪದ ಶಿಕ್ಷಕ ಸಂಘಟನೆ ಯಾವಾಗ ಪ್ರಾರಂಭವಾಯಿತು? ಯಾರು ಪ್ರಾರಂಭಿಸಿದರು? ಏಕೆ ಪ್ರಾರಂಭಿಸಿದರು? ಇದರ ಸಿದ್ಧಾಂತವೇನು?" ಎಂಬುದನ್ನು ತಿಳಿದುಕೊಳ್ಳ ಬೇಕಲ್ಲವೇ?




ಅದರ ಆತ್ಮಕಥೆಯನ್ನು ಅದರಿಂದಲೇ ಕೇಳೋಣ.

**ಲೇಖಕ:** ನನ್ನನ್ನು ಶಿಕ್ಷಕ ಸಂಘಟನೆಯಲ್ಲಿ ರಾಜ್ಯಮಟ್ಟದಿಂದ ರಾಷ್ಟ್ರಮಟ್ಟಕ್ಕೆ ಏರಿಸಿದ ನನ್ನ ಪ್ರೀತಿಯ ಶಿಕ್ಷಕ ಸಂಘವೇ, ನಿನ್ನ ಹುಟ್ಟು, ಬೆಳವಣಿಗೆ, ಸಿದ್ಧಾಂತ ಹಾಗೂ ನೀನು ಮಾಡಿದ ಸಾಧನೆಗಳ ಬಗ್ಗೆ ನಮ್ಮ ಓದುಗರಿಗೆಲ್ಲಾ ನಿನ್ನದೇ ರೀತಿಯಲ್ಲಿ ತಿಳಿಸಿಕೊಡುವಿಯಾ?

**ಸಂಘದ ಆತ್ಮಕಥೆ:** ನೀವು ನನಗೆ ಈ ಪ್ರಶ್ನೆ ಕೇಳಿದ್ದು ತುಂಬಾ ಖುಷಿ ನೀಡಿದೆ. ಸಂತೋಷದಿಂದ ನಿಮಗೆ ನನ್ನ ಕಥೆ ಹೇಳುವೆ.

ನಾನು ಹುಟ್ಟಿದ್ದು 1965ರ ಸೆಪ್ಟೆಂಬರ್ ಮಾಹೆಯಲ್ಲಿ. ಅದೂ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ. "ಸ್ವಾತಂತ್ರ್ಯಾನಂತರ ಮುಂದುವರೆದ ಮೆಕಾಲೇ ಶಿಕ್ಷಣದಿಂದ ನಮ್ಮ ಸಮಾಜಕ್ಕಾಗುತ್ತಿದ್ದ ಸಾಂಸ್ಕೃತಿಕ ನಷ್ಟವನ್ನು ಗಮನಿಸಿ, ಭಾರತೀಯ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ನೀಡಬೇಕು, ನಮ್ಮ ಅಧ್ಯಾಪಕರಲ್ಲಿನ ಕೀಳರಿಮೆ ತೆಗೆದು, ಅವರನ್ನು ಆದರ್ಶ ಶಿಕ್ಷಕರಾಗುವ ಮಾರ್ಗದಲ್ಲಿ ಮುನ್ನಡೆಸಬೇಕು. ಅವರಿಗೆ ಆಡಳಿತ ಮಂಡಳಿಗಳಿಂದ, ಸರ್ಕಾರದಿಂದ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ಅದನ್ನು ಸರಿಪಡಿಸಬೇಕು" ಎಂಬ ಉನ್ನತ

*"ಧರ್ಮ, ಯಶಸ್ಸು, ನೀತಿ, ದಾಕ್ಷಿಣ್ಯ ಮತ್ತು ಅರ್ಥಪೂರ್ಣವಾದ ಸುಭಾಷಿತ – ಗುಣರತ್ನಗಳನ್ನು ಶೇಖರಿಸುವವನು ಯಾವಾಗಲೂ ದುಃಖಕ್ಕೆ ಒಳಗಾಗುವುದಿಲ್ಲ."*



ಕೃ.ನರಹರಿ

ಧ್ಯೇಯವನ್ನು ಹೊತ್ತು ಐದಾರು ಮಂದಿ ಶಿಕ್ಷಣಾಸಕ್ತರು ಒಂದೆಡೆ ಕೂತು ಚರ್ಚಿಸಿ, ಒಂದು ಆದರ್ಶ ಶಿಕ್ಷಕ ಸಂಘಟನೆಯನ್ನು ಕಟ್ಟ ಬೇಕೆಂಬ ಅವರ ಇಚ್ಛಾಶಕ್ತಿಯೇ ನನ್ನ ಹುಟ್ಟಿಗೆ ಕಾರಣವಾಯ್ತು.

ಹಾಂ, ನಿನ್ನ ಮನಸ್ಸಿನಲ್ಲಿರುವ ಪ್ರಶ್ನೆ ಅರ್ಥವಾಯ್ತು. ನನ್ನ ಹುಟ್ಟಿಗೆ ಕಾರಣಕರ್ತರಾರೆಂದು ಹೇಳಬೇಕಲ್ಲವೇ?

ನನ್ನ ಹುಟ್ಟಿಗೆ ಕಾರಣಕರ್ತರಾದ ಐದಾರು ಜನರಲ್ಲಿ ನನಗೀಗ ಕೆಲವರ ಹೆಸರು ಮಾತ್ರ ನೆನಪಿನಲ್ಲಿದೆ. ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಟಿ.ಬಿ. ಗೋವಿಂದ ರಾವ್, ಬಿ.ಎಂ.ಎಸ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಕೃ.ನರಹರಿ, ಆರ್.ಬಿ.ಎ.ಎನ್.ಎಂ. ಸೆಕೆಂಡರಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಚಕ್ರವರ್ತಿ ಕೃಷ್ಣೈಯ್ಯಂಗಾರ್ ಹಾಗೂ



ಮಳ್ಳೂರು ಆನಂದರಾವ್

ಹಿರಿಯೂರಿನ ಬಳಿಯ ಶಾಲೆ ಯೊಂದರಲ್ಲಿ ಅಧ್ಯಾಪಕರಾಗಿದ್ದ ಮಳ್ಳೂರು ಆನಂದರಾವ್, ನ್ಯಾಷನಲ್ ಹೈಸ್ಕೂಲಿನಲ್ಲಿ ಗಣಿತ ಶಿಕ್ಷಕರಾದ ಹೆಚ್. ನಾಗಭೂಷಣ ರಾವ್ ಇವರೊಂದಿಗೆ ಒಬ್ಬಿಬ್ಬರು ಸಾಮಾಜಿಕ ಕಾರ್ಯಕರ್ತರೂ ಇದ್ದಿರಬಹುದು. ಅವರ ಹೆಸರೀಗ ನನಗೆ ನೆನಪಿನಲ್ಲಿಲ್ಲ.

1965ರಲ್ಲಿ ಹುಟ್ಟಿದ ಕೆಲವೇ ದಿನಗಳಲ್ಲಿ ನಾನು ಹಲವು ಜಿಲ್ಲೆಗಳಲ್ಲಿ ನನ್ನ ಕಾರ್ಯ ವ್ಯಾಪ್ತಿಯನ್ನು ಬೆಳೆಸಿಕೊಂಡೆ. ಬೆಂಗಳೂರಲ್ಲದೆ ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಚಿತ್ರದುರ್ಗ, ಉತ್ತರಕನ್ನಡ, ವಿಜಯಪುರ, ಗುಲ್ಬರ್ಗಾ ಮೊದಲಾದ ಜಿಲ್ಲೆಗಳಲ್ಲಿ ನಾನು ಪ್ರಬಲವಾಗಿ ಬೇರುಬಿಟ್ಟೆ. ಈ ಹೊತ್ತಿನವರೆಗೆ ನಾನು ಕರ್ನಾಟಕ ರಾಜ್ಯದ ಇಪ್ಪತ್ತೈದಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ನನ್ನ ಶಾಖೆಗಳನ್ನು ನೆಟ್ಟು ಬೆಳೆಸಿದ್ದೇನೆ.

**ಇನ್ನು ನಾನು ಈ ಎತ್ತರಕ್ಕೆ ಬೆಳೆದ ಬಗೆಯನ್ನು ನಿಮಗೆ ತಿಳಿಸಬೇಕಲ್ಲವೇ?**



ಪದ್ಮಾವತಿ ವಿಠಲರಾಯರು

ನನ್ನ ಹುಟ್ಟಿನಿಂದ ನನ್ನ ಕಿಶೋರಾವಸ್ಥೆಯವರೆಗೆ ನನ್ನನ್ನು ಬೆಳೆಸಿದವರು ಹಲವರಾದರೂ, ಪ್ರಮುಖವಾಗಿ ಹೆಸರಿಸಬಹುದಾದ ವರು ಟಿ.ಬಿ ಗೋವಿಂದರಾಯರು, ಮಳ್ಳೂರು ಆನಂದರಾಯರು, ಪದ್ಮಾವತಿ ವಿಠಲರಾಯರು, ಧಾರವಾಡದ ಜಿ.ಕೆ. ಕುಲಕರ್ಣಿ ಹಾಗೂ ಇಡಗೂರು ಸತ್ಯನಾರಾಯಣ ಮುಂತಾದವರು. ಇವರಲ್ಲಿ ಮಳ್ಳೂರು ಆನಂದ ರಾಯರು, ಪದ್ಮಾವತಿ ವಿಠಲರಾಯರು ಹಾಗೂ ಜಿ.ಕೆ ಕುಲಕರ್ಣಿಯವರು ವಿವಿಧ ಶಿಕ್ಷಕರ ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ಚುನಾಯಿತರಾಗಿ ಸದನದ ಒಳಗೆ ಹಾಗೂ ಹೊರಗೆ ಶಿಕ್ಷಣಕ್ಷೇತ್ರದ ಪುರೋಭಿವೃದ್ಧಿಗೆ ಹಾಗೂ ಶಿಕ್ಷಕರ ಅನೇಕ ಬಗೆಯ ಸಮಸ್ಯೆಗಳ ಪರಿಹಾರಕ್ಕೆ ಹೋರಾಟ ನಡೆಸಿ ಯಶಸ್ಸು ಗಳಿಸಿದ್ದು ಈಗ ಇತಿಹಾಸ.

1984ರಲ್ಲಿ ಪದ್ಮಾವತಿ ವಿಠಲರಾಯರು ಎಂ.ಎಲ್.ಸಿ ಸ್ಥಾನದಿಂದ ನಿವೃತ್ತರಾದ ನಂತರ ಪ್ರೊಫೆಸರ್ ಕೃ.ನರಹರಿಯವರು ಬೆಂಗಳೂರು ಶಿಕ್ಷಕ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಚುನಾಯಿತರಾದರು. ಅವರು ಶಿಕ್ಷಕ ಸಂಘಕ್ಕೆ ಅಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಆಗ ಪ್ರಧಾನ ಕಾರ್ಯದರ್ಶಿಯಾಗಿದ್ದ ಇಡಗೂರು ಸತ್ಯನಾರಾಯಣ ರಾಜ್ಯಾದ್ಯಂತ ಪ್ರವಾಸ ಮಾಡಿ ನನ್ನನ್ನು ಸಹಸ್ರಾರು ಶಿಕ್ಷಕರಿಗೆ ಪರಿಚಯಿಸಿದರು.

1990ರ ದಶಕದಲ್ಲಿ ನನ್ನ ಪರಿವಾರಕ್ಕೆ ಹೊಸದಾಗಿ ಸೇರ್ಪಡೆಯಾದವರು ಕೆ. ಬಾಲಕೃಷ್ಣ ಭಟ್ಟರು. ಇವರು ಮಂಗಳೂರು ಕ್ಷೇತ್ರದಿಂದ ಶಿಕ್ಷಕ ಪ್ರತಿನಿಧಿಯಾಗಿ 1994ರಲ್ಲಿ ವಿಧಾನಪರಿಷತ್ ಪ್ರವೇಶಿಸಿದರು. ಜೊತೆಗೆ ಶಿಕ್ಷಕಸಂಘಕ್ಕೆ 2004ರಲ್ಲಿ ಅಧ್ಯಕ್ಷರೂ ಆಗಿ, 2016ರವರೆಗೆ ಶಿಕ್ಷಕ ಪ್ರತಿನಿಧಿಯಾಗಿ ಶಿಕ್ಷಕರಿಗೆ ಅನುಕೂಲವಾಗುವ ಅನೇಕ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ.

2006ರಿಂದ 2007ರವರೆಗೆ ಶಿವಾನಂದ ಸಿಂಧನ ಕೇರಾ ಸಹಕಾರ್ಯದರ್ಶಿಯಾಗಿಯೂ, 2007–

*“ಮನುಷ್ಯ ತನ್ನ ಒಳ್ಳೆಯತನದಿಂದ ದೊಡ್ಡವನಾಗುತ್ತೇನೆಯೇ ಹೊರತು, ಹುಟ್ಟಿನಿಂದಲ್ಲ.”*

2016ರವರೆಗೆ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿ, 2016ರಿಂದ ಫೆಬ್ರವರಿ 2018ರವರೆಗೆ ಅಧ್ಯಕ್ಷ ರಾಗಿಯೂ ಸಂಘವನ್ನು ಮುನ್ನಡೆಸಿದ್ದಾರೆ. ಪ್ರಸ್ತುತ ಸಂದೀಪ ಬೂದಿಹಾಳ ಅಧ್ಯಕ್ಷರಾಗಿಯೂ, ಚಿದಾನಂದ ಪಾಟೀಲರು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು ಗಂಗಾಧರ್ ಆಚಾರಿಯವರು ಸಹಕಾರ್ಯದರ್ಶಿಯಾಗಿ ಹಾಗೂ ಜೆ.ಎಂ. ಜೋಷಿಯುವರು ಖಜಾಂಚಿ ಯಾಗಿಯೂ ರಾಜ್ಯದಾದ್ಯಂತ ಹಲವಾರು ವಿಭಿನ್ನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. ವಿಧಾನಪರಿಷತ್ತಿನ ಮಾಜಿ ಸದಸ್ಯರಾದ ಅರುಣ್ ಶಹಪೂರ್‌ರವರು 2017ರಿಂದಲೂ ರಾಜ್ಯದ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನನ್ನನ್ನು ಈ ಎತ್ತರಕ್ಕೆ ಬೆಳೆಸಿದ ಇನ್ನೂ ಹಲವರು ಹಿರಿಯ ಕಾರ್ಯಕರ್ತರ ಕೊಡುಗೆಯನ್ನು ನಾನು ತಿಳಿಸಲೇಬೇಕು. ನನ್ನ ಹುಟ್ಟಿನ ಪ್ರಾರಂಭದಲ್ಲಿ ನನ್ನ ಬೆಳವಣಿಗೆಗಾಗಿ ಶ್ರಮಿಸಿದ ಮೇಲೆ ಪ್ರಸ್ತಾಪಿಸಿದ ಹಿರಿಯರಲ್ಲದೇ ಆ ಕಾಲದಲ್ಲಿ ಇನ್ನೂ ಹಲವರು ಕಷ್ಟ ಪಟ್ಟಿದ್ದಾರೆ. ಅವರಲ್ಲಿ ಗೌರಿಬಿದನೂರಿನ ಬಳಿಯ ಇಡಗೂರಿನ ಶಾಲೆಯಲ್ಲಿ ಶಿಕ್ಷಕರಾಗಿದ್ದ ಡಿ.ವಿ. ಸತ್ಯನಾರಾಯಣ – ಎಲ್ಲರ ಪ್ರೀತಿಯ 'ಸತ್ಯ', ಕಾಲಿಗೆ ಚಕ್ರಕಟ್ಟಿಕೊಂಡವರಂತೆ ಊರೂರು ಸುತ್ತಿ ಶಿಕ್ಷಕರಿಗೆ ನನ್ನನ್ನು ಪರಿಚಯಿಸಿದರು. 1984ರ ನಂತರ ಅನೇಕ ವರ್ಷಗಳು ಪ್ರಧಾನ ಕಾರ್ಯದರ್ಶಿಯಾಗಿ ಅಂತ್ಯಕಾಲ ದವರೆಗೆ ಅವಿರತವಾಗಿ ಕೆಲಸ ಮಾಡಿದರು. ಆ ಕಾಲದಲ್ಲಿ ನನ್ನ ಹಣಕಾಸಿನ ವ್ಯವಹಾರ ನೋಡಿಕೊಳ್ಳುತ್ತಿದ್ದವರು ನ್ಯಾಷನಲ್ ಹೈಸ್ಕೂಲಿನ ಶಿಕ್ಷಕರಾಗಿದ್ದ ಪಿ.ವೆಂಕಟ ನಾರಾಯಣ್. ಸತ್ಯನ ನಂತರ ಪ್ರಧಾನ ಕಾರ್ಯದರ್ಶಿ ಯಾಗಿ ನನ್ನ ಆರೈಕೆ ಮಾಡಿದವರು ಮಲ್ಲಾಡಿಹಳ್ಳಿಯ ಶಾಲೆಯಲ್ಲಿ ಶಿಕ್ಷಕರಾಗಿದ್ದ ಅ. ಪು. ನಾರಾಯಣಪ್ಪನವರು. ಅವರು ಶಿಕ್ಷಕರಿಗೆ ವೇತನದಲ್ಲಿ ತಾರತಮ್ಯವಾಗಿರುವುದನ್ನು ಪತ್ರಿಕೆಗಳಲ್ಲಿ ಲೇಖನ ಬರೆದು ಎಲ್ಲರ ಕಣ್ಣುತೆರೆಸಿದ್ದರು. ಅಂದು ಖಜಾಂಚಿಯಾಗಿ ಇಪ್ಪತ್ತೈದು ವರ್ಷಗಳ ಕಾಲ ಸಮರ್ಥವಾಗಿ ಜವಾಬ್ದಾರಿಯನ್ನು ನಿಭಾಯಿಸಿದವರು ಈ ಲೇಖನದ ಲೇಖಕ. ನಂತರದಲ್ಲಿ ಮುಖ್ಯೋಪಾಧ್ಯಾಯ ರಾಗಿದ್ದ ಶಿಕಾರಿಪುರದ ಟಿ. ರಾಜಶೇಖರ್, ಬೆಂಗಳೂರು ಮಲ್ಲೇಶ್ವರಂ ಸರ್ಕಾರಿ ಶಾಲೆಯ ಅಧ್ಯಾಪಕರಾಗಿದ್ದ ಬಿ.ಎಂ. ಶ್ರೀನಿವಾಸಮೂರ್ತಿ ಮುಂತಾದವರೂ ನನ್ನನ್ನು ಪೋಷಿಸಿದ್ದಾರೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಶಿಕ್ಷಕರಿಗಾಗಿ ಹಲವು ಕಾರ್ಯಕ್ರಮಗಳನ್ನು ಯೋಜಿಸುತ್ತಿದ್ದರೂ, ವಿಶೇಷವಾಗಿ ವಿಭಿನ್ನ ರೀತಿಯ ಕಾರ್ಯಕ್ರಮಗಳನ್ನು ಯೋಜಿಸಿ ನಡೆಸಿದ್ದು ನಮ್ಮ ಬೆಂಗಳೂರು ಶಾಖೆ. ಇದರಲ್ಲಿ ಪ್ರಮುಖರೆಂದರೆ ಗುಜರಾತಿ ಶಾಲೆಯ ಮುಖ್ಯೋಪಾಧ್ಯಾಯರಾದ ವಿ.ಜಿ. ಹೆಗಡೆಯವರು ಬೆಂಗಳೂರು ಶಾಖೆಯ ಅಧ್ಯಕ್ಷರಾಗಿ, ಪ್ರೊಫೆಷನಲ್ ಡೆವಲಪ್‌ಮೆಂಟ್ ಸೆಂಟರ್‌ನ ನಿರ್ವಾಹಕರಾಗಿ ನನ್ನ ಕೀರ್ತಿಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲೂ ಹೆಚ್ಚಿಸಿದರು.

ಅದೇ ಶಾಲೆಯ ಶಿಕ್ಷಕಿ ಎಸ್. ಪಿ. ಶೈಲ, ಬೆಂಗಳೂರು ಹೈಸ್ಕೂಲ್‌ನ ಎ.ಜಯತೀರ್ಥರಾವ್, ಬಿ.ವಿ.ನಾಗರಾಜ, ರಾಜರಾಜೇಶ್ವರಿ ಶಾಲೆಯ ಬಿ.ಕೆ.ವರಲಕ್ಷ್ಮಿ, ಸ್ವಾಮಿ ವಿವೇಕಾನಂದ ಶಾಲೆಯ ಎನ್. ನಾಗರಾಜ್ ಮತ್ತು ಎಸ್. ನಾಗರಾಜ್, ಐ.ಟಿ.ಐ. ಶಾಲೆಯ ಮಂಜುಳಾದೇವಿ ಇವರೆಲ್ಲ ಪ್ರಮುಖರು.

ಕಳೆದ ಐವತ್ತೇಳು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ, ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ನನ್ನ ಕೊಡುಗೆ ಏನು? ಎಂಬುದು ನಿಮ್ಮ ಪ್ರಶ್ನೆಯಲ್ಲವೇ?



**"ಕೆನಡಿಯನ್ ಟೀಚರ್ಸ್ ಫೆಡರೇಷನ್"ನೊಂದಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

*"ನಮ್ಮ ನಿಜವಾದ ಶತ್ರು ಯಾವುದೇ ಬಾಹ್ಯಶಕ್ತಿಯಲ್ಲ. ನಮ್ಮೊಳಗಿನ ದೌರ್ಬಲ್ಯ, ಹೇಡಿತನ, ಸ್ವಾರ್ಥ, ಬೂಟಾಟಿಕೆ ಮತ್ತು ಭಾವಾತೀರೇಕಗಳೇ ನಮ್ಮ ಶತ್ರುಗಳು" – ಅರವಿಂದ ಘೋಷ್*

ಆತ್ಮಸ್ತುತಿಯನ್ನು ಮಾಡಿಕೊಳ್ಳುವುದು ಸರಿಯಲ್ಲ ವೆಂದು ತಿಳಿದವರು ಹೇಳುತ್ತಾರೆ. ಆದರೆ ನೀವು ಕೇಳಿದಿರಿ ಎಂದು ಹೇಳುತ್ತಿದ್ದೇನೆ.

**ಶಿಕ್ಷಣಕ್ಷೇತ್ರಕ್ಕೆ ನನ್ನ ಕೊಡುಗೆ**

ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮ ಶಾಲೆಗಳಲ್ಲಿ ವಿದೇಶಿಯರು, ಮಾರ್ಕ್ಸ್‌ಪುತ್ರರು ಬರೆದ, ತಿರುಚಿದ ಇತಿಹಾಸವನ್ನೇ ಆಡಳಿತಾರೂಢರು ಕಲಿಸುತ್ತಿದ್ದರು. ಇದನ್ನು ವಿರೋಧಿಸಿ, ನಾಡಿನ ನೈಜ ಇತಿಹಾಸವನ್ನು ಕಲಿಸಬೇಕೆಂದು ನಮ್ಮ ಸಂಘದ ಪದಾಧಿಕಾರಿಗಳು, ಶಿಕ್ಷಕರು ನಡೆಸಿದ ಹೋರಾಟದ ಫಲವಾಗಿ ಪಠ್ಯ ಪುಸ್ತಕಗಳಲ್ಲಿ 'ಆರ್ಯ–ದ್ರಾವಿಡ ಎಂಬ ವಿಭಜನೆಯ ಇತಿಹಾಸ', '1857ರಲ್ಲಿ ಸಿಪಾಯಿದಂಗೆ ಆದುದು ಎಂಬ ಕಟ್ಟುಕಥೆ' ಮುಂತಾದ ವಿಷಯಗಳನ್ನು ಬದಲಿಸಿ, ಆರ್ಯರು ಈ ನಾಡಿನಲ್ಲೇ ಇದ್ದವರು. ಆರ್ಯ ಎಂಬುದು ಗೌರವಸೂಚಕ ಪದ ಎಂಬುದನ್ನು ಒಪ್ಪಿ ಕೊಳ್ಳುವಂತೆ ಮಾಡಿದ್ದಲ್ಲದೆ, "1857ರದ್ದು ಸಿಪಾಯಿದಂಗೆ ಅಲ್ಲ, ಅದು 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂಬುದನ್ನು ಮಕ್ಕಳಿಗೆ ತಿಳಿಹೇಳುವಂತೆ ಮಾಡಿದ್ದು ಕಡಿಮೆ ಸಾಧನೆಯಾ?

ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎಂದಿನಿಂದಲೂ ಇದ್ದೇ ಇದೆ. ನಾನು ನಮ್ಮ ಶಾಸಕರ ಮೂಲಕ ವಿಧಾನಪರಿಷತ್ತಿನ ಸದನದ ಒಳಗೆ ಹಾಗೂ ಸದನದ ಹೊರಗೆ ಧರಣಿ ಕೂತು ಒತ್ತಾಯಿಸಿದ್ದರ ಫಲವಾಗಿ ಶಿಕ್ಷಕರನ್ನು ಹೊಸದಾಗಿ ನೇಮಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಾ ಬಂದಿದೆ. ಇದು ಇನ್ನೊಂದು ಮಹತ್‌ಸಾಧನೆಯಲ್ಲವೇ?

ನಮ್ಮ ವಿಜ್ಞಾನಪಠ್ಯದಲ್ಲಿ ಎಲ್ಲೂ ಭಾರತೀಯರ ಕೊಡುಗೆ ಬಗ್ಗೆ ಚಕಾರವಿಲ್ಲ. ಇದನ್ನು ಕಂಡ, 'ವಿಜ್ಞಾನ ಪ್ರಪಂಚಕ್ಕೆ ಭಾರತೀಯರ ಕೊಡುಗೆ' ಎಂಬ ಭಿತ್ತಿಪತ್ರವನ್ನು (ಪೋಸ್ಟರ್) ಇಲಾಖೆಯ ಸಹಕಾರದೊಂದಿಗೆ ಸಾವಿರಾರು ಪ್ರತಿಗಳನ್ನು ಮುದ್ರಿಸಿ ಎಲ್ಲಾ ಶಾಲೆಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಜೊತೆಗೆ ಶಿಕ್ಷಕರಿಗೂ ಐವತ್ತು ಪುಟಗಳ ಒಂದು ಕೈಪಿಡಿಯನ್ನು ತಯಾರಿಸಿ ಕೊಟ್ಟಿರುವುದು ಒಂದು ಸಾಧನೆಯಲ್ಲವೇ?

**ಶಿಕ್ಷಕರಿಗಾಗಿ ನನ್ನ ಕೊಡುಗೆ**

ನಮ್ಮದು ಶಿಕ್ಷಕ ಸಂಘಟನೆ, ಶಿಕ್ಷಕರ ಹಕ್ಕುಗಳಿಗೆ ಹೋರಾಟವಲ್ಲದೆ, ಅವರಲ್ಲಿ ಕರ್ತವ್ಯ ಜಾಗೃತಿಗಾಗಿಯೂ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಿದೆ.

1960ರ ದಶಕದ ಅಂತ್ಯದವರೆಗೆ ಅನುದಾನಿತ ಶಾಲೆಗಳ ಶಿಕ್ಷಕರಿಗೆ, ಸರ್ಕಾರ ಬಿಡುಗಡೆ ಮಾಡುತ್ತಿದ್ದ ಅನುದಾನವನ್ನು ಆಡಳಿತ ಮಂಡಳಿಗಳೇ ವೇತನವೆಂದು ಕೊಡುತ್ತಿದ್ದವು. ಇದರಲ್ಲಿ ಶಿಕ್ಷಕರಿಗೆ ತುಂಬಾ ಅನ್ಯಾಯ ವಾಗುತ್ತಿತ್ತು. ಆ ಸಮಯದಲ್ಲಿ ನಮ್ಮ ಶಾಸಕರಾಗಿದ್ದ ಮಳ್ಳೂರು ಆನಂದರಾಯರ ನೇತೃತ್ವದಲ್ಲಿ ರಾಜಧಾನಿ ಯಲ್ಲಿ ನಡೆದ ಬೃಹತ್ ಪ್ರತಿಭಟನೆಯ ಪರಿಣಾಮವಾಗಿ ಚೆಕ್ ಪದ್ಧತಿ ಜಾರಿಗೆ ಬಂದು, ಖಜಾನೆಯಿಂದ ನೇರವಾಗಿ ಶಿಕ್ಷಕರ ವೇತನವು ಅವರ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿದೆ. ಅಲ್ಲದೆ ಇದರ ಪರಿಣಾಮವಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಯ ಮೌಲ್ಯಮಾಪನ ಸಂಭಾವನೆಯೂ ಮೊದಲಬಾರಿಗೆ ಹೆಚ್ಚಾಯಿತು. ಈ ಗೆಲುವು ನನ್ನ ಸಾಧನೆಯ ಕಿರೀಟಕ್ಕೇರಿಸಿದ ನವಿಲುಗರಿ.

ಕೃ. ನರಹರಿಯವರು ಶಾಸಕರಾಗಿದ್ದ ಸಮಯ. ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ, ತರಗತಿಗಳನ್ನು ಕಡಿಮೆ ಮಾಡಿ, ಕೆಲವು ಶಿಕ್ಷಕರನ್ನು ಕೆಲಸದಿಂದ ತೆಗೆದು ಹಾಕಲಾಗುತ್ತಿತ್ತು. ಇದರ ಪರಿಣಾಮ ನೂರಾರು ಶಿಕ್ಷಕರಿಗೆ ಅನ್ಯಾಯವಾಗುತ್ತಿತ್ತು. ಅದೇ ಸರ್ಕಾರಿ ಶಾಲೆಗಳಲ್ಲಾದರೆ ಅವರನ್ನು ಬೇರೆ ಶಾಲೆಗೆ ವರ್ಗಾವಣೆ ಮಾಡುತ್ತಿದ್ದರು. ಶಾಸಕ ಕೃ. ನರಹರಿಯವರ ಪ್ರಯತ್ನದ ಪರಿಣಾಮ ಅನುದಾನಿತ ಶಾಲೆಗಳಲ್ಲೂ ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರ ವರ್ಗಾವಣೆ ಜಾರಿಗೆ ಬಂದಿತು. ಇದು ಶಿಕ್ಷಕರಿಗೆ ನಾನು ಕೊಟ್ಟಂತಹ ಮಹತ್ತ್ವದ ಕೊಡುಗೆ.

ಅಂದು ಸರ್ಕಾರಿ ನಿಯಮದಂತೆ ಆಂಗ್ಲಭಾಷೆ ಬಿಟ್ಟು ಉಳಿದ ಭಾಷಾಶಿಕ್ಷಕರಿಗೆ ಮುಖ್ಯೋಪಾಧ್ಯಾಯ ರಾಗುವ ಅರ್ಹತೆ ಇಲ್ಲವೆಂದು ಅವರಿಗೆ ಮುಖ್ಯೋ

ಪಾಧ್ಯಾಯ ಹುದ್ದೆ ಸಿಗುತ್ತಿರಲಿಲ್ಲ. ಆಗ ಶಾಸಕ ಕೃ.ನರಹರಿಯವರು ಸರ್ಕಾರದ ಈ ನಿಲುವನ್ನು ಟೀಕಿಸುತ್ತಾ "ಇಂಗ್ಲೀಷ್ ಬೋಧಿಸುವ ಶಿಕ್ಷಕ ಮುಖ್ಯ ಶಿಕ್ಷಕ ಆಗಬಹುದಾದರೆ ಕನ್ನಡ, ಸಂಸ್ಕೃತ ಮೊದಲಾದ ನಮ್ಮ ದೇಶೀಯ ಭಾಷೆಗಳನ್ನು ಬೋಧಿಸುವ ಶಿಕ್ಷಕರೇಕೆ ಪದೋನ್ನತಿ ಪಡೆಯಬಾರದು? ಇದು ನಮಗೆ ನಮ್ಮ ಬಗ್ಗೆ ಇರುವ ಕೀಳರಿಮೆಯ ದ್ಯೋತಕ" ಎಂಬ ಚಾಟಿ ಬೀಸಿದರು. ಅದರ ಪರಿಣಾಮ ಇಂದು ನೂರಾರು ಭಾಷಾಶಿಕ್ಷಕರು ಮುಖ್ಯೋಪಾಧ್ಯಾಯರಾಗಿದ್ದಾರೆ. ಇದು ಶಿಕ್ಷಕಸಂಘದ ಅತ್ಯುತ್ತಮ ಸಾಧನೆಯಲ್ಲವೇ?

ತೊಂಭತ್ತರ ದಶಕದ ಪ್ರಾರಂಭ. ಶಾಲೆಗಳಲ್ಲಿ ಶಿಕ್ಷಕರ ಕೊರತೆ ಸರ್ಕಾರಿ ಶಿಕ್ಷಕರನ್ನು ನೇಮಿಸಿಕೊಳ್ಳುವ ಬದಲಾಗಿ "ಕಾಂಟ್ರಾಕ್ಟ್ ಟೀಚರ್ಸ್" ಎಂಬ ಹೆಸರಿನಲ್ಲಿ ಹತ್ತು ಸಾವಿರ ಶಿಕ್ಷಕರನ್ನು ನೇಮಿಸಿಕೊಂಡಿತ್ತು. ಅವರಿಗೆ ವೇತನ ಹೊರತುಪಡಿಸಿ ಸರ್ಕಾರಿ ಶಿಕ್ಷಕರಿಗಿದ್ದ ಯಾವುದೇ ಸೌಲಭ್ಯಗಳಿರಲಿಲ್ಲ, ಸಂಬಳವೂ ಅತಿ ಕಡಿಮೆ, ಅದೂ ಹತ್ತು ತಿಂಗಳಿಗೆ ಮಾತ್ರ, ಮರುವರ್ಷ ನೇಮಕಾತಿಯ ಗ್ಯಾರಂಟಿ ಇಲ್ಲ. ಸಾವಿರಾರು ಶಿಕ್ಷಕರು ಸೇವಾ ಭದ್ರತೆ ಇಲ್ಲದೆ ಹೆಂಡತಿ ಮಕ್ಕಳನ್ನು ಸಾಕುವುದೇ ಕಷ್ಟವಾಗಿತ್ತು. ಇಂತಹ ಸಮಯದಲ್ಲಿ ಅವರ ಕೈ ಹಿಡಿದವರು ಶಾಸಕ ಕೃ.ನರಹರಿ. ಸರ್ಕಾರದೊಂದಿಗೆ ಸದನದ ಒಳಗೆ, ಹೊರಗೆ ಮಾತುಕತೆ, ಧರಣಿ, ಸತ್ಯಾಗ್ರಹ ಮುಂತಾದ ಪ್ರಕ್ರಿಯೆಗಳನ್ನು ಅವರು ನಡೆಸಿದ್ದರ ಫಲವಾಗಿ ಸರ್ಕಾರವು ಆ ಎಲ್ಲ ಶಿಕ್ಷಕರ ಸೇವೆಯನ್ನು ಖಾಯಂಗೊಳಿಸಿತು. ಶಿಕ್ಷಕರ ನಿರಾಳ ಜೀವನಕ್ಕೆ ಅವಕಾಶ ಮಾಡಿಕೊಟ್ಟ ಕೀರ್ತಿ ನನಗೇ ಸಲ್ಲಬೇಕು.

ಇದುವರೆಗೆ ನಾನು ನನ್ನ ಜನ್ಮದಾತರಲ್ಲಿ ಒಬ್ಬರಾದ, ಸಾಕಿಸಲಹಿದವರೂ ಆದ ಕೃ.ನರಹರಿಯವರ ಸಾಧನೆಗಳ ಬಗ್ಗೆ ತಿಳಿಸಿದೆ. ಇನ್ನೂ ಮೂರ್‍ನಾಲ್ಕು ಜನರ ಬಗ್ಗೆ ತಿಳಿಸುವುದು ಬಾಕಿ ಇದೆ.

ಕೆ. ಬಾಲಕೃಷ್ಣ ಭಟ್‌ರವರು 2006ರಿಂದ 2018ರವರೆಗೆ ಮಂಗಳೂರು ಶಿಕ್ಷಕಕ್ಷೇತ್ರವನ್ನು ಪ್ರತಿನಿಧಿಸಿ ವಿಧಾನಪರಿಷತ್ ಸದಸ್ಯರಾಗಿ ಸರ್ಕಾರದ ಮೇಲೆ ಒತ್ತಡ ಹೇರಿ ಶಿಕ್ಷಕರಿಗೆ ಅನುಕೂಲವಾಗುವ ಹತ್ತು ಹಲವು ಕೆಲಸಗಳನ್ನು ಮಾಡಿಸಿ ಕೊಟ್ಟಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ,

- ❑ ಖಾಸಗಿ ಐಟಿಐನ ಶಿಕ್ಷಕರಿಗೆ ಮೊದಲಬಾರಿಗೆ ಅನುದಾನ ಕೊಡಿಸಿರುವುದು.
- ❑ ಕೇಂದ್ರಸರ್ಕಾರದ ಯೋಜನೆಯಾಗಿದ್ದ, ರಾಜ್ಯದ ಜೆಓಸಿ ನೌಕರರಿಗೆ ಸರ್ಕಾರದ ಅನ್ಯ ಇಲಾಖೆಗಳಲ್ಲಿ ಸ್ಥಿರೀಕರಿಸುವಂತೆ ಸರ್ಕಾರವನ್ನು ಒತ್ತಾಯಿಸಿ ಅವರನ್ನು ಸ್ಥಿರೀಕರಿಸಿರುವುದು.
- ❑ ಇತ್ತೀಚಿನ ದಿನಗಳಲ್ಲಿ ಅನುದಾನರಹಿತ ಶಾಲೆಗಳು ಹೆಚ್ಚಾಗಿರುವುದನ್ನು ಸರ್ಕಾರದ ಗಮನಕ್ಕೆ ತಂದು ಅಲ್ಲಿನ ಶಿಕ್ಷಕರಿಗೆ ಕನಿಷ್ಠ ವೇತನ ನಿಗದಿಯಾಗುವಂತೆ ಆದೇಶ ಹೊರಡಿಸುವಂತೆ ಆದುದು.
- ❑ ಇದಲ್ಲದೆ ಅಂದಿನ ಪಠ್ಯಪುಸ್ತಕಗಳಲ್ಲಿನ ಲೋಪ ದೋಷಗಳನ್ನು ಅಧ್ಯಯನ ಮಾಡಿ ಅದನ್ನು ಸದನದಲ್ಲಿ ಪ್ರಸ್ತಾಪಿಸಿ ಆ ದೋಷಗಳನ್ನೆಲ್ಲ ಸರಿಪಡಿಸುವಂತೆ ಆಗ್ರಹಿಸಿ ಸರಿಪಡಿಸಿರುವುದು.
- ❑ 1987–95ರ ಅವಧಿಯಲ್ಲಿ ಪ್ರಾರಂಭವಾದ ಪ್ರಾಥಮಿಕ, ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಒತ್ತಾಯಿಸಿ ಯಶಸ್ವಿಯಾದದ್ದು.



**ಪ್ರತಿಭಾ ಪುರಸ್ಕಾರ ನೀಡುತ್ತಿರುವ ಇನ್ಫೋಸಿಸ್ ನಾರಾಯಣಮೂರ್ತಿ**

- ❑ ಪ್ರೌಢಶಾಲಾ ಅಧ್ಯಾಪಕರ ಬಡ್ತಿ–50:50 ಅನುಪಾತ ದಲ್ಲಿ ಇದ್ದುದನ್ನು 75:25ಕ್ಕೆ ಬದಲಾಯಿಸಲು ಶಿಕ್ಷಣ ಸಚಿವರನ್ನು ಒತ್ತಾಯಿಸಿ ಕಾರ್ಯರೂಪಕ್ಕೆ ತಂದದ್ದು.

ವಿಧಾನಪರಿಷತ್ತಿನ ತಮ್ಮ ಎರಡು ಅವಧಿಗಳನ್ನು ಪೂರೈಸಿ ಕೆ.ಬಾಲಕೃಷ್ಣ ಭಟ್ಟರು 2018ರಲ್ಲಿ ನಿವೃತ್ತಿ ಪಡೆದ ನಂತರ ಅದೇ ಶಿಕ್ಷಕಕ್ಷೇತ್ರದಿಂದ ನನ್ನ ಪ್ರತಿನಿಧಿಯಾಗಿ ಆಯ್ಕೆಯಾದವರು ಕ್ಯಾಪ್ಟನ್ ಗಣೇಶ್ ಕಾರ್ಣಿಕರು. ಇವರು ಸುಮಾರು ಆರರಿಂದ ಏಳು ವರ್ಷಗಳ ಕಾಲ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದು ಶಿಕ್ಷಕಕ್ಷೇತ್ರದ ಅಭ್ಯರ್ಥಿಯಾಗಿ ವಿಧಾನಪರಿಷತ್‌ಗೆ 2006ರಲ್ಲಿ ಚುನಾಯಿತರಾದರು. ತಮ್ಮ ಹನ್ನೆರಡು ವರ್ಷಗಳ ಸೇವಾವಧಿಯಲ್ಲಿ ಶಿಕ್ಷಣದ, ಶಿಕ್ಷಕರ ಅನೇಕ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸಿದರು. ಅವರ ಅತ್ಯಂತ ಪ್ರಮುಖ ಕೊಡುಗೆ ಎಂದರೆ 3000 ಜೆಓಸಿ ನೌಕರರ ಸಮಸ್ಯೆಯನ್ನು ಪದೇಪದೇ ಸರ್ಕಾರದ ಗಮನಕ್ಕೆ ತಂದು ಸದನದ ಒಳಗೆ, ಹೊರಗೆ ಅವಿರತವಾಗಿ 2012ರವರೆಗೆ ಹೋರಾಟ ನಡೆಸಿ ಕೊನೆಗೂ ಆ ನೌಕರರನ್ನು ಸರ್ಕಾರವು ವಿವಿಧ ಇಲಾಖೆಗಳಲ್ಲಿ ನೇಮಿಸಿಕೊಳ್ಳುವಂತೆ ಮಾಡಿದ್ದು. 2013ರಲ್ಲಿ ನೇಮಕ ಗೊಂಡ ಆ ಎಲ್ಲ ಶಿಕ್ಷಕರು ಬದುಕಿಗೆ ಭದ್ರನೆಲೆ ದೊರಕಿಸಿ ಕೊಟ್ಟವರ ಸೇವೆಯನ್ನು ಸ್ಮರಿಸಿಕೊಳ್ಳುತ್ತಾರೆ.

ಕಾರ್ಣಿಕರು ಸಂಘಟನಾ ಕಾರ್ಯದರ್ಶಿಯಾಗಿ ಕರ್ನಾಟಕದ ವಿವಿಧ ಭಾಗಗಳಿಗೆ ಪ್ರವಾಸ ಮಾಡುತ್ತಾ ನನ್ನ ಸೇವೆಯನ್ನು ಮಾಡಿದ್ದಾರೆ.

ಕರ್ನಾಟಕದ ಉತ್ತರ–ಪಶ್ಚಿಮ ಶಿಕ್ಷಕಕ್ಷೇತ್ರವನ್ನು 2010ರಿಂದ 2022ರವರೆಗೆ ಹನ್ನೆರಡು ವರ್ಷಗಳ ಕಾಲ ನನ್ನನ್ನು ಪ್ರತಿನಿಧಿಸಿದ್ದ ಅರುಣ್ ಶಹಾಪುರ ಶಿಕ್ಷಕರ ಅನೇಕ ಸಮಸ್ಯೆಗಳನ್ನು ಆಡಳಿತ ಮಾಡುವವರ ಗಮನಕ್ಕೆ ತಂದು ಅದಕ್ಕೆ ಪರಿಹಾರ ಕಂಡುಕೊಳ್ಳುವಲ್ಲಿ ನೆರವಾಗಿದ್ದಾರೆ.

2021ರಲ್ಲಿ ಭಾರತದ ಶಿಕ್ಷಣಕ್ಷೇತ್ರವನ್ನು ಸಂಪೂರ್ಣ ವಾಗಿ ಬದಲಿಸಲು 1986ರಿಂದ ಇದ್ದ ಶಿಕ್ಷಣ ನೀತಿಗೆ ಬದಲಾಗಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿತು. ಕರ್ನಾಟಕ ಸರ್ಕಾರ ಈ ನೀತಿಯನ್ನು ತನ್ನ ಶಿಕ್ಷಣಕ್ರಮದಲ್ಲಿ ಕೂಡಲೇ ಅಳವಡಿಸಿಕೊಂಡಿತು. ಎನ್‌ಇಪಿಯನ್ನು ಪ್ರಚುರಪಡಿಸಲು ಅರುಣ್ ಶಹಾಪುರ್‌ರವರು ರಾಜ್ಯದ ವಿವಿಧ ಭಾಗಗಳಲ್ಲಿ ಶಿಕ್ಷಕರಿಗೆ, ಆಡಳಿತ ಮಂಡಳಿಯವರಿಗೆ, ಕಾರ್ಯಾಗಾರ ಗಳು ಹಾಗೂ ಸೆಮಿನಾರ್‌ಗಳನ್ನು ಆಯೋಜಿಸಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಿದ್ದಾರೆ.

ನನ್ನ ಹುಟ್ಟಿನಿಂದ ಈವರೆಗೆ ಏಳು ಜನ ನನ್ನ ಆಶೀರ್ವಾದದಿಂದ ಶಾಸಕರಾಗಿ ವಿಧಾನಪರಿಷತ್ ಪ್ರವೇಶಿಸಿ ನನ್ನ ಬದುಕಿನ ಉದ್ದೇಶವಾಗಿದ್ದ ಶಿಕ್ಷಣಕ್ಷೇತ್ರದ ಸುಧಾರಣೆ, ಶಿಕ್ಷಕರ ಮಾನಸಿಕ ಬದಲಾವಣೆಗಾಗಿ ಬಹಳಷ್ಟು ಶ್ರಮಿಸಿದ್ದಾರೆ. ಇವರ ಪರಿಶ್ರಮ ವ್ಯರ್ಥವಾಗದೆ ಕಳೆದ ಐದು ದಶಕಗಳಲ್ಲಿ ಶಿಕ್ಷಣಕ್ಷೇತ್ರ ಅನೇಕ ಸುಧಾರಣೆಗಳನ್ನು ಕಂಡಿದೆ. ಸಹಸ್ರಾರು ಶಿಕ್ಷಕರು ನನಗೆ ಆಭಾರಿಯಾಗಿದ್ದಾರೆ.

**ವಿದ್ಯಾರ್ಥಿಗಳಿಗಾಗಿ ನಾನು ಮಾಡಿದ ಕೆಲಸ**

ನಾನು ಹುಟ್ಟಿದಾಗಿನಿಂದಲೂ ನನಗೆ ವಿದ್ಯಾರ್ಥಿ ಗಳೆಂದರೆ ಪಂಚಪ್ರಾಣ. ಏಕೆಂದರೆ ಅವರು ಈ ದೇಶವನ್ನು ಮುನ್ನಡೆಸಬೇಕಾದ ಭಾವೀ ಜನಾಂಗ. ಅವರು ಮೌಲ್ಯಯುಕ್ತರಾಗಿ, ದೇಶಭಕ್ತರಾಗಿ ಬೆಳೆದಾಗ ದೇಶವು ಕೀರ್ತಿಗಳಿಸುತ್ತದೆ. ಅದಕ್ಕಾಗಿ ನಾನು ಅವರಿಗಾಗಿ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಯೋಜಿಸುತ್ತಿದ್ದೆ. ನಮ್ಮ ಶಿಕ್ಷಕರು ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣ ಗೊಳಿಸುವುದನ್ನು ಕಂಡು ಸಂತೋಷಪಟ್ಟಿದ್ದೇನೆ.

ನಾನು ಯೋಜಿಸಿದ ಹಲವು ಕಾರ್ಯಕ್ರಮಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

- ❑ ಸ್ವಾಮಿ ವಿವೇಕಾನಂದರ 150ನೇ ವರ್ಧಂತಿಯ ಸಮಯದಲ್ಲಿ ಅವರ ಜೀವನವನ್ನು ಆಧರಿಸಿ 108 ಪ್ರಶ್ನೋತ್ತರಗಳಿರುವ ಒಂದು ಪುಸ್ತಕವನ್ನು ರಚಿಸಿ, ಅದನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡಿ, ಓದಲು ಕಾಲಾವಕಾಶ ನೀಡಿ, ಒಂದು ಪರೀಕ್ಷೆ

*"ಶ್ರದ್ಧೆಯೇ ಯಶಸ್ಸಿನ ಕೀಲಿಕೈ."*

ಮಾಡಿದ್ದೆ. ಸಾವಿರಾರು ಮಕ್ಕಳು ಅವರ ಜೀವನ ಚರಿತ್ರೆಯನ್ನು ಅರಿತು ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಅತಿ ಹೆಚ್ಚು ಅಂಕ ಪಡೆದವರಿಗೆ ಬಹುಮಾನವನ್ನೂ ಕೊಡಲಾಯಿತು. ವಿದ್ಯಾರ್ಥಿಗಳಿಗೆ ಓರ್ವ ಮಹಾನ್ ರಾಷ್ಟ್ರ ಜಾಗೃತಿಯ ಸಂತನ ಜೀವನ ಅರಿತು, ಆತನ ಮಾತುಗಳಿಂದ ಪ್ರೇರಿತರಾಗಿ ಆತನು ನಡೆದ ಮಾರ್ಗದಲ್ಲಿ ನಡೆಯುವ ಸಂಕಲ್ಪ ಮಾಡಿಸುವಲ್ಲಿ ನಾನು ಯಶಸ್ವಿಯಾದೆ.

❑ ಕಳೆದ ಮೂವತ್ತೈದು ವರ್ಷಗಳಿಂದ ವಿದ್ಯಾರ್ಥಿಗಳಿಗಾಗಿ ನಾನು ಆಚರಿಸಿಕೊಂಡು ಬರುತ್ತಿರುವ ಕಾರ್ಯಕ್ರಮ 'ಪ್ರತಿಭಾ ಪುರಸ್ಕಾರ'. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ, ಜೀವನದಲ್ಲಿ ಸ್ವಂತ ಬಲದಿಂದ ಮೇಲೇರಿದ ಸಾಧಕರನ್ನು ಆಹ್ವಾನಿಸಿ ಅವರಿಂದ ಸನ್ಮಾನ ಮಾಡಿಸುವುದು ಒಂದು ವಿಶೇಷ.

❑ ಅಂತಹವರು ವಿದ್ಯಾರ್ಥಿಗಳನ್ನು ಕುರಿತು ತಮ್ಮ ಜೀವನಾನುಭವದ ನಾಲ್ಕು ಮಾತನಾಡಿದರೆ ಅದರ ಪ್ರಭಾವ ವಿದ್ಯಾರ್ಥಿಗಳ ಮೇಲೆ ಖಂಡಿತ ಆಗುವುದೆಂಬ ನಂಬಿಕೆ ನನ್ನದು.

ಬಹುತೇಕ ಸಂಘಸಂಸ್ಥೆಗಳು ಈ ಕಾರ್ಯಕ್ರಮ ಯೋಜಿಸುತ್ತವೆ. ಆದರದು ತಮ್ಮ ಜಾತಿಯ, ಪಂಗಡದ, ತಮ್ಮ ಸಂಘದ ಸದಸ್ಯರ ಮಕ್ಕಳಿಗೆ ಮಾತ್ರ ಸೀಮಿತ. ನಾನಾದರೋ ಜಾತಿ, ಮತ, ಪಂಗಡಗಳ ಭೇದವಿಲ್ಲದೆ ಎಲ್ಲ ಬಗೆಯ ಶಾಲೆಗಳ ಮಕ್ಕಳನ್ನೂ ಆರಿಸುತ್ತಿದ್ದೆ. ಆಯ್ಕೆಯ ಮಾನದಂಡ ಅವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಆ ಶಾಲೆಗೆ ಅತಿ ಹೆಚ್ಚು ಅಂಕ ಪಡೆದಿರಬೇಕಷ್ಟೆ. ಇಷ್ಟೇ ಅಲ್ಲ ಆಟೋಟಗಳಲ್ಲಿ ರಾಜ್ಯವನ್ನು ಪ್ರತಿನಿಧಿಸಿದವರು, ಸಂಗೀತ, ನೃತ್ಯ ಪರೀಕ್ಷೆಗಳಲ್ಲಿ ಪ್ರತಿಭೆ ಮೆರೆದವರು, ದಿವ್ಯಾಂಗರು ಹಾಗೂ ಶಿಕ್ಷಕರ ಮಕ್ಕಳು. ಈ ರೀತಿ ಇದುವರೆಗೆ ಸಾವಿರಾರು ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದೇನೆ.

ಇನ್ನು ಅವರಿಗೆ ನೀಡುವ ಬಹುಮಾನ ಸಾಧಕರ ಜೀವನಚರಿತ್ರೆ, ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ, ದೇಶಭಕ್ತರ ಜೀವನಚರಿತ್ರೆ ಹೀಗೆ ಅವರ ಬದುಕಿಗೆ ಪ್ರೇರಣೆ ನೀಡುವ ಪುಸ್ತಕಗಳನ್ನೇ ಕೊಡುತ್ತಿದ್ದು ದರಿಂದ ಖಂಡಿತ ಅವರು ಅದನ್ನು ಓದಿ ಮೌಲ್ಯವಂತರಾಗುತ್ತಿದ್ದರು ಎಂಬ ನಂಬಿಕೆ ನನಗಿದೆ.

❑ ಜ್ಞಾನವಾಣಿ ರೇಡಿಯೋ ಮೂಲಕ ನುರಿತ ಅಧ್ಯಾಪಕರಿಂದ 'ಪರೀಕ್ಷೆ ತಯಾರಿ' ಹೆಸರಿನಲ್ಲಿ ವಿವಿಧ ವಿಷಯಗಳ ಕುರಿತು ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಪಾಠಮಾಡಿಸಿದ್ದು ನನಗೆ ಹೆಮ್ಮೆ ತರುವ ವಿಷಯ.


ಇದೇ ರೀತಿ 'ನಿಧಾನ ಕಲಿಕೆ' ಯ ವಿದ್ಯಾರ್ಥಿಗಳಿಗೆ 'ಲೆಕ್ಚರ್ ಕ್ಲಾಸ್' ಮಾಡುವ ಮೂಲಕ ಅವರು ಉತ್ತೀರ್ಣರಾಗುವಂತೆ ಮಾಡಿದುದೂ ಸಹ ನನ್ನ ಸಾಧನೆ.

❑ ಕರೋನಾ ಕಾಲಖಂಡದಲ್ಲಂತೂ ಅನೇಕ ಜಿಲ್ಲೆಗಳಲ್ಲಿ ನುರಿತ ಅಧ್ಯಾಪಕರಿಂದ ಪರೀಕ್ಷೆಗೆ ಮುನ್ನ ವಿಶೇಷ ತರಗತಿಗಳನ್ನು ನಡೆಸಿದ್ದು, ಪೋಷಕರ, ಪತ್ರಿಕಾ ಮಾಧ್ಯಮದವರ, ಕೊನೆಗೆ ವಿದ್ಯಾ ಇಲಾಖೆಯ ಅಧಿಕಾರಿಗಳಿಂದಲೂ ಮೆಚ್ಚುಗೆಗೆ ಪಾತ್ರವಾಗಿದ್ದು ನನಗೆ ಆನಂದ ತಂದ ಸಂಗತಿ. ಈ ಕಾರ್ಯಕ್ರಮವನ್ನು ನಮ್ಮ ಕಾರ್ಯಕರ್ತರು ಇಂದಿಗೂ ಮುಂದುವರೆಸಿ ಕೊಂಡು ಹೋಗುತ್ತಿರುವುದು ನನಗೆ ಹೆಮ್ಮೆಯ ವಿಷಯ.

❑ ಇದಲ್ಲದೆ ಅಕ್ಟೋಬರ್ ಹಾಗೂ ಬೇಸಿಗೆ ರಜೆಯ ಕಾಲದಲ್ಲಿ ನಾನು ನಡೆಸಿದ 'ಭಾರತೀಯ ಸಂಸ್ಕೃತಿ ಪರಿಚಯ ಶಿಬಿರ' ಯಶಸ್ವಿಯಾಗಿ ಎಂಟು ದಿನ ನಡೆಯುತ್ತಿತ್ತು. ಇದರಲ್ಲಿ ವಿದ್ಯಾರ್ಥಿಗಳಿಗೆ ನಮ್ಮ ಪರಂಪರೆಯ ಹೆಮ್ಮೆಯ ಸಂಗತಿಗಳಾದ ಸಂಗೀತ, ನೃತ್ಯ, ಜಾನಪದ ಹಾಗೂ ನಾಟಕ ಮುಂತಾದ ಕಲೆಗಳು ಹಾಗೂ ದೇಶಭಕ್ತರ ಜೀವನದ ಬಗ್ಗೆ ವಿಷಯತಜ್ಞರಿಂದ ತಿಳಿಸಿಕೊಡುತ್ತಿದ್ದೆ. ಭಾರತೀಯ ಆಟಗಳಾದ ಚೌಕಾಬಾರ, ಪಗಡೆ, ಹುಲಿ-ಕುರಿ, ಹಾವು-ಏಣಿ, ಚಿನ್ನಿದಾಂಡು, ಕುಂಟೇಬಿಲ್ಲೆ


*"ಸಂಸ್ಕೃತಿಯೇ ಮಾನವನ ಮಹಾಗುರು."*

ಮುಂತಾದ ಆಟಗಳನ್ನು ಪರಿಚಯಿಸಿ ಆ ಮಕ್ಕಳು ಅದನ್ನು ಕಲಿತು ಆಡುವುದನ್ನು ನೋಡಿ ಅವರ ಪೋಷಕರೂ ಸಂತೋಷ ಪಡುವಂತೆ ಮಾಡಿದ್ದೇನೆ. ಇಲ್ಲಿ ನೆನೆಯಲೇ ಬೇಕಾದ ಒಂದು ಶಿಬಿರ ಎಂದರೆ ಬೆಂಗಳೂರಿನ ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಹರ್ಷಾನಂದರು 1996ರಲ್ಲಿ ನಡೆದ ನಮ್ಮ ಶಿಬಿರದ ಉದ್ಘಾಟನೆಗೆ ಬಂದು ನಮ್ಮ ವೇಳಾಪಟ್ಟಿ ನೋಡಿ, “ನೀವು ಮಾಡುತ್ತಿರುವ ಕೆಲಸ ಸ್ತುತ್ಯರ್ಹ, ಇದು ಇಂದಿನ ಪೀಳಿಗೆಗೆ ತಲುಪಿಸಲೇ ಬೇಕಾದ ಸಂಗತಿ, ಇದನ್ನು ಮುಂದುವರೆಸಿಕೊಂಡು ಹೋಗಿ”ಎಂದು ಹರಸಿದ್ದು.




ಶಿಕ್ಷಕಿಯರ ರಾಜ್ಯಮಟ್ಟದ ಸಮ್ಮೇಳನದಲ್ಲಿ ವಿದ್ಯಾಮಂತ್ರಿಗಳಾದ ಶ್ರೀ ಗೋವಿಂದೇಗೌಡರು

- ❑ ನನ್ನ ಮತ್ತೊಂದು ಯೋಜನೆ ಎಂದರೆ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ಕೆಲವು ಪುಸ್ತಕಗಳನ್ನು ಪ್ರಕಟಿಸಿದ್ದು. ಇಲ್ಲಿ ನಾನು ಕೆಲವು ಪುಸ್ತಕಗಳ ಹೆಸರನ್ನು ಮಾತ್ರ




ಉಲ್ಲೇಖಿಸುತ್ತೇನೆ.

1. ಭಾರತೀಯ ಇತಿಹಾಸ ವಿಕೃತೀಕರಣ 2. ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಸುಲಭ ಗಣಿತ. 3. ಪ್ರಶ್ನೋತ್ತರದಲ್ಲಿ ಸ್ವಾಮಿ ವಿವೇಕಾನಂದರ ಜೀವನ ದರ್ಶನ 4. ಶಿಕ್ಷಕರಿಗೆ ಸರ್ಕಾರಿ ಆಜ್ಞೆಗಳ ಸಂಗ್ರಹ 5. ವಿಜ್ಞಾನ ಪ್ರಪಂಚಕ್ಕೆ ಭಾರತೀಯರ ಕೊಡುಗೆ 6. ಶಿಕ್ಷಣಕ್ಕೊಂದು ಹೊಸ ದೃಷ್ಟಿ ಮತ್ತು ದಿಕ್ಕು, ಮುಂತಾದವು.

### ಮಹಿಳಾ ವಿಭಾಗದ ಕೊಡುಗೆ

ನಮ್ಮ ರಾಜ್ಯದ ಶಿಕ್ಷಣಕ್ಷೇತ್ರದಲ್ಲಿ ಮಹಿಳೆಯರದ್ದೇ ಸಿಂಹಪಾಲು. ಪ್ರಾಥಮಿಕ, ಮಾಧ್ಯಮಿಕ, ಹೈಸ್ಕೂಲು, ಪದವಿಪೂರ್ವ ಕಾಲೇಜು ಎಲ್ಲಾ ಸ್ತರಗಳಲ್ಲೂ ಶಿಕ್ಷಕರ ಎರಡರಷ್ಟು ಸಂಖ್ಯೆ ಶಿಕ್ಷಕಿಯರದ್ದಿದೆ. ಅದಕ್ಕಾಗಿ ಶಿಕ್ಷಕ ಸಂಘವು ಮಹಿಳೆಯರ ಸಂಘಟನೆಗೆ ವಿಶೇಷ ಆದ್ಯತೆಯನ್ನು ನೀಡಿದೆ. ಹೀಗಾಗಿ ಬೆಂಗಳೂರಿನ ಶಿಕ್ಷಕ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಬೆಂಗಳೂರು ಕಾರ್ಪೊರೇಷನ್ ಶಾಲೆಯಲ್ಲಿ ಶಿಕ್ಷಕಿಯಾಗಿ ಪದೋನ್ನತಿ ಹೊಂದಿ ಶಿಕ್ಷಣಾಧಿಕಾರಿಯಾಗಿದ್ದ ಶ್ರೀಮತಿ ಪದ್ಮಾವತಿ ವಿಠಲರಾವ್ ಅವರನ್ನು ಆಯ್ಕೆಮಾಡಿ ನಿಲ್ಲಿಸಿ, ಗೆಲ್ಲಿಸಲಾಯಿತು. ಅವರು ಎರಡು ಅವಧಿಗೆ (1972 ರಿಂದ 1984) ಶಾಸಕಿಯಾಗಿ ಸಂಘಟನೆಯನ್ನು ಬೆಂಗಳೂರಿನಲ್ಲಲ್ಲದೆ ರಾಜ್ಯದ ಅನೇಕ ಪ್ರದೇಶಗಳಿಗೂ

ತಲುಪಿಸುವುದಕ್ಕೆ ಶ್ರಮಿಸಿದರು. ಅವರ ಕಾಲದಲ್ಲಿ ಬೆಂಗಳೂರಿನ ಮಹಿಳಾ ಕಾರ್ಯಕ್ಕೆ ವಿಶೇಷವಾಗಿ ಕೆಲಸ ಮಾಡಿದವರಲ್ಲಿ ದೊಮ್ಮಲೂರು ಶಾಲೆಯ ಶಿಕ್ಷಕಿ ಶ್ರೀಮತಿ ಲಕ್ಷ್ಮೀನರಸು, ಶ್ರೀಮತಿ ಪದ್ಮಾಬಾಯಿ ಪ್ರಮುಖರು.

1984ರ ನಂತರ ಮಹಿಳೆಯರ ಸಂಘಟನೆಗೆ ಒತ್ತು ಕೊಡಲು ಮಹಿಳಾ ವಿಭಾಗವನ್ನು ತೆರೆಯಲಾಯಿತು. ಬೆಂಗಳೂರು ಬಸವನಗುಡಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಹೈಸ್ಕೂಲು ವಿಭಾಗದಲ್ಲಿ ಶಿಕ್ಷಕಿಯಾಗಿದ್ದ ಶ್ರೀಮತಿ ಆರ್. ಸೀತಾಲಕ್ಷ್ಮೀಯವರು ರಾಜ್ಯದ ಮೊದಲ ಮಹಿಳಾವಿಭಾಗದ ಪ್ರಮುಖರಾಗಿ 2015ರವರೆಗೆ ಸುದೀರ್ಘವಾಗಿ ಮೂವತ್ತೊಂದು ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಇವರಿಗೆ ಜೊತೆಜೊತೆಯಾಗಿ ಸಂಘಟನೆಯ ವಿವಿಧ ಹಂತಗಳ ಜವಾಬ್ದಾರಿಯನ್ನು ನಿರ್ವಹಿಸಿದವರಲ್ಲಿ ಗುಜರಾತಿ ಹೈಸ್ಕೂಲಿನ ಶೈಲಾ, ಐಟಿಐ ಶಾಲೆಯ ಶಿಕ್ಷಕಿ ಮಂಜುಳ, ರಾಜರಾಜೇಶ್ವರಿ ಶಾಲೆಯ ಬಿ.ಕೆ. ವರಲಕ್ಷ್ಮೀ, ಬಸವನಗುಡಿ ಬಾಲಕಿಯರ ಹೈಸ್ಕೂಲಿನ ರುಕ್ಮಿಣಿ, ವಾಸುಕಿ, ಎಸ್.ಎನ್. ಚಂದ್ರಿಕಾ, ಎಸ್. ಯಾಸ್ಮಿನ್ ಸುಲ್ತಾನ, ಎಸ್.ಜಿ.ಪಿ.ಟಿ.ಎ ಶಾಲೆಯ ಸಾವಿತ್ರಿ, ವಾಸವಿ ವಿದ್ಯಾನಿಕೇತನ್ ಶಾಲೆಯ ಶ್ಯಾಮಲಾ, ಹಿಂದೀ ಶಿಕ್ಷಕಿ ಪ್ರೇಮ, ಎಂ.ಇ.ಸಿ ಶಾಲೆಯ ನಿರ್ಮಲ ಮುಂತಾದವರು ಪ್ರಮುಖರು. ಇವರೆಲ್ಲ ಒಗ್ಗೂಡಿ ಬೆಂಗಳೂರಿನಲ್ಲಿ ನಡೆಸಿದ ವಿವಿಧ ರೀತಿಯ ಕಾರ್ಯಕ್ರಮಗಳ ಪಟ್ಟಿ ದೊಡ್ಡದಾಗಿಯೇ ಇದೆ. ಅದರಲ್ಲಿ ಕೆಲವನ್ನು ಮಾತ್ರ ಉಲ್ಲೇಖಿಸುತ್ತೇನೆ.

1. Time management
2. Stress management
3. Leadership Developing qualities – ಮುಂತಾದ ಹಲವು ಕಾರ್ಯಾಗಾರಗಳು ಶಿಕ್ಷಕಿಯರಿಗೆ ತುಂಬಾ ಉಪಯುಕ್ತವೆನಿಸಿದವು.
4. ಆರೋಗ್ಯ ಕಾಪಾಡಿಕೊಳ್ಳಲು ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವಾಸ್ಕ್ಯುಲರ್ ಸೈನ್ಸ್ ಅಂಡ್ ರಿಸರ್ಚ್‌ನ ಸಹಯೋಗ ಪಡೆದು




ವೇದಿಕೆಯಲ್ಲಿ : ವಾರ್ತಾ ಸಚಿವ ಡಾ.ಜೀವರಾಜ್ ಆಳ್ವಾ, ಪತ್ರಕರ್ತ ಎನ್.ಎಸ್.ರಾಮಪ್ರಸಾದ ಕೃ. ನರಹರಿ

ಹೃದಯ ತಪಾಸಣಾ ಶಿಬಿರ ಹಾಗೂ ಮೂಳೆಗಳ ಗಟ್ಟಿತನ ತಿಳಿಸಲು ಖ್ಯಾತಮೂಳೆ ತಜ್ಞ ಡಾ॥ ರಾಜಕುಮಾರ್ ಅವರ ನೇತೃತ್ವದಲ್ಲಿ 'Bone Density Testing' ಕಾರ್ಯಾಗಾರ ನಡೆಸಿದ್ದು ನೂರಾರು ಶಿಕ್ಷಕಿಯರಿಗೆ ಅನುಕೂಲವಾಯಿತು.

ಕಳೆದ ಹತ್ತಾರು ವರ್ಷಗಳಲ್ಲಿ ಶಿಕ್ಷಕಿಯರಿಗಾಗಿ ಅನೇಕ ಸೆಮಿನಾರ್, ಸಮ್ಮೇಳನಗಳನ್ನು ಮಾಡಿದ್ದರೂ ಕೇವಲ ಕೆಲವನ್ನು ಮಾತ್ರ ಉಲ್ಲೇಖಿಸುತ್ತೇನೆ.

1. 'ರಾಷ್ಟ್ರಪುನರ್‌ನಿರ್ಮಾಣದಲ್ಲಿ ಶಿಕ್ಷಕಿಯ ಪಾತ್ರ' ಎಂಬ ಸಮ್ಮೇಳನ ಆಯೋಜಿಸಿದಾಗ ಅಂದಿನ ವಿದ್ಯಾಮಂತ್ರಿಯವರು ನೂರಾರು ಶಿಕ್ಷಕಿಯರೊಂದಿಗೆ ಸಂವಾದ ನಡೆಸಿದ್ದು ವಿಶೇಷ.
2. 'ಮಕ್ಕಳ ಬೆಳವಣಿಗೆಗೆ ಶಿಕ್ಷಕಿಯರ ಕೊಡುಗೆಯೇ ಅಧಿಕ' ಎಂಬ ಸೆಮಿನಾರ್‌ನಲ್ಲಿ ನ್ಯೂಹೊರೈಸನ್ ಬಿ.ಎಡ್ ಕಾಲೇಜಿನ ಪ್ರಾಂಶುಪಾಲರಾಗಿದ್ದ ಶ್ರೀಮತಿ ಸುಶೀಲ ಹಾಗೂ ಮಲ್ಲೇಶ್ವರಂ ಲೇಡಿಸ್ ಅಸೋಸಿಯೇಷನ್‌ನ ವಿದ್ಯಾಸಂಸ್ಥೆಗಳ ಅಧ್ಯಕ್ಷರಾಗಿದ್ದ ಶ್ರೀಮತಿ ರುಕ್ಮಿಣಿಯವರು ಭಾಗವಹಿಸಿ ನೂರಾರು ಶಿಕ್ಷಕಿಯರಿಗೆ ಪ್ರೇರಣೆ ನೀಡಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ಮೈಸೂರಿನಲ್ಲೊಂದು ಹಾಗೂ ಬೆಂಗಳೂರಿನಲ್ಲೊಂದು ಯೋಜಿಸಿದ ಕಾರ್ಯಕ್ರಮಗಳಲ್ಲೂ ನೂರಾರು ಶಿಕ್ಷಕಿಯರು ಭಾಗವಹಿಸಿದ್ದರು. ಬೆಂಗಳೂರಿನ ಕಾರ್ಯಕ್ರಮದಲ್ಲಿ ಖ್ಯಾತ ಧಾರಾವಾಹಿ ನಿರ್ಮಾಪಕ ಟಿ.ಎನ್. ಸೀತಾರಾಂರವರಲ್ಲದೆ ಮಹಿಳಾ ಕಾರ್ಯದಲ್ಲಿ ಕೆಲಸ ಮಾಡಿದ್ದ ಶ್ರೀಮತಿ ಉಮಾರೆಡ್ಡಿ, ಪ್ರೊ॥ ಗೀತಾ ನಾಗಭೂಷಣ್‌ರವರು ಭಾಗವಹಿಸಿದ್ದರು.

ಟಿ.ಎನ್. ಸೀತಾರಾಂ ಶಿಕ್ಷಕಿಯರನ್ನು ಕುರಿತು ಮಾತನಾಡುತ್ತಾ "ಭಾರತದಲ್ಲಿ ಮಹಿಳೆಯರಿಗೆ ಎಂದಿನಿಂದಲೂ ಪೂಜ್ಯಸ್ಥಾನ ನೀಡಲಾಗಿದೆ. ಮಹಿಳೆಯೇ ನಮ್ಮ ಪರಿವಾರದ ಕೇಂದ್ರಬಿಂದು. ಮಗುವಿಗೆ ಮೊದಲ ಗುರುವೂ ಆಕೆಯೇ. ಇಂದಿನ ಪಾಶ್ಚಾತ್ಯವಾದಗಳಿಗೆ ಮನಗೊಡದೆ ನಮ್ಮ ಹೆಣ್ಣು ಮಕ್ಕಳು ಭಾರತದ ವಿಚಾರಗಳನ್ನು ಅಳವಡಿಸಿಕೊಂಡರೆ ಸಮಾಜ ಸ್ವಸ್ಥವಾಗುವುದು" ಎಂದರು.

ಮೈಸೂರು ನಗರದ ಕಾರ್ಯಕ್ರಮದಲ್ಲಿ ತುಮಕೂರು ರಾಮಕೃಷ್ಣ–ವಿವೇಕಾನಂದಾಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ವೀರೇಶ್ವರಾನಂದರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ "ಹೆಣ್ಣು ಮಕ್ಕಳಿಗೊಂದು ವಿಶೇಷ ದಿನವನ್ನು ಆಚರಿಸಿ ಅವರು ಆತ್ಮಾವಲೋಕನ ಮಾಡಿಕೊಳ್ಳಲು ಅನುವು ಮಾಡಿರುವುದು ಸಂತಸದ ಸಂಗತಿ". ಎಂದು ಹೇಳಿ, "ಇಂದು ಸ್ತ್ರೀ ಸ್ವಾತಂತ್ರ್ಯ, ಅದೂ, ಇದೂ, ಎಂದು ಪಾಶ್ಚಾತ್ಯ ವಿಷದ ಗಾಳಿ ನಮ್ಮ ಸಮಾಜದ ಮೇಲೂ ಬೀಸುತ್ತಿರುವುದು ದುರ್ದೈವ. ನಮ್ಮ ಸಮಾಜ ಸ್ತ್ರೀಗೆ ಪುರುಷರಿಗಿಂತ ಹೆಚ್ಚಿನ ಸ್ಥಾನಮಾನವನ್ನು ನೀಡಿದೆ. ಕೇವಲ ಮನೆಯೇ ಅಲ್ಲದೆ, ಜೀವನದ ವಿವಿಧ ಕ್ಷೇತ್ರಗಳಲ್ಲೂ ಆಕೆ ಹೆಸರು ಮಾಡುತ್ತಿದ್ದಾಳೆ. ಇದು ಅತ್ಯಂತ ಸಂತೋಷದಾಯಕವಾದ ಸಂಗತಿ" ಎಂದು ಶಿಕ್ಷಕಿಯರಿಗೆ ತಿಳಿಸಿದರು.

ಮತ್ತೊಂದು ವಿಶೇಷ ಕಾರ್ಯಕ್ರಮವೆಂದರೆ ಬೆಂಗಳೂರಿನಲ್ಲಿ ಅಂದಿನ ವಿದ್ಯಾಮಂತ್ರಿಗಳಾದ ಶ್ರೀಗೋವಿಂದೇಗೌಡರು ಭಾಗವಹಿಸಿದ್ದ ಶಿಕ್ಷಕಿಯರ ಸಮ್ಮೇಳನ. ಸಮ್ಮೇಳನದ ಮುಖ್ಯ ವಿಷಯವೇ 'ಶಿಕ್ಷಕಿಯರ ಸಮಸ್ಯೆಗಳು' ಎಂಬುದಾಗಿತ್ತು. ಬೆಂಗಳೂರು ಚಾಮರಾಜಪೇಟೆಯ 'ಕೇಶವಶಿಲ್ಪ' ಸಭಾಂಗಣದಲ್ಲಿ ನೆರೆದಿದ್ದ ನೂರಾರು ಶಿಕ್ಷಕಿಯರ ಪರವಾಗಿ ಬಿ. ಕೆ. ವರಲಕ್ಷ್ಮಿ, ಸೀತಾಲಕ್ಷ್ಮಿ, ವಾಸುಕಿ ಮುಂತಾದವರು ಹತ್ತು–ಹದಿನೈದು ಬೇಡಿಕೆಗಳ ಮುದ್ರಿತ ಪ್ರತಿಯನ್ನು ನೀಡಿದರು. ಪಟ್ಟಿಯನ್ನು ಓದಿದ ಮಂತ್ರಿಗಳು 'ಶೌಚಾಲಯ ವ್ಯವಸ್ಥೆ ಸರಿಪಡಿಸಿ' ಎಂಬ ಬೇಡಿಕೆ ಓದಿ ಆಶ್ಚರ್ಯಚಕಿತರಾದರು. ನಿಜವಾಗಿ ಅಂದಿನ ದಿನಗಳಲ್ಲಿ ಶಾಲೆಗಳಲ್ಲಿ ಬಾಲಕಿಯರಿಗೆ ಶೌಚಾಲಯದ ವ್ಯವಸ್ಥೆಯೇ ಇರಲಿಲ್ಲ! ಶಿಕ್ಷಕ ಸಂಘ ಇಂತಹ ಸಣ್ಣ ಸಣ್ಣ ವಿಷಯಗಳ ಬಗ್ಗೆ ಗಮನ ಹರಿಸಿ ಅದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದುದು ನನಗೆ ಹೆಮ್ಮೆಯ ಸಂಗತಿ.

ಶಿಕ್ಷಕಿಯರಲ್ಲಿ ಬರಹದ ಗುಣ ಬೆಳೆಸಲು ನಾವು ಯೋಜಿಸಿದ್ದು, 'ಬರಹಗಾರರ ಕಮ್ಮಟ'ಕ್ಕೆ ನಲವತ್ತು ಶಿಕ್ಷಕಿಯರು ಭಾಗವಹಿಸಿದ್ದು, ಇದರ ಯೋಜನೆಯನ್ನು ಮಾಡಿದ ಬಿ. ಕೆ. ವರಲಕ್ಷ್ಮಿ ಮತ್ತು ನಂ.ನಾಗಲಕ್ಷ್ಮಿರವರಿಗೆ ಸಾರ್ಥಕ್ಯದ ಭಾವ ಮೂಡಿಸಿತು. ಏಕೆಂದರೆ ಭಾಗವಹಿಸಿದವರಲ್ಲಿ ಅನೇಕರು ಬರಹದ ಗುಣ ಮೈಗೂಡಿಸಿಕೊಂಡು ಉತ್ತಮ ಬರಹಗಾರರಾಗುವತ್ತ ಧಾವಿಸುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ವಿಷಯತಜ್ಞರಾಗಿ ಭಾಗವಹಿಸಿದ್ದ ಖ್ಯಾತ ಲೇಖಕಿ ಪ್ರೊ॥ ಎಸ್.ಆರ್. ಲೀಲಾ ಹಾಗೂ ವಿಕ್ರಮ ವಾರಪತ್ರಿಕೆಯ ಸಂಚಾಲಕರಾದ ಶ್ರೀ ನ. ನಾಗರಾಜರವರಿಗೆ ಇದರ ಯಶಸ್ಸಿನ ಶ್ರೇಯಸ್ಸು ಸಲ್ಲಬೇಕು.

ನಮ್ಮೆಲ್ಲಾ ಕಾರ್ಯಕ್ರಮಗಳ ಮೂಲಕ ಆಕರ್ಷಿತರಾಗಿ ಹೆಚ್ಚು ಹೆಚ್ಚು ಶಿಕ್ಷಕಿಯರು ನನ್ನೊಂದಿಗೆ ಜೋಡಿಸಿಕೊಂಡಿರುವುದು ನನಗೆ ಸಂತಸದ ಸಂಗತಿ.

## ಶಿಕ್ಷಕ ಸಮಾಚಾರ

**'ಶಿಕ್ಷಕ ಸಮಾಚಾರ'** ನನ್ನದೇ ಮಾನಸಪುತ್ರ. ಸುಮಾರು ಐದು ದಶಕಗಳ ಹಿಂದಿನ ಮಾತು. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳಲ್ಲದೆ ಇತರೇ ಬಗೆಯ ಶಾಲೆಗಳೂ ತಲೆ ಎತ್ತುತ್ತಿದ್ದವು. ಕೆಲವರು ಸೇವಾ ಮನೋಭಾವನೆಯಿಂದ ಶಾಲೆ ತೆರೆದರೆ, ಹಲವರಿಗೆ ಹಣ ಗಳಿಕೆಯೇ ಗುರಿ. ಇಂತಹ ಶಾಲೆಗಳ ಶಿಕ್ಷಕರು ಅಪಾರ ಶೋಷಣೆಗೆ ಒಳಗಾಗುತ್ತಿದ್ದರು. ಅವರೆಲ್ಲಾ ತಮಗಾಗುತ್ತಿದ್ದ ಅನ್ಯಾಯಗಳಿಗೆ, ಶೋಷಣೆಗೆ ಒಗ್ಗಿ ಹೋಗಿದ್ದರು. ಪ್ರತಿಭಟಿಸುವ ದನಿ ಉಡುಗಿ ಹೋಗಿತ್ತು !

ಇನ್ನು ಎಲ್ಲ ಶಾಲೆಗಳಲ್ಲೂ ಸಿಗುತ್ತಿದ್ದ ಶಿಕ್ಷಣ ಮೆಕಾಲೆ ಪ್ರೇರಿತವೇ ಆಗಿತ್ತು. ಸ್ವಂತಿಕೆಗೆ ಅವಕಾಶವಿದ್ದರೂ ದಾಸ್ಯದಲ್ಲೇ ಆನಂದ ಅನುಭವಿಸುವ ಮನಸ್ಥಿತಿ. ಭಾರತೀಯತೆಯ ಸ್ಪರ್ಶ ಲವಲೇಶವೂ ಇಲ್ಲ. ಮೌಲ್ಯಾಧಾರಿತ ಶಿಕ್ಷಣ ನೀಡುವುದಂತೂ ಕನಸಿನ ಮಾತು.

ಶಿಕ್ಷಕರಿಗೆ ಶಿಕ್ಷಣಕ್ಷೇತ್ರದಲ್ಲಿ ಆಗುತ್ತಿದ್ದ ಹೊಸ ಹೊಸ ಸಂಗತಿಗಳ ಅರಿವೇ ಇರುತ್ತಿರಲಿಲ್ಲ. ಅಲ್ಲಲ್ಲಿ ಕೆಲವು ಶಿಕ್ಷಕರು ಮಾಡುತ್ತಿದ್ದ ಹೊಸ ಪ್ರಯೋಗಗಳ ಮಾಹಿತಿ ಅವರಿಗೆ ತಲುಪುತ್ತಿರಲಿಲ್ಲ. ಶಿಕ್ಷಕರಿಗೆ ಶಿಕ್ಷಕಸಂಘದ ಚಟುವಟಿಕೆಗಳನ್ನು ತಿಳಿದುಕೊಳ್ಳುವ ಅವಕಾಶವೂ ಇರಲಿಲ್ಲ. ಇಂತಹ ಸಮಯದಲ್ಲಿ ಈ ಎಲ್ಲ ಕೊರತೆಗಳನ್ನು ನೀಗಿಸಬೇಕೆಂಬ ವಿಚಾರ ನನ್ನ ಜನ್ಮದಾತರಿಗೆ ಅನ್ನಿಸಿದ್ದು ಸಹಜ. ಇದರ ಫಲವಾಗಿ ಶಿಕ್ಷಕಸಂಘದ ಮುಖವಾಣಿಯಾಗಿ, 'ಶಿಕ್ಷಕರಿಂದ, ಶಿಕ್ಷಕರಿಗಾಗಿ, ಶಿಕ್ಷಣದ ಬದಲಾವಣೆಗಾಗಿ' ಎಂಬ ಧ್ಯೇಯವಾಕ್ಯವನ್ನು ಹೊತ್ತ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಎಂಬ ನನ್ನ ಮಾನಸ ಪುತ್ರನನ್ನು ಈ ಜಗತ್ತಿಗೆ 1976ರ ಸೆಪ್ಟೆಂಬರ್‌ನಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಕುಂದಾಪುರದಿಂದ ಹೊರತಂದರು. ಕುಂದಾಪುರದ ಆವೃತ್ತಿಗೆ ಶ್ರೀಮತಿ ಪದ್ಮಾವತಿ ವಿಠಲರಾಯರು ಪ್ರಧಾನ ಸಂಪಾದಕರಾಗಿದ್ದು, ಶಿಕ್ಷಕ ಹೆಚ್.ಎಸ್. ಶ್ಯಾಮಭಟ್ಟರು ಉಪಸಂಪಾದಕರಾಗಿ 1984ರವರೆಗೆ ಎಂಟು ವರ್ಷಗಳ ಕಾಲ ಅದನ್ನು ಬೆಳೆಸಿದರು. ನಾನಾ ಕಾರಣಗಳಿಂದ ಒಂದುವರ್ಷ 1984–85ರಲ್ಲಿ ಅದರ ಪ್ರಕಟಣೆ ನಿಂತಿತ್ತು.

1984ರಲ್ಲಿ ಬೆಂಗಳೂರು ಶಿಕ್ಷಕಕೇಂದ್ರದಿಂದ ಪ್ರೊ॥ ಕೃ.ನರಹರಿಯವರು ವಿಧಾನಪರಿಷತ್ತಿಗೆ ಶಿಕ್ಷಕಪ್ರತಿನಿಧಿಯಾಗಿ ಚುನಾಯಿತರಾದರು. ಜೊತೆಗೆ ಶಿಕ್ಷಕಸಂಘದ ಮೂರನೇ ಅಧ್ಯಕ್ಷರೂ ಆಗಿ ಚುನಾಯಿತರಾದರು. ಸ್ಥಗಿತಗೊಂಡಿದ್ದ ನನ್ನ ಕೂಸಿಗೆ ಜೀವ ತುಂಬುವ ಕೆಲಸವೂ ಪ್ರಾರಂಭವಾಯಿತು.

1985ರ ಆಗಸ್ಟ್‌ನಲ್ಲಿ ಪತ್ರಿಕೆ ಕುಂದಾಪುರದಿಂದ ಬೆಂಗಳೂರಿಗೆ ಧಾವಿಸಿ ಬಂತು. ಪ್ರೊ॥ ಕೃ. ನರಹರಿ ಪ್ರಧಾನಸಂಪಾದಕರಾಗಿ, ವಿಜಯ ಜೂನಿಯರ್ ಕಾಲೇಜಿನ ಪ್ರಾಂಶುಪಾಲರಾಗಿದ್ದ ಅನಂತ ಪದ್ಮನಾಭ ರಾವ್ ಸಂಪಾದಕರಾಗಿ, ಶಿಕ್ಷಕ ಎಚ್.ಎನ್.ಆರ್ ಉಪಸಂಪಾದಕರಾಗಿ ಕಾರ್ಯ ನಿರ್ವಹಿಸಲು ನಿರ್ಧರಿಸಲಾಯಿತು.

1985ರ ಸೆಪ್ಟೆಂಬರ್ ಹತ್ತು, ಮಂಗಳವಾರ ಬೆಂಗಳೂರು ದಕ್ಷಿಣ ಜಿಲ್ಲೆಯ ನ್ಯಾಷನಲ್ ಹೈಸ್ಕೂಲಿನ ಸಭಾಂಗಣದಲ್ಲಿ ಬೆಂಗಳೂರು ಆವೃತ್ತಿಯ ಬಿಡುಗಡೆ

ಸಮಾರಂಭ. ಅಂದಿನ ವಾರ್ತಾ ಸಚಿವರಾಗಿದ್ದ ಜೀವರಾಜ ಆಳ್ವ ಮುಖ್ಯ ಅತಿಥಿಯಾಗಿ ಮಾತನಾಡುತ್ತ, "ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವೆ ಇಂದು ಅಗಾಧ ಕಂದಕವಿದೆ. ವೈಯುಕ್ತಿಕ ಸಂಬಂಧ ಕುಸಿದಿದೆ. ಶಾಲೆಗಳಲ್ಲಿ ಮಕ್ಕಳಿಗೆ ಶಿಸ್ತು, ದೇಶಭಕ್ತಿ ಮುಂತಾದ ಸದ್ಗುಣಗಳ ಸಂಸ್ಕಾರ ಸಿಗುತ್ತಿಲ್ಲ. ನಮ್ಮ ಮಕ್ಕಳಿಗೆ ಸರಿಯಾಗಿ ರಾಷ್ಟ್ರಗೀತೆಯನ್ನೂ ಹಾಡಲು ಬರುವುದಿಲ್ಲ! ನನ್ನ ವೈಯಕ್ತಿಕ ಅನುಭವದಿಂದ ಮನನೊಂದು ಈ ಮಾತನ್ನು ಹೇಳುತ್ತಿರುವೆ. ಶಿಕ್ಷಕರು ಈ ಕೊರತೆಯುನ್ನು ಸರಿಪಡಿಸಬೇಕು. ಈ ಪತ್ರಿಕೆ ಇವರಿಬ್ಬರ ನಡುವಣ ಕಂದಕವನ್ನು ಮುಚ್ಚಿ, ಅವರನ್ನು ಆತ್ಮೀಯ ಬಂಧದಲ್ಲಿ ಬೆಸೆಯುವ ಕೊಂಡಿಯಾಗಲಿ" ಎಂದು ಶುಭ ಹಾರೈಸಿದರು.

'ಶಿಕ್ಷಕ ಸಮಾಚಾರ'ದ ನೂತನ ಆವೃತ್ತಿಯನ್ನು ಬಿಡುಗಡೆ ಮಾಡಿದ 'ಕನ್ನಡಪ್ರಭ' ದೈನಿಕದ ಹಿರಿಯ ವರದಿಗಾರರಾದ ಎನ್.ಎಸ್. ರಾಮಪ್ರಸಾದ್‌ರವರು "ಶಿಕ್ಷಣರಂಗದ ಇಂದಿನ ಎಲ್ಲ ಕುಂದು–ಕೊರತೆಗಳಿಗೆ ಅರ್ಹತೆ ಇಲ್ಲದ ಶಿಕ್ಷಕರನ್ನು ರಾಜಕೀಯ ಕಾರಣಗಳಿಗೆ ಶಿಕ್ಷಕವೃತ್ತಿಗೆ ನೇಮಕ ಮಾಡುತ್ತಿರುವ ಸರ್ಕಾರದ ತಪ್ಪು ನೀತಿಯೇ ಕಾರಣ. ಅನರ್ಹರನ್ನು ನೇಮಿಸಿ ಅವರಿಂದ ಯೋಗ್ಯರ ನಿರ್ಮಿತಿ ಬಯಸುವುದು, 'ಬೇವು ಬಿತ್ತಿ ಮಾವಿಗಾಗಿ ಆಸೆ ಪಟ್ಟಂತೆ' ಎಂದರು. ಮುಂದುವರೆದು "ಈ ಪತ್ರಿಕೆಯು ಶಿಕ್ಷಕ–ಪೋಷಕರ ಸಂಪರ್ಕ ಮಾಧ್ಯಮವಾಗಿ ಕೆಲಸ ಮಾಡಲಿ. ಇವರಿಬ್ಬರ ನೇರ ಭಾಗವಹಿಸುವಿಕೆ ಶಿಕ್ಷಣಕ್ಷೇತ್ರದ ಎಲ್ಲ ಬಂದಳಿಕೆಗಳ ನಿರ್ಮೂಲನಕ್ಕೆ ದಾರಿಯಾಗುತ್ತದೆ. ಶಿಕ್ಷಕ ಸಮಾಚಾರ ಈ ನಿಟ್ಟಿನಲ್ಲಿ ಕೆಲಸಮಾಡಲಿ" ಎಂದು ಪತ್ರಿಕೆಗೆ ಶುಭ ಹಾರೈಸಿದರು. ಪತ್ರಿಕೆಯ ಸಂಪಾದಕರಾದ ಅನಂತ ಪದ್ಮನಾಭರಾವ್ ಪತ್ರಿಕೆಯ ಉದ್ದೇಶ ತಿಳಿಸಿದರು. ಉಪ ಸಂಪಾದಕರಾದ ಎಚ್. ನಾಗಭೂಷಣರಾವ್ ಸ್ವಾಗತಿಸಿದರು. ಕೃ. ನರಹರಿಯವರು ವಂದನಾರ್ಪಣೆ ಮಾಡುತ್ತಾ, "ಈ ಪತ್ರಿಕೆಯನ್ನು ರಾಜಧಾನಿಯಿಂದ ಪ್ರಕಟಿಸುತ್ತಿರುವುದು ಒಂದು ಪ್ರಮುಖ ಹೆಜ್ಜೆ. ಎಲ್ಲರ ಸದಾಶಯವನ್ನು ಪತ್ರಿಕೆ ಪೂರ್ಣಗೊಳಿಸುವುದೆಂಬ ಭರವಸೆ ಇದೆ" ಎಂದರು.

ಪ್ರಾರಂಭವಾದ ಮೂರ್‍ನಾಲ್ಕು ತಿಂಗಳು ಸಂಪಾದಕ ರಾಗಿದ್ದ ಎ.ಪಿ.ಆರ್. ಅನಿವಾರ್ಯ ಕಾರಣಗಳಿಂದ ಸಮಯ ಕೊಡಲಾಗದೆ ಸಂಪಾದನಾ ಕಾರ್ಯವನ್ನು ಸಹ ಸಂಪಾದಕರ ಹೆಗಲಿಗೇರಿಸಿದರು. ಅಂದಿನಿಂದ ಎಚ್.ಎನ್.ಆರ್‌ರವರೇ ಅಘೋಷಿತವಾಗಿ ಸಂಪಾದಕ ಜವಾಬ್ದಾರಿ ನಿರ್ವಹಿಸಬೇಕಾಯಿತು. ಶಿಕ್ಷಕಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದ ಡಿ.ವಿ. ಸತ್ಯನಾರಾಯಣ ಅನೇಕ ವರ್ಷಗಳವರೆಗೆ ಅದರ ಪ್ರಚಾರಕರಾಗಿ ಕಾರ್ಯನಿರ್ವಹಿಸಿದರು.

1985ರಿಂದ 1997ರವರೆಗೆ ಸಂಪಾದಕರಾಗಿದ್ದ ಎಚ್.ಎನ್. ಆರ್ ನಂತರ 1996ರಲ್ಲಿ ಗೆಳೆಯ ಬಿ.ಎಂ. ಶ್ರೀನಿವಾಸಮೂರ್ತಿಗೆ ಜವಾಬ್ದಾರಿ ಹಸ್ತಾಂತರಿಸಿದರು. 2002ರಲ್ಲಿ ಶ್ರೀನಿವಾಸಮೂರ್ತಿಯ ನಿವೃತ್ತಿಯ ನಂತರ ಮತ್ತೆ ಎಚ್.ಎನ್.ಆರ್. ಜವಾಬ್ದಾರಿ ಹೊತ್ತು 2013ರವರೆಗೆ ಒಟ್ಟು ಇಪ್ಪತ್ತೆರಡು ವರ್ಷಗಳು ಪತ್ರಿಕೆಯನ್ನು ಪೋಷಿಸಿ ಸಂಪಾದಕನ ಜವಾಬ್ದಾರಿಯಿಂದ ನಿವೃತ್ತರಾದರು. ಬಿ.ಎಂ. ಶ್ರೀನಿವಾಸಮೂರ್ತಿ ನಿವೃತ್ತರಾದ ನಂತರ, 2021ರ ಆಗಸ್ಟ್‌ನಲ್ಲಿ ತಾವು ಅನಾರೋಗ್ಯ ಪೀಡಿತರಾಗುವವರೆಗೆ ಅಖಂಡ ಹನ್ನೆರಡು ವರ್ಷಗಳ ಕಾಲ ಪತ್ರಿಕೆಯ ವ್ಯವಸ್ಥಾಪಕರಾಗಿ ಪತ್ರಿಕೆ ನಿಲಗೊಡದಂತೆ ನೋಡಿಕೊಂಡವರು ಕಾರ್ಯಾಲಯ ಪ್ರಮುಖರಾಗಿದ್ದ ದಿವಂಗತ ಜಿ.ಎಸ್. ಕೃಷ್ಣಮೂರ್ತಿಯವರು. ಈ ಸಮಯದಲ್ಲಿ ಎಲ್ಲಾ ಹಸ್ತಪ್ರತಿಗಳಿಗೆ ಡಿ. ಟಿ. ಪಿ. ರೂಪ ಕೊಟ್ಟವರು ಕಾರ್ಯಾಲಯದ ಸಹಾಯಕರಾಗಿರುವ ವರಲಕ್ಷ್ಮೀಯವರು. ಇವರೀರ್ವರ ಸಹಕಾರ ಇಲ್ಲದಿದ್ದಲ್ಲಿ ಪತ್ರಿಕೆ ನಿಂತೇಹೋಗುತ್ತಿತ್ತು.

2013ರಿಂದ 2018ರವರೆಗೆ ಸ್ವಾಮಿ ವಿವೇಕಾನಂದ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರಾದ ಎನ್. ನಾಗರಾಜರವರು ಐದು ವರ್ಷಗಳ ಕಾಲ ಅತ್ಯಂತ ಯಶಸ್ವಿಯಾಗಿ ಪತ್ರಿಕೆಯನ್ನು ನಡೆಸಿ, 2018ರಲ್ಲಿ ನನ್ನ

*ವಿವೇಕ ಮತ್ತು ಆತ್ಮವಿಶ್ವಾಸ ಒಂದೇ ನಾಣ್ಯದ ಎರಡು ಮುಖಗಳು.*

ಮಗನನ್ನು ಕನಕಪುರದ ಶಿಕ್ಷಕಿ ಡಿ.ಕೆ. ಮಮತಾರವರ ಮಡಿಲಿಗೆ ಹಾಕಿದರು. ಅವರು ತಾಯಿಯ ಸ್ಥಾನದಲ್ಲಿ ನಿಂತು ನನ್ನ ಪುತ್ರನಿಗೆ ಅಂದ–ಚಂದದ ಉಡುಗೆ–ತೊಡುಗೆಗಳನ್ನು ತೊಡಿಸಿ ಕಣ್ತುಂಬಿಕೊಳ್ಳುವಂತೆ ಪತ್ರಿಕೆಯನ್ನು ಹೊರತರುತ್ತಿದ್ದಾರೆ. ನನಗೀಗ ನನ್ನ ಮಗನ ಬೆಳವಣಿಗೆಯ ಬಗ್ಗೆ ಹೆಮ್ಮೆ ಮೂಡುತ್ತಿದೆ. ಹೆತ್ತವರಿಗೆ ಅದು ಸಹಜಭಾವವೂ ಹೌದಲ್ಲವೇ?


ಆತ್ಮೀಯ ಓದುಗರೇ, ಕಳೆದ ಐವತ್ತೇಳು ವರ್ಷಗಳ ನನ್ನ ಬದುಕಿನ ಚಿತ್ರಣವನ್ನು ನಿಮ್ಮ ಮುಂದೆ ತೆರೆದಿಟ್ಟಿದ್ದೇನೆ. ಒಂದು ವೃತ್ತಿನಿರತ ಸಂಘಟನೆಯು ದೀರ್ಘಕಾಲ ಯಶಸ್ವಿಯಾಗಿ ನಡೆದು ಬಂದದ್ದು ಒಂದು ಸಾಹಸವೇ ಸೈ. ಇದರ ಶ್ರೇಯಸ್ಸು ನನ್ನನ್ನು ಹೊತ್ತು, ಹೆತ್ತು, ಕೈಹಿಡಿದು ನಡೆಸಿ ಇದುವರೆಗೆ ಬೆಳೆಸಿದವರ ಬದ್ಧತೆಯೇ ಕಾರಣ.


ಶಿಕ್ಷಣಕ್ಷೇತ್ರಕ್ಕೆ, ವೃತ್ತಿನಿರತರಿಗೆ, ವಿದ್ಯಾರ್ಥಿಗಳಿಗೆ ಭಾರತೀಯ ಶಿಕ್ಷಣಪದ್ಧತಿಯ ಪರಿಚಯ ಮಾಡಿ ಕೊಡಬೇಕು, ಅದರ ಆಚರಣೆಯಲ್ಲಿ ಅವರೆಲ್ಲಾ ಮುನ್ನಡೆಯಬೇಕು. ಈ ಮೂಲಕ ನಾಡಿನಲ್ಲಿ ಒಂದು ಸ್ವಸ್ಥ ಸಮಾಜವನ್ನು ನಿರ್ಮಿಸಬೇಕು ಎಂಬ ಅವರ ಗುರಿ ಹಾಗೂ ಅದನ್ನು ಸಾಧಿಸಬೇಕೆನ್ನುವ ಅವರ ಛಲವೇ ನನಗೆ ಜೀವ ತುಂಬಿದ್ದು. ಇನ್ನೂ ನೂರಾರು ಕಾರ್ಯಕರ್ತರು, ಸಹಸ್ರಾರು ಶಿಕ್ಷಕರೂ ಸಹರ್ಷ ನನ್ನನ್ನು ಸ್ವೀಕರಿಸಿದ್ದೂ ನನ್ನ ಈವರೆಗಿನ ಬೆಳವಣಿಗೆಗೆ ಕಾರಣ. ಈ ಎಲ್ಲರಿಗೂ ನನ್ನ ಹೃದಯಪೂರ್ಣ ನಮನವನ್ನು ಸಲ್ಲಿಸುತ್ತಾ ನನ್ನ ಜೀವನಗಾಥೆಯನ್ನು ಮುಗಿಸುತ್ತೇನೆ.

## ಶ್ರೀ ಬಾಬ್ ಗಾರ್ಡನ್ ಉದ್ಗಾರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು A.I.S.T.F. ಎಂಬ ರಾಷ್ಟ್ರಮಟ್ಟದ ಶಿಕ್ಷಕ ಸಂಘಟನೆಯೊಂದಿಗೂ, ಅದರ ಮೂಲಕ "ಎಜುಕೇಷನ್ ಇಂಟರ್‌ನ್ಯಾಷನಲ್" (E.I) ಎಂಬ ಜಾಗತಿಕ ಶಿಕ್ಷಕ ಸಂಘಟನೆಯೊಂದಿಗೆ ಸಂಲಗ್ನವಾಗಿತ್ತು. ಈ ಕಾರಣದಿಂದ ನಮ್ಮ ಸಂಘಟನೆಯು "ಕೆನಡಿಯನ್ ಟೀಚರ್ಸ್ ಫೆಡರೇಷನ್" (C.T.F) ಎಂಬ ಕೆನಡಾ ದೇಶದ ಶಿಕ್ಷಕ ಸಂಘಟನೆಯೊಂದಿಗೆ ಒಗ್ಗೂಡಿ ಹಲವು ಕಾರ್ಯಾಗಾರಗಳನ್ನು ದಕ್ಷಿಣ ಭಾರತದ ಎಲ್ಲ ರಾಜ್ಯಗಳ ಅಧ್ಯಾಪಕರಿಗೆ ಮಾಡುತ್ತಿತ್ತು.

ಒಮ್ಮೆ E.I ಮತ್ತು C.T.F ನ ಪ್ರತಿನಿಧಿಯಾಗಿದ್ದ ಬಾಬ್ ಗಾರ್ಡನ್ ಎಂಬ ಶಿಕ್ಷಣ ತಜ್ಞರು ಭಾರತಕ್ಕೆ ಬಂದು ಎಲ್ಲ ರಾಜ್ಯಗಳ ಶಿಕ್ಷಕ ಸಂಘಟನೆಗಳನ್ನು ಅಧ್ಯಯನ ಮಾಡಿ ಕರ್ನಾಟಕಕ್ಕೆ ಬಂದು ಮಾಧ್ಯಮಿಕ ಶಿಕ್ಷಕ ಸಂಘದ ಚಟುವಟಿಕೆಗಳನ್ನು ಕಂಡು, ಕೇಳಿ **"KRMSS has leaders who are committed to teachers cause. They have good relation with the government and education department. Its leaders have solved many problems of teachers, to enhance the capabilities of teachers they have conducted various training programs, hence I call "K R M S S is a 'light house organization' among all the teachers organizations"** ನಮ್ಮ ಶಿಕ್ಷಕ ಸಂಘದ ಬಗ್ಗೆ ಈ ರೀತಿ ಉದ್ಗರಿಸಿದ್ದು ನಮಗೆ ಹೆಮ್ಮೆಯ ವಿಷಯ.



*With Best Compliments from*

# Dr. Indresh



**Pandavapura Samaja Sevakaru**

**BJP Mukandaru**

**Mandya University**
**Academic Council Member.**






**Sujatha Krishna**
Founder Secretary.

# 'ಇಂಡಿಯಾ'ದಿಂದ 'ಭಾರತ'ದೆಡೆಗೆ

– ಕೃ. ನರಹರಿ
ವಿಧಾನಪರಿಷತ್ತಿನ ಮಾಜಿ ಸದಸ್ಯರು,
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ
ಸಂಘದ ಮಹಾಪೋಷಕರು



ಭಾರತದ ಗುಲಾಮಗಿರಿಯ ಸಂಕೇತವಾದ ಶಬ್ದ 'ಇಂಡಿಯಾ' ಹೋಗಿ ಅದು 'ಭಾರತ' ಆಗಬೇಕಾದರೆ ಪ್ರಮುಖವಾಗಿ ಕೆಳಗಿನ ಎರಡು ಮಾನಸಿಕತೆಗಳನ್ನು ನಾವು ಸುಧಾರಿಸಿಕೊಳ್ಳಬೇಕಾಗಿದೆ. ಮೇಲಿನ ಕಲ್ಪನೆಯು ಸಾಕಾರವಾಗಲು ಅಡ್ಡಿಬರಬಹುದಾದ, ನಮ್ಮಲ್ಲಿ ಕೆಲವರನ್ನು ಇನ್ನೂ ಆವರಿಸಿರುವ ಹಾಗೂ ಪ್ರಭಾವಗೊಳಿಸಿರುವ Mecaulayism, Materialism ಮತ್ತು Minorityism ಈ ಅಂಶಗಳನ್ನು ತೀವ್ರವಾಗಿ ನಾವು ದೂರಮಾಡಬೇಕು. ಇದು ನಾವು ಮಾಡಬೇಕಾಗಿರುವ ಕೆಲಸಗಳಲ್ಲಿ ಮೊದಲನೆಯದು.

**ಅ) ಮೆಕಾಲೆಯಿಸಂ:**

ಆಂಗ್ಲರು ಭಾರತವನ್ನು ಆಕ್ರಮಿಸಿದ ಮೇಲೆ ಭಾರತದ ಅಂತಃ ಶಕ್ತಿಗಳಾದ ಹೆಸರು, ಸಂಸ್ಕೃತಿ, ಸಂಸ್ಕಾರ, ಜ್ಞಾನ–ವಿಜ್ಞಾನಗಳನ್ನು ನಮ್ಮ ಮನೋಬುದ್ಧಿಗಳಿಂದ ದೂರ ಸರಿಸಬೇಕಾಗಿತ್ತು.

ಭಾರತ ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಉದ್ಯೋಗ, ಗಣಿತ, ಖಗೋಳಶಾಸ್ತ್ರ, ಕಲೆ, ಭಾಷಾಶಾಸ್ತ್ರ, ತತ್ವಜ್ಞಾನ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಉದ್ಯೋಗ, ಗಣಿತ, ಖಗೋಳಶಾಸ್ತ್ರ, ಕಲೆ ಭಾಷಾಶಾಸ್ತ್ರ, ತತ್ವಜ್ಞಾನ, ಪ್ರಮುಖವಾಗಿ ಆಧ್ಯಾತ್ಮಿಕತೆ ಇತ್ಯಾದಿ. ಎಲ್ಲ ಕ್ಷೇತ್ರಗಳಲ್ಲೂ ಅನೇಕ ಸಾಧಕರ ಆಳವಾದ ಅಭ್ಯಾಸ, ಚಿಂತನೆ, ಅನುಭವಗಳ ಪರಿಪಾಕ ಗಣನೀಯ ಹಾಗೂ ಮಹತ್ವದ ಸಾಧನೆಗಳನ್ನು ತನ್ನದೇ ಪ್ರಯತ್ನಗಳಿಂದ ನಾವು ಮರೆಯುವಂತೆ ಹಾಗೂ ನಮಗೆ ಕೀಳರಿಮೆ ಬರುವಂತೆ ಮಾಡಲು ಮೆಕಾಲೆ ಶಿಕ್ಷಣ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆ. ಯುರೋಪಿನ ಪಾಶ್ಚಾತ್ಯ ಜೀವನ ಶೈಲಿ, ನಡೆ, ನುಡಿ, ಭಾಷೆಗಳು, ಜ್ಞಾನ, ವಿಜ್ಞಾನಗಳು ಶ್ರೇಷ್ಠ. ನಾವು ಅನಾಗರೀಕರು ಎಂಬ ಕೀಳರಿಮೆಯನ್ನು ಆಂಗ್ಲರು ನಮ್ಮಲ್ಲಿ ನಿರ್ಮಿಸಿದ್ದಾರೆ. ಭಾರತದ ಶ್ರೇಷ್ಠ ಜ್ಞಾನ–ವಿಜ್ಞಾನಗಳನ್ನು ಪರಿಚಯಿಸುವ ಸಂಸ್ಕೃತ ಭಾಷೆಯನ್ನು ಉದ್ದಿಶ್ಯಪೂರ್ವಕವಾಗಿ ಕಡೆಗಣಿಸಿ ಅದರ ಬಗ್ಗೆ ವಿವಾದ ನಿರ್ಮಿಸಿದ್ದಾರೆ. ಭಾರತದ ವಿಜಯದ ಇತಿಹಾಸವನ್ನು ಮುಚ್ಚಿಟ್ಟು, ಕೇವಲ ಸೋಲಿನ ಸುಳ್ಳುಸರಣಿಗಳನ್ನೇ ಪೋಣಿಸಿ ನಮ್ಮ ಆತ್ಮವಿಶ್ವಾಸವನ್ನು ಕುಗ್ಗಿಸಲು ಯತ್ನಿಸಿದ್ದಾರೆ. ನಮ್ಮ ಸಮಾಜದಲ್ಲಿ ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ, ಆರ್ಯ–ದ್ರಾವಿಡ, ಉತ್ತರ–ದಕ್ಷಿಣ, ಜಾತಿ–ಭೇದ, ಭಾಷಾ–ಭೇದ ಇತ್ಯಾದಿ ಒಡಕುಗಳನ್ನು ವಿಜೃಂಭಿಸಿ ದೇಶದ ಏಕತೆ– ಸಮಗ್ರತೆಗಳಿಗೆ ಕಂಟಕ ತಂದಿದ್ದಾರೆ. ಅಲ್ಪಸಂಖ್ಯಾತರನ್ನು ದೇಶದ ಮುಖ್ಯ ಪ್ರವಾಹದಿಂದ ದೂರ ಮಾಡಿ ದೇಶದ ವಿರುದ್ಧ ಎತ್ತಿಕಟ್ಟಲು ಯತ್ನಿಸಿದ್ದಾರೆ. ಈ ರೀತಿ ಮೆಕಾಲೆಯಿಸಂನಿಂದ ಆಗಿರುವ ಪಾಪಗಳನ್ನು ಎಷ್ಟು ವಿವರಿಸಿದರೂ (imperialistic mindset) ಇವುಗಳನ್ನು ತೊಡೆದು ಹಾಕಬೇಕಾಗಿದೆ. ನೈಜ ಭಾರತದ ಗುರುತು, ಮೌಲ್ಯಗಳನ್ನು ಎತ್ತಿಹಿಡಿದು ಸಮಾಜದಲ್ಲಿ ಸರ್ವರಿಗೂ ಭಾರತೀಯ ಸಂಸ್ಕಾರಗಳನ್ನು ನೀಡುವ ಪ್ರಯತ್ನಗಳನ್ನು ಹೆಚ್ಚು ಹೆಚ್ಚು ವಿಸ್ತರಿಸಬೇಕಾಗಿದೆ.

**ಆ) ಮೆಟೀರಿಯಲಿಸಂ: (ಭೌತಿಕವಾದ)**

ವಿಶ್ವದಲ್ಲಿ ಒಂದು ಕಾಲದಲ್ಲಿ ಪ್ರಸರಿಸಿದ ಕಮ್ಯೂನಿಸಂ, ಸೋಷಿಯಲಿಸಂ, ಕ್ಯಾಪಿಟಲಿಸಂ ಇವೆಲ್ಲಾ ಲೌಕಿಕ ಮತ್ತು ಭೌತಿಕ ವಾದಗಳೇ, ಈಗಲೂ ಕೆಲವರಲ್ಲಿ ವಿಶೇಷವಾಗಿ ವಿಕೃತ ವಿಚಾರವಾದಿಗಳು ಇಂತಹವರಲ್ಲಿ ಇವು ಜೀವಂತವಾಗಿದ್ದು ಸಮಾಜದಲ್ಲಿ ಅನೇಕ ಗೊಂದಲಗಳನ್ನು ವಿಕೃತಿಗಳನ್ನು ನಿರ್ಮಿಸಲು ಯತ್ನಿಸುತ್ತಿವೆ. ಇಂತಹವರಿಂದ ಪ್ರಭಾವಿತರಾಗಿರುವ ಪತ್ರಿಕೆಗಳು, ದೃಶ್ಯ ಮಾಧ್ಯಮಗಳು, ಸಾಹಿತ್ಯಗಳಲ್ಲಿ ಇವುಗಳನ್ನು ಪ್ರತಿಬಿಂಬಿಸಿ ಸಮಾಜದ ಮಾನಸಿಕತೆಯನ್ನು

ದೇಶದ ಹಿತದೃಷ್ಟಿಯಿಂದ ದೂರ ಮಾಡಲು ಯತ್ನಿಸುತ್ತಿವೆ. ಇವುಗಳ ಬಗ್ಗೆ ಎಚ್ಚರ, ಅರಿವು ಅಗತ್ಯ. ಈ ಅಂಶದಲ್ಲೂ ಪಾಶ್ಚಾತ್ಯದೇಶಗಳ ಹಾಗೂ ವಸಾಹತು ಶಾಹೀ ಮಾನಸಿಕತೆಯಿಂದ ಪ್ರಭಾವಿತರಾಗಿರುವವರ ಪಾತ್ರ ಇದೆ. ಇದರಿಂದ ನಮ್ಮ ಕೌಟುಂಬಿಕ ಪದ್ಧತಿಗೆ ಪೆಟ್ಟು ಬಿದ್ದಿದೆ. ವ್ಯಕ್ತಿಗಳಲ್ಲಿ ಹೆಚ್ಚು ಹೆಚ್ಚು ವೈಯಕ್ತಿಕತೆ (Individualistic) ಸ್ವಾರ್ಥ, ಸ್ವಪ್ರತಿಷ್ಠೆಗಳು ಹೆಚ್ಚುತ್ತಿವೆ. ಅಮಾಯಕರ ಶೋಷಣೆ ಹೆಚ್ಚಲು ಅವಕಾಶವಾಗಿದೆ. ಕಾಮ, ಕ್ರೋಧ, ಮದ, ಲೋಭ, ಮೋಹ ಮಾತ್ಸರ್ಯ ಗಳು ಹೆಚ್ಚಾಗಿವೆ. ಪರಿಣಾಮವಾಗಿ ಮನಃಶಾಂತಿ ದೂರವಾಗಿದೆ. ಆರ್ಥಿಕ ಪೈಪೋಟಿ ಹೆಚ್ಚಾಗಿದೆ. ಮನುಷ್ಯನ ಮಾನಸಿಕ ಸಂತುಲನ ನಾಶವಾಗುತ್ತಿದೆ. ಜನ ಕರ್ತವ್ಯ, ಮೌಲ್ಯಗಳಿಂದ ದೂರವಾಗುತ್ತಿದ್ದಾರೆ. ತಾವು–ತಮ್ಮ ಸುಖ ಇದೇ ಪ್ರಧಾನವಾಗುತ್ತಿದೆ.

ಸಾಮೂಹಿಕ ಜೀವನದ ಹಿತದೃಷ್ಟಿಯಿಂದ ಮೇಲಿನ ಮಾನಸಿಕತೆ ದೊಡ್ಡ ತೊಡಕಾಗಿದೆ.

**Minoritylism : ಅಲ್ಪಸಂಖ್ಯಾತರ ತುಷ್ಟೀಕರಣ**

ಈಗಂತೂ ಅನೇಕ ರಾಜಕೀಯ ಪಕ್ಷಗಳಿಗೆ ಮತದ ದೃಷ್ಟಿಯೇ ಪ್ರಧಾನ. ಅಲ್ಪಸಂಖ್ಯಾತರ ವೋಟ್‌ಬ್ಯಾಂಕ್




ನಿರ್ಮಾಣ ಇವರೆಲ್ಲರ ಗುರಿ ಇವರಿಗೆ ದೇಶ, ಸಮಾಜಹಿತ ಎಲ್ಲಾ ಗೌಣ. ಮತಕ್ಕಾಗಿ ದೇಶ, ಸಮಾಜಹಿತ, ಪರಂಪರೆ ರಕ್ಷಣೆ, ದೇವರು–ದೇವಮಂದಿರಗಳು, ದೇಶೀಯ ಭಾವನೆಗಳು ನಮ್ಮ ದರ್ಶನಗಳು ಎಲ್ಲಕ್ಕೂ ತಿಲಾಂಜಲಿ ಕೂಡುವ ದುಷ್ಟ ಮಾನಸಿಕತೆ. ದೇಶದ್ರೋಹಿಗಳಿಗೇ ಬೆಂಬಲ ಕೊಡುವುದು. ಮಾನ, ಮರ್ಯಾದೆ, ಕರ್ತವ್ಯ ಎಲ್ಲವೂ ಅನಗತ್ಯ, ರಾಜಾರೋಷವಾಗಿ ಸುಳ್ಳುಗಳ ಕಂತೆ ಜೋಡಿಸಲು ಸಿದ್ಧ, ದೇಶ ಒಡೆದರೂ, ಬಹುಸಂಖ್ಯಾತರಿಗೆ ಎಷ್ಟೇ ಕಷ್ಟ, ಸಂಕಟ, ಸಾವು, ನೋವುಗಳು ಬಂದರೂ ಪರವಾಗಿಲ್ಲ. ಅಲ್ಪಸಂಖ್ಯಾತರ ಮತ ಬಂದರೆ ಸಾಕು. ಇದೇ ಮೈನಾರಿಟಿ ಇಸಂ.

ಕಾಂಗ್ರೆಸ್ಸಿನ ಪೂರ್ಣ ಇತಿಹಾಸವೇ ಅಲ್ಪಸಂಖ್ಯಾತರ ತುಷ್ಟೀಕರಣದ್ದು. ಅಖಂಡ ಭಾರತವನ್ನು ತ್ರಿಖಂಡ ಮಾಡಿದ್ದು ಕಾಂಗ್ರೆಸಿನ ಈ ತುಷ್ಟೀಕರಣ ಮಾನಸಿಕತೆಯೇ. ಕಾಶ್ಮೀರ ಸಮಸ್ಯೆಯನ್ನು ನೆಹರೂ ಹುಟ್ಟುಹಾಕಿದ್ದು. ಈ ಮಾನಸಿಕತೆಯಿಂದಲೇ. ವಿಭಜನೆ, ಸಮೂಹದಲ್ಲಿ ಹಾಗೂ ಕಾಶ್ಮೀರದಲ್ಲಿ ಲಕ್ಷಾಂತರ ಹಿಂದೂಗಳಿಗೆ ಆದ ಚಿತ್ರಹಿಂಸೆ, ಕೊಲೆ, ಹಿಂದೂ ಮಾತಾ ಭಗಿನಿಯರ ಮಾನಹಾನಿ ಇವ್ಯಾವುದಕ್ಕೂ ಕಾಂಗ್ರೆಸ್ ಮತ್ತು ವಾಮ ಪಂಥೀಯರಿಗೆ ಸ್ವಲ್ಪವೂ ಪಶ್ಚಾತ್ತಾಪವಿಲ್ಲ. ಅಲ್ಪಸಂಖ್ಯಾತ ತುಷ್ಟೀಕರಣದ ಕಾರಣ ಭಯೋತ್ಪಾದನೆ ಹೆಚ್ಚಿದೆ. ಮತಾಂತರ ಹೆಚ್ಚಿದೆ. ಅಲ್ಪಸಂಖ್ಯಾತರ ಮದ ಹೆಚ್ಚಿದೆ. ದೇಶ ಒಡೆಯುವ ಧೈರ್ಯ ಹೆಚ್ಚಿದೆ. ಕಾಂಗ್ರೆಸ್ ಕಾರಣದಿಂದ ಅಲ್ಪ ಸಂಖ್ಯಾತರು ದೇಶದ ಪ್ರಥಮ ದರ್ಜೆ ಪ್ರಜೆಗಳು, ಅವರು ವಿಶೇಷ ಸೌಲಭ್ಯಗಳು ಹಕ್ಕುಗಳಿಗೆ ಅರ್ಹರು. ಪ್ರಿವಿಲೇಜ್ಡ್ ಕ್ಲಾಸ್ ಆಗಿದ್ದಾರೆ. ಇವರಿಗೆ ಇರುವ ವಿಶೇಷ ಸೌಲಭ್ಯಗಳು ಬಹುಸಂಖ್ಯಾತ ಹಿಂದೂಗಳಿಗಿಲ್ಲ. ಅಲ್ಪಸಂಖ್ಯಾತರಿಗೆ ರೋಸ್ಟರ್ ಪದ್ಧತಿ ಅನ್ವಯ ಇಲ್ಲ. ಆರ್‌ಟಿಇ ಅನ್ವಯ ಇಲ್ಲ. ಹೆಚ್ಚು ಸ್ತ್ರೀಯರನ್ನು ಮದುವೆಯಾಗಿ ಹೆಚ್ಚು ಮಕ್ಕಳನ್ನೂ ಪಡೆಯಬಹುದು. ಬಜೆಟ್‌ಗಳಲ್ಲಿ ಇವರಿಗೆ ವಿಶೇಷ ಹಣ ಮಂಜೂರು, ಶಾಲೆಗಳಲ್ಲಿ ಅವರವರ ಧರ್ಮ ಬೋಧಿಸಲು ಅವಕಾಶ–ಜಾತ್ಯತೀತತೆ ಕೇವಲ ಬಾಯಲ್ಲಿ ಮಾತ್ರ. ದೇಶ ದ್ರೋಹೀ ಚಟುವಟಿಕೆ ಮುಂದುವರೆಸಲು ಕೆಲವರಿಗೆ ಪ್ರೋತ್ಸಾಹ ನೀಡಲಾಗುತ್ತದೆ.

ಈ ರೀತಿ ಮೈನಾರಿಟಿ ಇಸಂ ದೇಶಕ್ಕೆ ಅತ್ಯಂತ ಅಪಾಯಕಾರಿ ಆಗಿದೆ. ಈ ಮಾನಸಿಕತೆಯನ್ನು ನಾವು ಸ್ಪಷ್ಟಪಡಿಸಬೇಕಾಗಿದೆ.


ಈ ರೀತಿ ಮೊದಲ ಭಾಗವಾಗಿ Mecauslayism, Materialism ಮತ್ತು Minorityism ಇವುಗಳಿಂದ ನಮ್ಮ ಸಮಾಜಕ್ಕೆ ಆಗುವ ಅಪಾಯಗಳ ಬಗ್ಗೆ ಜನರನ್ನು ಎಚ್ಚರಿಸುವ ಶಿಕ್ಷಣ ಕೂಡ ಬೇಕಾಗಿದೆ.

ಎರಡನೆಯ ಅಂಶವಾಗಿ ನಮ್ಮ ಸಮಾಜದಲ್ಲಿ ನಿಶ್ಚಿತ ಬದಲಾವಣೆ ತರುವುದಕ್ಕಾಗಿ ನಾವು ಅನಿವಾರ್ಯವಾಗಿ ವ್ಯಕ್ತಿತ್ವ ವಿಕಸನದ ಮಹತ್ತ್ವದ ಕಾರ್ಯವನ್ನು ಸಮಾಜ ಸುಧಾರಣೆಗೆ ಸಾಧನವಾಗುವಂತೆ ಸಂಸ್ಕಾರ ಮತ್ತು ಸೂಕ್ತ ವಾತಾವರಣ ನಿರ್ಮಿಸುವ ಮೂಲಕ ಸಾಧಿಸಬೇಕಾಗಿದೆ.

ಮಾಹಿತಿ ಶಿಕ್ಷಣದ ದೃಷ್ಟಿಯಿಂದ ವೃತ್ತಿ ಕ್ಷೇತ್ರದಲ್ಲಿ ನಿಪುಣತೆ, ಕೌಶಲ್ಯ, ಸಾಮರ್ಥ್ಯ, ಪರಿಶ್ರಮ, ಸಂಶೋಧನಾ ಪ್ರವೃತ್ತಿ ಇತ್ಯಾದಿ ಕ್ಷಮತೆಗಳನ್ನು ಹೆಚ್ಚಿಸಲು ಪ್ರಶಿಕ್ಷಣ ವ್ಯವಸ್ಥೆಗಳನ್ನು ಮಾಡಬೇಕಾಗಿದೆ.

ವ್ಯಕ್ತಿ ವಿಕಸನದ ದೃಷ್ಟಿಯಿಂದ ವೈಯುಕ್ತಿಕ ಮೌಲ್ಯ ಭಾರತೀಯ ಕೌಟುಂಬಿಕ ಮೌಲ್ಯ, ಸಾಮಾಜಿಕ ಮೌಲ್ಯ, ರಾಷ್ಟ್ರೀಯ ಮೌಲ್ಯ ಮತ್ತು ನಮ್ಮ ದರ್ಶನಗಳು ಮತ್ತು ಮೌಲ್ಯಗಳನ್ನು ಮೈಗೂಡಿಸಲು ಮಹತ್ತ್ವ ನೀಡಬೇಕಾಗಿದೆ. ಈ ಮೌಲ್ಯಗಳ ಸಂಸ್ಕಾರ ಸಿಕ್ಕುವ ವಾತಾವರಣ ನಿರ್ಮಿಸಬೇಕಾಗಿದೆ. ಮಾನವೀಯ ಮೌಲ್ಯಗಳು, ಸಮಾನತೆ–ಸಮನ್ವಯದ ಮನೋಭೂಮಿಕೆ, ಇತರರ ಬಗ್ಗೆ ಕಾಳಜಿ, ಅವಕಾಶ ವಂಚಿತರನ್ನು ಮೇಲೆತ್ತುವುದು, ಅಂಗವಿಕಲತೆ, ವಯಸ್ಸಾದವರು ಇವರ ಬಗ್ಗೆ ಅನುಕಂಪ, ನಿಸ್ವಾರ್ಥತೆ, ಪರಿಸರ ಪ್ರಜ್ಞೆ ಅನುಶಾಸನ, ಕರ್ತವ್ಯಪ್ರಜ್ಞೆ ಇತ್ಯಾದಿ ಅಂಶಗಳ ಬಗ್ಗೆ ಜಾಗೃತಿ ನಿರ್ಮಿಸಬಲ್ಲ ಸಂಸ್ಕಾರ ಸಿಕ್ಕುವಂತಹ ಪರಿಸರ ನಿರ್ಮಿಸಬೇಕಾಗಿದೆ.

ಪ್ರಾಯಶಃ ಸಂಕ್ಷಿಪ್ತವಾಗಿ ಮೇಲಿನ ಅಂಶಗಳ ಸೂಕ್ತ ಅಳವಡಿಕೆ 'ಇಂಡಿಯಾ'ವನ್ನು 'ಭಾರತ'ವನ್ನಾಗಿ ಪರಿವರ್ತಿಸಲು ಸಹಾಯವಾಗಬಹುದು.



# ಸ್ವಾತಂತ್ರ್ಯ ಪ್ರಾಪ್ತಿ – ಸಿಹಿ ಮತ್ತು ಕಹಿ




– ಬಾಲಕೃಷ್ಣ ಭಟ್
Ex-MLC, ಸುರತ್ಕಲ್

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಆದ ಈ ಶುಭ ಸಂದರ್ಭದಲ್ಲಿ ಸ್ವಾತಂತ್ರ್ಯದ ಅಮೃತದ ಸವಿಯನ್ನು ನಾವೆಲ್ಲರೂ ಸವಿಯುತ್ತಿದ್ದು, ಅದನ್ನು ಸುತ್ತಲಿನ ಎಲ್ಲರಿಗೂ ಹಂಚಬೇಕಾಗಿದೆ. ನಮ್ಮ ದೇಶವನ್ನು ಇಲ್ಲಿನ ಸಂಪತ್ತಿಗಾಗಿ, ಎಲ್ಲೂ ಸಿಗದ ಅನೇಕ ಸುವಸ್ತುಗಳಿಗಾಗಿ ವಿದೇಶೀಯರು ಆಕ್ರಮಿಸಿದ್ದುದು ತಾವೆಲ್ಲ ಪುಸ್ತಕಗಳಲ್ಲಿ ಓದಿರಬಹುದು. ಮೊಗಲರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು ಮತ್ತು ಕೊನೆಗೆ ಬ್ರಿಟಿಷರು ಈ ದೇಶಕ್ಕೆ ಬಂದು ಇಲ್ಲಿಯ ಸಂಪತ್ತನ್ನು ಲೂಟಿ ಮಾಡಿ ತಮ್ಮ ದೇಶಕ್ಕೆ ಹೊತ್ತೊಯ್ದುದು ಮಾತ್ರವಲ್ಲದೆ ಇಲ್ಲಿಯ ಸನಾತನ ಸಂಸ್ಕೃತಿಯನ್ನು ನಾಶ ಮಾಡುವ ಕೆಲಸ ಮಾಡಿದರು. ಅವರ ಭಾಷೆಯನ್ನು ನಮ್ಮ ಮೇಲೆ ಹೇರುವ ಪ್ರಯತ್ನ ಮಾಡಿದರು. ಅವರ ಜೀವನ ಪದ್ಧತಿಯನ್ನು ನಾವು ಭಾರತೀಯರು ಅನುಸರಿಸುವಂತೆ ಸರ್ವಪ್ರಯತ್ನ ಮಾಡಿದರು. ಈ ವಿದೇಶೀ ಆಕ್ರಮಣಕಾರರು ನಮ್ಮ ದೇಶಕ್ಕೆ ಬರುವುದರ ಮೊದಲು ಸಾವಿರಾರು ವರ್ಷಗಳಿಂದಲೂ ಈ ದೇಶ ಅತ್ಯಂತ ಶ್ರೇಷ್ಠ ಮತ್ತು ಸಂಪದ್ಭರಿತವಾಗಿತ್ತು ಎಂಬುದು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ. ಆರ್ಯಭಟ, ವರಾಹ ಮಿಹಿರ, ಬೋಧಾಯನ, ಸುಶ್ರುತ, ವಾಗ್ಭಟ–ಇನ್ನೂ ಅನೇಕ ವಿಜ್ಞಾನಿಗಳು ಇಲ್ಲಿ ಜನಿಸಿ ವಿಶ್ವಕ್ಕೆ ಜ್ಞಾನವನ್ನು ಹಂಚಿದ್ದರು. ಗಣಿತ, ವಿಜ್ಞಾನ, ತಂತ್ರಜ್ಞಾನ ಇವುಗಳ ಕಲಿಕೆಯಲ್ಲಿ ಅತ್ಯಂತ ಮೂಲಭೂತವಾದ ಸೊನ್ನೆ(‘o’)ಯನ್ನು ಮೊದಲಿಗೆ ಕಂಡು ಹಿಡಿದವರು ಭಾರತೀಯರೇ ಎಂದು ತಿಳಿಯುವಾಗ ನಮಗೆ ನಮ್ಮವರ ಬಗ್ಗೆ ಹೆಮ್ಮೆ ಮೂಡುವುದಿಲ್ಲವೇ?

ವಿಶ್ವದ ಯಾವುದೇ ದೇಶದ ಜನರು ಅನಾಗರಿಕರಾಗಿ ಗುಡ್ಡಗಾಡುಗಳಲ್ಲಿ ಅಲೆಯುತ್ತಿರುವಾಗ ನಮ್ಮ ದೇಶ ವಿಶ್ವಕ್ಕೆ ಆದಿಕಾವ್ಯ ರಾಮಾಯಣವನ್ನು ನೀಡಿತ್ತು. ಪ್ರಪಂಚದಲ್ಲೇ ಅತ್ಯಂತ ಹಿರಿದೂ, ಮಹತ್ವದ್ದೂ ಆಗಿರುವ ಮಹಾಭಾರತ ಗ್ರಂಥ ರಚನೆಯಾದದ್ದು ನಮ್ಮದೇ ದೇಶದಲ್ಲಿ ತಾನೇ? ವಿಶ್ವದ ಎಲ್ಲ ಭಾಷೆಗಳಿಗಿಂತಲೂ ಪುರಾತನವಾಗಿರುವುದು ಭಾರತದ ಸಂಸ್ಕೃತ ಭಾಷೆ ಎಂಬುದನ್ನು ನೆನಪು ಮಾಡಬೇಕಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯವಾಗಿರುವ ಯೋಗ ಮತ್ತು ಆಯುರ್ವೇದ ಶಾಸ್ತ್ರಗಳು ವಿಶ್ವಕ್ಕೆ ನಮ್ಮ ಕೊಡುಗೆಯಾಗಿವೆ.

ವಿಶ್ವದಲ್ಲಿಯೇ ಹಡಗುಗಳನ್ನು ನಿರ್ಮಿಸುವ ವಿದ್ಯೆಯನ್ನು ಮೊದಲಿಗೆ ತಿಳಿದವರು ನಮ್ಮ ಪೂರ್ವಜರು ಎಂಬುದು ನಮಗೆ ತಿಳಿದಿರಬೇಕು. ಲೋಹಶಾಸ್ತ್ರ, ವಿಮಾನಶಾಸ್ತ್ರ, ರಸಾಯನಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ಇನ್ನೂ ಅನೇಕ ಜ್ಞಾನದ ಶಾಖೆಗಳಲ್ಲಿ ನಮ್ಮವರು ವಿಶೇಷ ಪರಿಣತಿಯನ್ನು ಹೊಂದಿದ್ದರು ಎಂಬುದು ಸಂಶೋಧನೆಯಿಂದ ತಿಳಿದು ಬರುತ್ತದೆ.

ಪ್ರಸಿದ್ಧ ಗಾಂಧೀವಾದಿ ಧರ್ಮಪಾಲ್‌ರವರು ಇಂಗ್ಲೆಂಡಿನ ಗ್ರಂಥಾಲಯದಿಂದ ಸಂಗ್ರಹಿಸಿದ ಮಾಹಿತಿಗಳ ಪುಸ್ತಕ ‘The beautiful Tree’. ಇದರಲ್ಲಿ ಬ್ರಿಟಿಷರ ಆಗಮನಕ್ಕಿಂತ ಪೂರ್ವದಲ್ಲಿ ಇಡೀ ಭಾರತ ದೇಶ ಎಷ್ಟೊಂದು ಸಮೃದ್ಧವಾಗಿತ್ತು, ಎಷ್ಟೊಂದು ಸುಶಿಕ್ಷಿತವಾಗಿತ್ತು ಎಂಬುದನ್ನು ದಾಖಲೆಗಳ ಸಹಿತ ಪ್ರಸ್ತುತ ಪಡಿಸಿದ್ದಾರೆ.




ಧರ್ಮಪಾಲ್‌ರವರ ‘ದಿ ಬ್ಯೂಟಿಫುಲ್ ಟ್ರೀ’

ಭಾರತದ ಶಿಕ್ಷಣ, ಆರ್ಥಿಕತೆ ಮತ್ತು ಸಾಂಸ್ಕೃತಿಕ

ದೃಢತೆ ಎಷ್ಟೊಂದು ಅಪೂರ್ವವಾಗಿತ್ತು ಎಂಬುದನ್ನು ತೋರಿಸಲು ಭಾರತವನ್ನು 'The beautiful Tree' ಎಂದು ಗಾಂಧೀಜಿ ಕರೆದಿದ್ದು, ಅದನ್ನು ಆಂಗ್ಲರು ಹಂತ ಹಂತವಾಗಿ ಹೇಗೆ ಹಾಳುಗೆಡವಿದರು ಎಂದೂ ಅದರಲ್ಲಿ ಬರೆದಿದ್ದಾರೆ. ಆ 'ಸುಂದರ ವೃಕ್ಷದ' ಬೇರುಗಳನ್ನು ಒಂದೊಂದಾಗಿ ಹೇಗೆ ತುಂಡರಿಸಿದರು ಮತ್ತು ಕ್ರಮೇಣ ಆ ವೃಕ್ಷ ಹೇಗೆ ನಾಶವಾಯಿತು ಎಂದೂ ತೋರಿಸಿದ್ದಾರೆ.

ಭಾರತದ ಸೇನೆ, ಭಾರತೀಯ ಅಧಿಕಾರಿ ವರ್ಗ ಮುಂತಾದವನ್ನು ಭಾರತದ ವಿರುದ್ಧವೇ ಹೇಗೆ ಬ್ರಿಟಿಷರು ಬಳಸಿಕೊಂಡು 150 ವರ್ಷಗಳ ಕಾಲ ನಮ್ಮನ್ನು ಆಳಿದರು ಮತ್ತು ನಮ್ಮ ಭಾಷೆ ಸಂಸ್ಕೃತಿ ಮುಂತಾದವನ್ನು ಹಾಳುಮಾಡಿದರು ಎಂಬುದನ್ನು ನಮಗೆ ನಮ್ಮ ಪಠ್ಯಪುಸ್ತಕಗಳು ಹೇಳಿಕೊಡಲೇ ಇಲ್ಲ. ನಮ್ಮ ದೇಶ, ಭಾಷೆ, ಸಂಸ್ಕೃತಿ, ಇಲ್ಲಿ ಜನಿಸಿದ ಅನೇಕ ಮಹಾನ್ ವ್ಯಕ್ತಿಗಳ ಬಗ್ಗೆ ನಮಗೆ ಹೆಮ್ಮೆ ಬರುವಂತಹ ಶಿಕ್ಷಣವನ್ನು ಸ್ವಾತಂತ್ರ್ಯಾ ನಂತರವೂ ನಮಗೆ ನೀಡಲೇ ಇಲ್ಲ ಎಂದು ತಿಳಿದಾಗ ನಮ್ಮ ರಕ್ತ ಕುದಿಯದಿರಲು ಸಾಧ್ಯವೇ?

1947ರಲ್ಲಿ ನಮಗೆ ಸ್ವಾತಂತ್ರ್ಯ ನೀಡಿ ಈ ದೇಶ ಬಿಟ್ಟು ಆಂಗ್ಲರು ತಮ್ಮ ದೇಶಕ್ಕೆ ಹಿಂದಿರುಗಲು ಏನೇನು ಸಂಗತಿಗಳು ಕಾರಣವಾದುವು ಎಂದು ನಾವು ತಿಳಿದಿರಬೇಕಲ್ಲವೇ? ಬಹುತೇಕರು ನಮ್ಮ ದೇಶ ಸ್ವತಂತ್ರವಾಗಲು ಗಾಂಧೀಜಿಯವರ ಅಹಿಂಸಾಮಾರ್ಗ ಮತ್ತು ಸತ್ಯಾಗ್ರಹಗಳೇ ಕಾರಣ ಎಂದೇ ತಿಳಿದಿರುವ ಸಾಧ್ಯತೆ ಇದೆ. ವಾಸ್ತವವಾಗಿ ದ್ವಿತೀಯ ಮಹಾಯುದ್ಧದ ನಂತರ ಜಾಗತಿಕ ಪರಿಸ್ಥಿತಿಯಲ್ಲಿ ಉಂಟಾದ ಏರುಪೇರು ಆಂಗ್ಲರು ಭಾರತ ಬಿಟ್ಟು ತೊಲಗಲು ಬೇಕಾದ ವಾತಾವರಣ ಸೃಷ್ಟಿಸಿತು ಎಂಬುದು ಮೂಲ ವಿಷಯ. ಜೊತೆಗೆ ಯುದ್ಧದ ಸಮಯದಲ್ಲಿ ತಾನು ಮಾಡಿದ ವೆಚ್ಚವನ್ನು ಸರಿದೂಗಿಸಿ, ಸಾಲ ಮರುಪಾವತಿಸುವುದೇ ಇಂಗ್ಲೆಂಡಿಗೆ ದುಸ್ತರವಾಗಿತ್ತು. 'ಸೂರ್ಯ ಮುಳುಗದ ಸಾಮ್ರಾಜ್ಯ'ವನ್ನು ಮುನ್ನಡೆಸುವುದಿರಲಿ, ಬ್ರಿಟನ್ನಿಗೆ ತಾನು ಆ ಆರ್ಥಿಕ ಸಂಕಷ್ಟದಿಂದ ಚೇತರಿಸಿಕೊಳ್ಳುವುದೇ ಕಠಿಣ ಎಂಬಂತಹ ಸ್ಥಿತಿ ಇತ್ತು. ಅಂತಹ ಸಮಯದಲ್ಲಿ ವಿದೇಶೀ ನೆಲದಲ್ಲಿ 'ಭಾರತ ರಾಷ್ಟ್ರೀಯ ಸೇನೆ'ಯನ್ನು ಕಟ್ಟಿ ನೇತಾಜಿ ಸುಭಾಷ್‌ಚಂದ್ರ ಬೋಸರು ಬ್ರಿಟಿಷರನ್ನು ಹೊರದಬ್ಬಲು ಮಾಡಿದ್ದ ಸಾಹಸೀ ಪ್ರಯತ್ನ ಬ್ರಿಟಿಷ್ ಸರಕಾರಕ್ಕೆ ಭಾರೀ ಆಘಾತ ನೀಡಿತ್ತು. ಅಂತೆಯೇ ಭಾರತೀಯ ಸೇನೆಯಲ್ಲಿ ಅಪ್ರತಿಮ ಆತ್ಮವಿಶ್ವಾಸ ಉಂಟಾಗಲು ಕಾರಣವಾದುದು ನೇತಾಜಿಯವರ ಈ ಪ್ರಯತ್ನದ ಫಲವೇ ತಾನೇ?



ವೀರಸೇನಾನಿ 'ಮಂಗಲಪಾಂಡೆ'

1946ರಲ್ಲಿ ಮುಂಬಯಿಯಲ್ಲಿ ನಡೆದ ನೌಕಾಸೈನಿಕರ ಬಂಡಾಯ ಬ್ರಿಟಿಷ್ ಸರ್ಕಾರದ ಮಗ್ಗುಲು ಮುರಿದ ಘಟನೆಯಾಯಿತು. ಇದೇ ಅವಧಿಯಲ್ಲಿ ದಿಲ್ಲಿಯಲ್ಲಿ ಪೊಲೀಸರೂ ದಂಗೆಯೆದ್ದರು. ದೇಶದ ವಿವಿಧ ಕಡೆಗಳಲ್ಲಿಯೂ ಸೇನೆ, ನೌಕಾದಳ ಹಾಗೂ ವಾಯುದಳಗಳಲ್ಲಿಯೂ ರಾಷ್ಟ್ರೀಯತೆಯ ಕಿಚ್ಚು ವೇಗವಾಗಿ ಉರಿಯಲಾರಂಭಿಸಿತ್ತು.

## 1857 ರ ಪ್ರಥಮ ಸಶಸ್ತ್ರ ಕ್ರಾಂತಿ

ಇದುವರೆಗಿನ ಶಾಲಾ ಪುಸ್ತಕಗಳಲ್ಲಿ ವಿವರಿಸಲಾಗುತ್ತಿದ್ದ 'ಸಿಪಾಯಿದಂಗೆ'ಯೇ ದೇಶದ ಮೊದಲ ಸಶಸ್ತ್ರಕ್ರಾಂತಿಯೆಂದು ನಮಗೆ ತಿಳಿದಿರಬೇಕು. 1857ರಲ್ಲಿ ನಡೆದ ಈ ಸಶಸ್ತ್ರಕ್ರಾಂತಿಯ ಮೊದಲ ಕಿಡಿ ವೀರಸೇನಾನಿ ಮಂಗಲಪಾಂಡೆ. ಬ್ರಿಟಿಷ್ ಸೇನೆಯ ಒಂದು ರೆಜಿಮೆಂಟಿನ ನಾಯಕನಾಗಿದ್ದವನು ಈ ಮಂಗಲ್‌ಪಾಂಡೆ. ಆತ ಮೈದಾನದಲ್ಲಿದ್ದ ಮೂವರು ಬ್ರಿಟಿಷ್ ಅಧಿಕಾರಿಗಳನ್ನು ಕೊಂದಿದ್ದ. ಅದಕ್ಕೆ ಪ್ರತಿಯಾಗಿ ಅವನನ್ನು ಗಲ್ಲಿಗೇರಿಸಲಾಯಿತು. ಆ ಸಂದರ್ಭದಲ್ಲಿ ಸೇನೆಯ ಯೋಧರು ಮತ್ತು ಜನ ಸಾಮಾನ್ಯರು ಆಂಗ್ಲರನ್ನು ಸಿಕ್ಕಸಿಕ್ಕಲ್ಲಿ ಸಂಹರಿಸಿದರು. ಅದೇ ಕಾಲದಲ್ಲಿ 80ರ ತುಂಬುವಯಸ್ಸಿನ ವೀರಾಗ್ರಣಿ ಬಿಹಾರದ ಕುಂವರಸಿಂಹ ಇತಿಹಾಸ ಸೃಷ್ಟಿಸಿದ ಮಹಾನ್ ಹೋರಾಟಗಾರ ನೆನಿಸಿದ್ದು. 9 ತಿಂಗಳ ಕಾಲ

ಕಂಡಕಂಡಲ್ಲಿ ಬ್ರಿಟಿಷ್ ಸೇನೆಯನ್ನು ಚೆಂಡಾಡಿದ ಈತ ಸೋಲನ್ನೇ ಕಾಣದ ಮಹಾನ್ ಶಕ್ತಿಶಾಲಿ. ತನ್ನ ಎಡಗೈಗೆ ಬ್ರಿಟಿಷರ ಗುಂಡು ತಾಗಿದ ಮೇಲೂ ಧೃತಿಗೆಡದೆ ಬಲಗೈಯಲ್ಲಿರುವ ತನ್ನ ಖಡ್ಗದಿಂದ ಏಟಾದ ಎಡಗೈಯನ್ನೇ ತುಂಡರಿಸಿ ಗಂಗಾ ನದಿಗೆಸೆದ ಧೀರ. ಇಂತಹ ನೂರಾರು ವೀರರ ಹೋರಾಟದ ಕಥೆ ನಮಗೆ ದೊರೆತ ಸ್ವಾತಂತ್ರ್ಯಕ್ಕೆ ಕಾರಣವೆನ್ನದೆ ಕೇವಲ ಸತ್ಯಾಗ್ರಹದಿಂದಲೇ ಸ್ವಾತಂತ್ರ್ಯ ಸಿಕ್ಕಿದೆಯೆಂದರೆ ಅವರ ಆತ್ಮ ನಮ್ಮನ್ನು ಕ್ಷಮಿಸದು.


## ವೀರರಾಣಿ–ಲಕ್ಷ್ಮೀಬಾಯಿ



ಲಕ್ಷ್ಮೀಬಾಯಿ

ವೀರರಾಣಿ ಝಾನ್ಸಿ ಲಕ್ಷ್ಮೀಬಾಯಿಯನ್ನು ಮರೆತು ಸ್ವಾತಂತ್ರ್ಯದ ಕಥೆಯನ್ನೇ ಹೇಳಲಾಗದು. 23 ವರ್ಷದ ವಿಧವೆ ಎಂಟು ದಿನಗಳ ಕಾಲ ಸತತವಾಗಿ ಬ್ರಿಟಿಷರ ವಿರುದ್ಧ ಹೋರಾಡಿ ಕೊನೆಯಲ್ಲಿ ಸೈನಿಕರ ಕಣ್ಣಿಗೆ ಮಣ್ಣೆರಚಿ ಗಂಡು ಡುಗೆಯಲ್ಲಿ ತನ್ನ ದತ್ತುಪುತ್ರನ ಸಹಿತ ಗ್ವಾಲಿಯರ್‌ಗೆ ಪಯಣಿಸುವಾಗ ಬ್ರಿಟಿಷ್ ಸೈನಿಕನ ಗುಂಡಿಗೆ ಬಲಿಯಾದವಳು.

1857ರ ಈ ಕ್ರಾಂತಿಯ ಇನ್ನೊಬ್ಬ ಅಮರ ಸೇನಾನಿಯೇ ತಾತ್ಯಾಟೋಪೆ. ಆಕರ್ಷಕ ವ್ಯಕ್ತಿತ್ವದ, ಎತ್ತರದ ಮೈಕಟ್ಟಿನ, ಚುರುಕು ಮಾತಿನ ತಾತ್ಯಾ ಗೆರಿಲ್ಲಾ ಯುದ್ಧದಲ್ಲಿ ನಿಸ್ಸೀಮ. ತಾತ್ಯಾನಂತಹ ಇನ್ನೂ ಐದು ಮಂದಿ ಇದ್ದಿದ್ದರೆ ಈ ಕ್ರಾಂತಿಯ ಗತಿಯೇ ಬೇರೆಯಾಗುತ್ತಿತ್ತು ಎಂದು ಇತಿಹಾಸ ದಾಖಲಿಸಿದೆ.



ತಾತ್ಯಾಟೋಪೆ

ಸ್ವಾತಂತ್ರ್ಯ ಸಂಗ್ರಾಮದ ಇನ್ನೊಬ್ಬ ಕ್ರಾಂತಿಕಾರಿ ವಾಸುದೇವ ಬಲವಂತ ಫಡ್ಕೆ. ಸೆರೆಮನೆಯಿಂದ ತಪ್ಪಿಸಿಕೊಂಡು ಹದಿನೇಳು ಮೈಲಿ ನಡೆದು ಕೊನೆಗೂ ಮತ್ತೊಮ್ಮೆ ಸೆರೆಸಿಕ್ಕಿ 1882ರಲ್ಲಿ ಸೆರೆಮನೆಯಲ್ಲೇ ಕೊನೆಯುಸಿರೆಳೆದ ಭಾರತಮಾತೆಗೆ ಸಮರ್ಪಿತ ಪುಷ್ಪ.

ಭಾರತದ ಸೇನೆಯಲ್ಲಿ ಉದ್ಯೋಗಿಯಾಗಿದ್ದ ಈತನಿಗೆ ಅವನ ತಾಯಿ ಮರಣಿಸಿದಾಗಲೂ, ನಂತರ ಒಂದು ವರ್ಷದ ವಾರ್ಷಿಕ ಶ್ರಾದ್ಧಕ್ಕೂ ರಜೆ ನೀಡದ ಬ್ರಿಟಿಷ್ ಅಧಿಕಾರಿ ರಿಚರ್ಡ್ ಟೆಂಪಲ್ ಎಂಬುವನ ಮೇಲೆ ಸೇಡು ತೀರಿಸಬೇಕೆಂದು ನಿರ್ಧರಿಸಿದ. ಇದನ್ನರಿತ ಆಂಗ್ಲ ಸರಕಾರ ವಾಸುದೇವನ ಸುಳಿವು ನೀಡಿದವರಿಗೆ ಒಂದು ಸಾವಿರ ಬಹುಮಾನ ನೀಡುವುದಾಗಿ ಪ್ರಕಟಿಸಿತು. ಮರುದಿನವೇ ಸುತ್ತಲಿನ ಜಿಲ್ಲೆಗಳಲ್ಲಿ ಅದೇ ಪ್ರಕಟಣೆಯ ಕೆಳಗೆ "ರಿಚರ್ಡ್ ಟೆಂಪಲ್"ನ ರುಂಡ ಕತ್ತರಿಸಿದವರಿಗೆ ಒಂದೂವರೆ ಸಾವಿರ ಬಹುಮಾನ ನೀಡಲಾಗುವುದೆಂದು ಪ್ರಕಟಿಸಲಾಯಿತು. ಮಹಾರಾಷ್ಟ್ರದ ಜನ ವಾಸುದೇವನ ಇರುವಿಕೆಯ ಬಗ್ಗೆ ಸರಕಾರಕ್ಕೆ ಸುಳಿವು ನೀಡಲೇ ಇಲ್ಲ.

ಕೊನೆಯಲ್ಲಿ ವಾಸುದೇವನ ಬಂಧನಕ್ಕೆ ಡೇನಿಯಲ್ ಎಂಬ ಅಧಿಕಾರಿಯನ್ನು ಸರಕಾರ ನೇಮಿಸಿತು. ವಾಸುದೇವ ಅಲ್ಲಿಂದ ತನ್ನ ಇರುವಿಕೆಯನ್ನು ಯಾರಿಗೂ ಗೊತ್ತು ಮಾಡದೆ ಕರ್ನಾಟಕದ ಗಾಣಗಾಪುರದ ಮಂದಿರವೊಂದರಲ್ಲಿ ಆಶ್ರಯ ಪಡೆದ. ಆದರೆ ವಿಧಿ ಆತನಿಗೆ ಕೈಕೊಟ್ಟಿತ್ತು. ಡೇನಿಯಲ್ ಅಧಿಕಾರಿ ಬಲೆ ಬೀಸಿ ವಾಸುದೇವನನ್ನು ಬಂಧಿಸಿಯೇ ಬಿಟ್ಟ. ಕೊನೆಗೆ ವಿಚಾರಣೆಯ ನಾಟಕವಾಡಿ ಬಂಧನದಲ್ಲಿರಿಸಲಾಯಿತು. ಅಲ್ಲಿಯೇ ವೀರಮರಣವನ್ನಪ್ಪಿದ ಮಹಾನ್‌ವೀರ ಕ್ರಾಂತಿಪುರುಷ ವಾಸುದೇವ ಬಲವಂತ ಫಡ್ಕೆ.

ಪ್ರೀತಿಯ ದೇಶವಾಸಿಗಳೇ, 1947ರಲ್ಲಿ ಈ ದೇಶ ಗಳಿಸಿದ ಸ್ವಾತಂತ್ರ್ಯ ಮಾತೆಯ ಅಡಿದಾವರೆಗಳಿಗೆ ಸಮರ್ಪಿತ ಕ್ರಾಂತಿಪುಷ್ಪಗಳೆಷ್ಟೆಂದು ಹೇಳಲಾಗದು. ಸಹಸ್ರಾರು ಬ್ರಿಟಿಷ್ ಅಧಿಕಾರಿಗಳನ್ನು ತಮ್ಮ ಹೋರಾಟದಲ್ಲಿ ಚೆಂಡಾಡಿ ಭಾರತಮಾತೆಯ ಮುಕ್ತಿಗಾಗಿ ನಗುನಗುತ್ತ ನೇಣುಗಂಬ ಏರಿದ ಮಹಾನ್ ಕ್ರಾಂತಿಕಾರಿಗಳ ಹೆಸರುಗಳನ್ನು ಒಮ್ಮೆಯಾದರೂ ಸ್ಮರಿಸಬಾರದೇ? ನಾವು

ಇಂದು ಸಂತೋಷದ ಜೀವನ ನಡೆಸುವುದಕ್ಕೆ ಕಾರಣಕರ್ತರಾದ ಅದೆಷ್ಟೋ ಮಂದಿ ಕ್ರಾಂತಿಕಾರಿಗಳು ಜೀವನವಿಡೀ ಜೈಲಿನ ಕತ್ತಲೆ ಕೋಣೆಯಲ್ಲಿ ಬಾಳು ಸವೆಸಿದರಲ್ಲ! ನಗುನಗುತ್ತ ನೇಣುಗಂಬವನ್ನೇರಿದರಲ್ಲ! ಈ ಜನ್ಮದಲ್ಲಿ ಸಾಧ್ಯವಾಗದಿದ್ದರೆ ಮುಂದಿನ ಜನ್ಮದಲ್ಲಾದರೂ ಭಾರತದಲ್ಲೇ ಹುಟ್ಟುವಂತೆ ಮಾಡೆಂದು ಈ ಮಂದಿ ಅದೆಷ್ಟು ದೇವರನ್ನು ಬೇಡಿಲ್ಲ!

ಇಂತಹ ಕ್ರಾಂತಿಕಾರಿಗಳೆಲ್ಲರನ್ನೂ ನೆನಪಿಟ್ಟು ಸ್ಮರಿಸುವ ಕಾರ್ಯ ಈಗಲಾದರೂ ಆಗಬೇಡವೇ? ಈ ಮಾಲಿಕೆಯಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ನೇರ ಕಾರಣಕರ್ತರಾದ ಈ ಇಬ್ಬರು ತಾಯಿ ಭಾರತಿಯ ಸುಪುತ್ರರೆಂದರೆ ನೇತಾಜಿ ಸುಭಾಷ್‌ಚಂದ್ರಬೋಸ್ ಮತ್ತು ಸ್ವಾತಂತ್ರ್ಯವೀರ ಸಾವರ್ಕರ್. ಈ ಇಬ್ಬರು ವೀರರ ಹೆಸರಿಗೆ ಅಂಟಿಕೊಂಡಿರುವ 'ನೇತಾಜಿ' ಮತ್ತು 'ವೀರ' ಎಂಬ ವಿಶೇಷಣಗಳು ಅವರಿಗೆ ಜನತೆ ನೀಡಿದ ಗೌರವದ ದ್ಯೋತಕ.

ಆತ್ಮೀಯರೇ, ಈ ದೇಶದ ಪ್ರಧಾನಿಗಳಾದವರು 'ಜೈ ಹಿಂದ್' ಘೋಷಣೆ ಕೂಗಿ ತಮ್ಮ ಸ್ವಾತಂತ್ರ್ಯ ದಿನದ ಭಾಷಣ ಪೂರ್ತಿ ಗೊಳಿಸುವುದನ್ನು ನೀವೆಲ್ಲ ಕೇಳಿದ್ದೀರಿ, ನೋಡಿದ್ದೀರಿ. 'ಜೈಹಿಂದ್' ಘೋಷಣೆಯನ್ನು ಮೊದಲಿಗೆ ಮೊಳಗಿಸಿದವರೇ ನೇತಾಜಿ ಸುಭಾಷ್ ಚಂದ್ರಬೋಸ್. 1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಗುವುದರ ನಾಲ್ಕು ವರ್ಷ ಮೊದಲೇ ಬ್ರಿಟಿಷರ ವಿರುದ್ಧ ಐಎನ್ಎ ಎಂಬ ಸೇನೆಯನ್ನು ವಿವಿಧ ದೇಶಗಳಲ್ಲಿ ಕಟ್ಟಿ, ಸಹಸ್ರಾರು ಆಂಗ್ಲ ಸೈನಿಕರನ್ನು ಕೊಂದು, ದೂರದ ಸಿಂಗಾಪುರದಲ್ಲಿ ಭಾರತದ ಹಂಗಾಮಿ ಸ್ವತಂತ್ರ ಸರ್ಕಾರ ಸ್ಥಾಪಿಸಿದವರೇ ಈ ನೇತಾಜಿ. ನಿಜ ಅರ್ಥದಲ್ಲಿ ಸ್ವತಂತ್ರ ಭಾರತದ ಮೊದಲ ಪ್ರಧಾನಿಯೇ ಅವರು. ಅವರ ಸರ್ಕಾರವನ್ನು ಅನೇಕ ವಿದೇಶೀ ಸರ್ಕಾರಗಳು ಮಾನ್ಯ ಮಾಡಿದುದು ಇತಿಹಾಸ.

"ನೀವು ನನಗೆ ರಕ್ತ ಕೊಡಿ. ನಿಮಗೆ ಸ್ವಾತಂತ್ರ್ಯವನ್ನು ತಂದುಕೊಡುವೆ" ಎಂದು ಜನತೆಗೆ ಬೇಡಿಕೊಂಡವರು ನೇತಾಜಿ. ಇಂಗ್ಲೆಂಡಿಗೆ ಹೋಗಿ ಅಲ್ಲಿ ಐಸಿಎಸ್ ಪರೀಕ್ಷೆ ತೇರ್ಗಡೆ ಹೊಂದಿ 1921ರಲ್ಲಿ ಭಾರತಕ್ಕೆ ಮರಳಿದ ನೇತಾಜಿಗೆ ಗಾಂಧೀಜಿಯ ಸತ್ಯಾಗ್ರಹದಿಂದ ಸ್ವಾತಂತ್ರ್ಯ ಗಳಿಸುವುದು ಆಗದ ಮಾತೆಂದು ತಿಳಿದಿತ್ತು. "ಸ್ವಾತಂತ್ರ್ಯವೆಂಬುದು ಯಾರೂ ಕೊಡುವ ಸರಕಲ್ಲ ನಾವೇ ಗಳಿಸಬೇಕಾದುದು" ಎಂದು ಅವರು ಬಲವಾಗಿ ನಂಬಿದ್ದರು. ಸ್ವಾಮಿ ವಿವೇಕಾನಂದ ಮತ್ತು ಮಹರ್ಷಿ ಅರವಿಂದರಿಂದ ಪ್ರೇರಣೆ ಪಡೆದ ನೇತಾಜಿ ಇಂಗ್ಲೆಂಡಿನಿಂದ ಪಡೆದ ಐಸಿಎಸ್ ಪದವಿಯನ್ನು ತಿರಸ್ಕರಿಸುತ್ತಾರೆ. ಅಂತೆಯೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಪದವಿಗೂ ರಾಜೀನಾಮೆ ನೀಡುತ್ತಾರೆ.

ದ್ವಿತೀಯ ಮಹಾಯುದ್ಧದಲ್ಲಿ ಜಪಾನ್ ಬ್ರಿಟಿಷರಿಂದ ಗೆದ್ದು ವಶಪಡಿಸಿಕೊಂಡಿರುವ ಅಂಡಮಾನ್–ನಿಕೋಬಾರ್ ದ್ವೀಪಗಳನ್ನು ಜಪಾನಿನ ಪ್ರಧಾನಿ ಟೋಜೋ ಅವರು ನೇತಾಜಿಯ ಹಂಗಾಮಿ ಸರಕಾರಕ್ಕೆ ಬಿಟ್ಟುಕೊಟ್ಟರು. ನೇತಾಜಿ ಸಂತೋಷದಿಂದ ಅವನ್ನು ಸ್ವೀಕರಿಸಿ ಅಂಡಮಾನ್ ದ್ವೀಪವನ್ನು ಷಹೀದ್ ದ್ವೀಪವೆಂದೂ, ನಿಕೋಬಾರ್ ದ್ವೀಪವನ್ನು ಸ್ವರಾಜ್ಯ ದ್ವೀಪವೆಂದೂ ನಾಮಕರಣ ಮಾಡುತ್ತಾರೆ.

ನೇತಾಜಿಯ ಐ.ಎನ್.ಎ.ಯ ಸೈನಿಕರು 1944ರಲ್ಲಿ ಮೊದಲ ಬಾರಿಗೆ ಭಾರತದ ಮಣ್ಣಲ್ಲಿ ಕಾಲಿರಿಸಿದಾಗ ಒಬ್ಬೊಬ್ಬ ಯೋಧರೂ ಭಾರತದ ಮಣ್ಣನ್ನು ಚುಂಬಿಸಿ, ಆಘ್ರಾಣಿಸಿ, ಹಣೆಗೆ ಹಚ್ಚಿಕೊಂಡ ಘಟನೆ ಅಜಾದ್ ಹಿಂದ್ ಫೌಜ್‌ನ ದೇಶಪ್ರೇಮಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಥೆ ಚಾಪೇಕರ್ ಸಹೋದರರ ಮತ್ತು ಸಾವರ್ಕರ್ ಸಹೋದರರ ಬಲಿದಾನದ ವ್ಯಥೆಯನ್ನು ಸ್ಮರಿಸದೆ ಪೂರ್ಣವಾಗದು. ಸಾವರ್ಕರ್ ಸಹೋದರರಿಗೆ ಹೋರಾಟ ಮತ್ತು ಬಲಿದಾನಕ್ಕೆ ಪ್ರೇರಣೆ ನೀಡಿದವರೇ ಚಾಪೇಕರ್ ಸಹೋದರರು.

ರ್‍ಯಾಂಡ್ ಮತ್ತು ಲೆಫ್ಟಿನೆಂಟ್ ಐಷ್ಟ್ ಎಂಬ ಇಬ್ಬರು ಬ್ರಿಟಿಷ್ ಅಧಿಕಾರಿಗಳು ನಡೆಸಿದ ದೌರ್ಜನ್ಯ ಮತ್ತು ಅತ್ಯಾಚಾರಗಳನ್ನು ಸಹಿಸದ ಚಾಪೇಕರ್ ಸಹೋದರರು ಅವರನ್ನು ಗುಂಡು ಹಾರಿಸಿ ಹತ್ಯೆ ಮಾಡಿದರು. ಅದಕ್ಕಾಗಿ

*ತ್ಯಾಗಿಗಳಾಗಿರಿ, ಅಡವಿಗೆ ಹೋಗಬೇಡಿ.*

ಮೂವರು ಚಾಪೇಕರ್ ಸಹೋದರರಿಗೆ (ದಾಮೋದರ, ಬಾಲಕೃಷ್ಣ ಮತ್ತು ವಾಸುದೇವ) ಮರಣ ದಂಡನೆ ವಿಧಿಸಿದ್ದನ್ನು ತಿಳಿದ ವಿನಾಯಕ ದಾಮೋದರ ಸಾವರ್ಕರ್ 'ನಿಮ್ಮ ಕೆಲಸವನ್ನು ನಾವು ಮುಂದುವರೆಸುತ್ತೇವೆ' ಎಂದು ಪ್ರತಿಜ್ಞೆ ಮಾಡುತ್ತಾರೆ.

ಪುಣೆ ನಗರದ ಫರ್ಗ್ಯೂಸನ್ ಕಾಲೇಜಿಗೆ ಸೇರಿದ ವಿನಾಯಕ ದಾಮೋದರ ಸಾವರ್ಕರ್ ತಿಲಕರ ಪ್ರೇರಣೆಯಿಂದ ವಿದೇಶೀ ವಸ್ತು ಮತ್ತು ಬಟ್ಟೆಗಳನ್ನು ಒಟ್ಟು ಮಾಡಿ ಅದಕ್ಕೆ ಬೆಂಕಿ ಹಚ್ಚಿ 'ಹೋಳಿ' ಆಚರಿಸಿದ ಗುಂಪಿಗೆ ನಾಯಕರಾದರು. ಪರಿಣಾಮವಾಗಿ ಕಾಲೇಜಿನ ಹಾಸ್ಟೆಲ್‌ನಿಂದ ಹೊರದಬ್ಬಲ್ಪಟ್ಟ ಸಾವರ್ಕರ್ ಉನ್ನತ ಶಿಕ್ಷಣಕ್ಕಾಗಿ ಲಂಡನ್‌ಗೆ ತೆರಳುತ್ತಾರೆ. ಅಲ್ಲಿ ಭಾರತೀಯ ಮೂಲದವರೆಲ್ಲರನ್ನೂ ಸಂಘಟಿಸಿ ಸಶಸ್ತ್ರಕ್ರಾಂತಿಗೆ ಮಾನಸಿಕವಾಗಿ ಸಿದ್ಧಗೊಳಿಸುತ್ತಾರೆ. "ಮ್ಯಾಜಿನಿಯ ಆತ್ಮಕಥೆ" ಎಂಬ ಪುಸ್ತಕದಲ್ಲಿ ಆತನ ಹೇಳಿಕೆಗಳನ್ನು ಭಾರತೀಯ ಸನ್ನಿವೇಶಕ್ಕೆ ಅಳವಡಿಸಿದ ಕಾರಣ ಆ ಪುಸ್ತಕ ಭಾರತದಲ್ಲಿ ತುಂಬಾ ಜನಪ್ರಿಯವಾಗುತ್ತದೆ.

ಅದರ ಜನಪ್ರಿಯತೆಯನ್ನು ತಿಳಿದ ಬ್ರಿಟಿಷ್ ಸರಕಾರ ಅದರ ಎರಡನೇ ಮುದ್ರಣವನ್ನು ನಿಷೇಧಿಸಿ ಮೊದಲ ಮುದ್ರಣದ ಎಲ್ಲಾ ಪುಸಕ್ತಗಳನ್ನೂ ಹುಡುಕಿ ನಾಶಗೊಳಿಸುತ್ತದೆ. ಸಾವರ್ಕರ್‌ರವರ ವಾದಸರಣಿ ಮತ್ತು ಮಾತಿನ ಮೋಡಿಗೆ ಸ್ವತಃ ಗಾಂಧೀಜಿಯವರೇ ತಲೆದೂಗಿದ್ದುಂಟು. ಆದರೆ ಇವರ ಸಶಸ್ತ್ರಕ್ರಾಂತಿಯ ಸಮರ್ಥನೆಗೆ ಮಾತ್ರ ಗಾಂಧೀಜಿಯ ವಿರೋಧವಿರುತ್ತಿತ್ತು.

ಸಾವರ್ಕರ್ ಇಂಗ್ಲೆಂಡಿನಲ್ಲಿದ್ದುಕೊಂಡು ಅಲ್ಲಿನ ಗ್ರಂಥಪಾಲಕನ ಸ್ನೇಹ ಸಂಪಾದಿಸಿಕೊಂಡು 1857ರ ಸಶಸ್ತ್ರಕ್ರಾಂತಿಯ ಮತ್ತಷ್ಟು ವಿವರಗಳನ್ನು ಸಂಗ್ರಹಿಸಿ, "1857-ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ" ವೆಂಬ ಪುಸ್ತಕ ಬರೆದರು. ಅದನ್ನು ಇಂಗ್ಲೆಂಡಿನಲ್ಲಾಗಲೀ, ಭಾರತದಲ್ಲಾಗಲೀ ಮುದ್ರಿಸುವಂತಿರಲಿಲ್ಲ. ಕಾರಣ ಈ ಎರಡು ದೇಶಗಳಲ್ಲೂ ಏಕಕಾಲಕ್ಕೆ ಒಂದೇ ಪುಸ್ತಕಕ್ಕೆ ಪ್ರಕಟಣ ಪೂರ್ವದಲ್ಲೇ ನಿಷೇಧ ಹೇರಲಾಗಿತ್ತು! ಪ್ರಕಟಣ ಪೂರ್ವದಲ್ಲಿಯೇ ನಿಷೇಧಕ್ಕೊಳಗಾದ ವಿಶ್ವದ ಮೊದಲ ಪುಸ್ತಕವೆಂಬ ಖ್ಯಾತಿಯೂ ಈ ಪುಸ್ತಕದ್ದಾಯಿತು.

ರಾಜದ್ರೋಹದ ಆರೋಪದ ಮೇಲೆ ಸಾವರ್ಕರ ರನ್ನು ಬಂಧಿಸಿ ವಿಚಾರಣೆಗಾಗಿ ಭಾರತಕ್ಕೆ ಕಳಿಸಲಾಯಿತು. ಮಾರ್ಗಮಧ್ಯೆ ಫ್ರೆಂಚ್ ದ್ವೀಪ ಮಾರ್ಸೆಲ್ಸ್‌ಗೆ ತಲುಪಲು ಹಡಗಿನ ಕಿಂಡಿಯಿಂದ ಸಮುದ್ರಕ್ಕೆ ಹಾರಿಯೇಬಿಟ್ಟರು. ಕೊನೆಗೂ ಫ್ರಾನ್ಸ್‌ನಿಂದ ಭಾರತಕ್ಕೆ ಕರೆತಂದು ವಿಚಾರಣೆ ಗೊಳಪಡಿಸಲಾಯಿತು. ಇಂಗ್ಲೆಂಡ್ ದೇಶದ ವಿರುದ್ಧ ಪಿತೂರಿಗಾಗಿ 25 ವರ್ಷದ ಕರಿನೀರಿನ ಶಿಕ್ಷೆಯ ಜೊತೆಗೆ ಕಲೆಕ್ಟರ್ ಜಾಕ್ಸನ್‌ನ ವಧೆಗೆ ಕಾರಣರೆಂಬ ಆರೋಪಕ್ಕೆ 25 ವರ್ಷದ ಇನ್ನೊಂದು ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು.

ಸಾವರ್ಕರರ ಅಣ್ಣ(ಗಣೇಶ)ನನ್ನೂ ಅಂಡಮಾನಿನ ಅದೇ ಜೈಲಿನಲ್ಲಿ ಇರಿಸಿದ್ದು, ಎಂಟು ವರ್ಷಗಳ ಬಳಿಕವಷ್ಟೇ ಪರಸ್ಪರರಿಗೆ ತಿಳಿದಿದ್ದು ಸೋಜಿಗವೇ. 8 x 8 ಅಡಿಯ ಚಿಕ್ಕ ಕತ್ತಲು ಕೋಣೆಯ ಗೋಡೆಯ ಮೇಲೆ 10000 ಸಾಲುಗಳ ಕಾವ್ಯರಚಿಸಿ, ಅದನ್ನು ನೆನಪಿಟ್ಟು ಬಿಡುಗಡೆಯಾದ ಮೇಲೆ ಮತ್ತೆ ಕಾಗದದಲ್ಲಿ ಬರೆದರೆಂದರೆ ಅವರ ನೆನಪಿನ ಶಕ್ತಿ ಎಂತಹದ್ದೆಂದು ಯೋಚಿಸಬಹು ದಲ್ಲವೇ?

ಕೊನೆಗೂ 1947ರಲ್ಲಿ ದೇಶ ಸ್ವತಂತ್ರವಾದಾಗ ಭಾರತ, ಬಾಂಗ್ಲಾದೇಶ ಮತ್ತು ಪಾಕಿಸ್ತಾನವೆಂದು ಮೂರು ಹೋಳಾಗಿದ್ದಕ್ಕೆ ಸಾವರ್ಕರ್ ಬಹಳವಾಗಿ ನೊಂದಿದ್ದರು. ಅವರು "ಯುದ್ಧದ ಮೂಲಕ ಅಖಂಡ ಭಾರತವನ್ನು ಗೆದ್ದಿದ್ದರೆ ಹೆಚ್ಚು ಸಂತೋಷವಾಗುತ್ತಿತ್ತು" ಎಂದು ಹೇಳಿದ್ದರು.

ಸ್ವತಂತ್ರ ಭಾರತದಲ್ಲೂ ಸಾವರ್ಕರ್ ಬಂಧನ:_ 1948 ಜನವರಿ 30ರಂದು ನಡೆದ ಮಹಾತ್ಮಾಗಾಂಧಿಯ ಹತ್ಯೆಯ ನೆಪದಲ್ಲಿ ಭಾರತ ಸರಕಾರ ಸಾವರ್ಕರ್ ಬಂಧನ ಮಾಡುವುದನ್ನು ಗೃಹಮಂತ್ರಿ ವಲ್ಲಭಭಾಯಿ ಪಟೇಲ್ ಮತ್ತು ಕಾನೂನು ಪಂಡಿತ ಡಾ॥ ಬಿ.ಆರ್ ಅಂಬೇಡ್ಕರ್ ರವರ ತೀವ್ರ ವಿರೋಧದ ಹೊರತಾಗಿಯೂ ಪ್ರಧಾನಮಂತ್ರಿ ನೆಹರೂರವರ ಆಗ್ರಹದ ಮೇರೆಗೆ ಅವರನ್ನು ಬಂಧಿಸಲಾಯಿತು.

*ವಿವೇಕ ಮತ್ತು ಆತ್ಮವಿಶ್ವಾಸ ಒಂದೇ ನಾಣ್ಯದ ಎರಡು ಮುಖಗಳು.*

ಇಡೀ ವಿಶ್ವದಲ್ಲಿಯೇ ಹೋರಾಟಕ್ಕೆ ಪರ್ಯಾಯವಾಗಿದ್ದ ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯವೀರ ಸಾವರ್ಕರ್‌ಗೆ ತಮ್ಮದೇ ಸ್ವತಂತ್ರ ದೇಶದ ಸರಕಾರದಿಂದ ಬಂಧನಕ್ಕೆ ಒಳಗಾಗುವುದಕ್ಕಿಂತ ಹೆಚ್ಚಿನ ದುರಂತ ಇನ್ನಾವುದೂ ಇರಲಾರದೆಂದು ಇಡೀ ದೇಶದ ಜನತೆ ಮನಸ್ಸಿನಲ್ಲಿಯೇ ಶಪಿಸಿರಬೇಕು!

1947ರಲ್ಲಿ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಲಕ್ಷಾಂತರ ಮಂದಿ ಹಿಂದುಗಳು ತಾವು ಪಾಕಿಸ್ತಾನಕ್ಕೆ ಸೇರುವುದರ ಬದಲಿಗೆ ಸಾವನ್ನೇ ಬಯಸುವೆವು ಎಂದು ತೀರ್ಮಾನಿಸಿದಾಗ ಅಸಂಖ್ಯ ಹಿಂದುಗಳ ಕಗ್ಗೊಲೆಯಾಗಿತ್ತು.

**ವಿಭಜನೆಯ ಕಹಿ**

ದೇಶವಿಭಜನೆಯ ಸಂದರ್ಭದಲ್ಲಿ ಗಾಂಧೀ–ನೆಹರೂ ಒಪ್ಪಿದಂತೆ ಹೊಸ ದೇಶವೆಂದು ಪಾಕಿಸ್ತಾನ ಕಟ್ಟಲು 55 ಕೋಟಿ ರೂ. ನೀಡುವ ಒಪ್ಪಂದವಾಗಿತ್ತು. 1948ರಲ್ಲಿ ಕಾಶ್ಮೀರಕ್ಕಾಗಿ ಪಾಕಿಸ್ತಾನ ಭಾರತದ ಮೇಲೆ ಯುದ್ಧ ಸಾರಿದಾಗ ಈ 55 ಕೋಟಿ ಹಣವನ್ನು ಈಗಲೇ ನೀಡಿದರೆ ಅದು ನಮ್ಮ ಮೇಲೆಯೇ ಬಳಕೆಯಾಗುವುದೆಂದು ಗೃಹಮಂತ್ರಿ ಪಟೇಲ್ ಮತ್ತು ಸಾವರ್ಕರ್ ಎಚ್ಚರಿಸಿದರೂ ಗಾಂಧೀಜಿಯ ಆಗ್ರಹದ ಮೇಲೆ ಪ್ರಧಾನಮಂತ್ರಿ ನೆಹರೂ ಈ ಮೊಬಲಗನ್ನು ತಕ್ಷಣ ನೀಡಲು ಕ್ರಮಕೈಗೊಂಡದ್ದು ಎಂತಹ ಮೂರ್ಖ ತೀರ್ಮಾನವೆಂಬುದು ಒಬ್ಬ ಸಾಮಾನ್ಯ ವ್ಯಕ್ತಿಗೂ ತಿಳಿಯುವಂತಹುದೇ. ಒಟ್ಟಿನಲ್ಲಿ ಭಾರತ ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ತಮ್ಮ ಕುಟುಂಬ–ಸರ್ವಸ್ವವನ್ನೂ ಕಳೆದುಕೊಂಡ ಸಾವರ್ಕರರಂತಹ ಸಹಸ್ರಾರು ದೇಶಭಕ್ತರ ತ್ಯಾಗದ ಕಥೆ ಇಲ್ಲಿದೆ. ಸ್ವಾತಂತ್ರ್ಯದ ಸಿಹಿಯೊಂದಿಗೆ ದೇಶ ಅನುಭವಿಸಿದ ಈ ಎಲ್ಲಾ ಕಹಿಯನ್ನು ಮರೆಯಲಾದೀತೇ?



# ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ



– ಸೀತಾಲಕ್ಷ್ಮಿ
ಪೋಷಕರು,
ಕ.ರಾ.ಮಾ.ಶಿ. ಸಂಘ

1857ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಪ್ರಾರಂಭವಾಯಿತು. ಈ ಸಂಘಟಿತ ಕಾರ್ಯಕ್ಕೂ ಮುನ್ನ ಬ್ರಿಟಿಷರನ್ನು ಹೊರಹಾಕಲು ಅನೇಕ ರೀತಿಯ ಬಿಡಿ ಬಿಡಿ ಪ್ರಯತ್ನಗಳು ನಡೆದವು. ಆ ಪ್ರಯತ್ನಗಳಲ್ಲಿ ಮಹಿಳೆಯರ ಪಾತ್ರವೂ ಬಹುಮುಖ್ಯವಾದುದು. ಆ ಕಾಲಘಟ್ಟದಲ್ಲಿ ಹೋರಾಡಿದ ಮಹಿಳೆಯರ ಪೂರ್ಣ ಪರಿಚಯದ ಅಗತ್ಯ ನಮಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ನಾರಿಯ ಸಂಕಲ್ಪ ಶಕ್ತಿ, ಸ್ವಾತಂತ್ರ್ಯ ಹೋರಾಟದಲ್ಲಿನ ಸಕ್ರಿಯತೆ ಹಾಗೂ ಅವಳ ತ್ಯಾಗ, ಬಲಿದಾನಗಳ ವಿವರವನ್ನು ತಿಳಿಯುವುದು ಅವಶ್ಯಕವಾಗಿದೆ. ಇತಿಹಾಸದ ಕಾಲಗರ್ಭವನ್ನು ಬಗೆದಾಗಲೇ ಈ ಸ್ತ್ರೀ ರತ್ನಗಳ ಪರಿಚಯವಾಗುವುದು. ಅನೇಕ ರೀತಿಯ ಅಡೆತಡೆಗಳು, ಸಾಮಾಜಿಕ ವಿರೋಧಗಳನ್ನು, ಕಷ್ಟ ಕಾರ್ಪಣ್ಯಗಳನ್ನು ಧೈರ್ಯದಿಂದ ಎದುರಿಸಿ ಸ್ವಾತಂತ್ರ್ಯ ಪಡೆಯಲೇಬೇಕೆಂಬ ದೃಢಸಂಕಲ್ಪವನ್ನೇ ಜೀವನವ್ರತವನ್ನಾಗಿ ಸ್ವೀಕರಿಸಿ, ಹೋರಾಟದ ಹಾದಿಯಲ್ಲಿ ಸಕ್ರಿಯವಾಗಿ ಕೈ ಜೋಡಿಸಿದ ಮಹತ್ಕಾರ್ಯ ನಮ್ಮ ಭಾರತೀಯ ನಾರಿಯರದ್ದಾಗಿದೆ.

ಇದೇ ಆಗಸ್ಟ್ ಹದಿನೈದಕ್ಕೆ ನಮಗೆ ಸ್ವಾತಂತ್ರ್ಯ ಬಂದು 75 ವರ್ಷಗಳಾದುವು. ದೇಶದಲ್ಲಿ "ಆಜಾದೀ ಕಾ



ಅಮೃತ ಮಹೋತ್ಸವ" ಎಂಬ ಹೆಸರಿನಲ್ಲಿ ಲಕ್ಷಾಂತರ ಜನರು ಈ ಉತ್ಸವವನ್ನು ತಮ್ಮ ಮನೆಯ ಹಬ್ಬವೆಂಬಂತೆ ಆಚರಿಸಿದರು. ಅವರು ನಾಡಿಗಾಗಿ ದುಡಿದ, ಮಡಿದ ವನವಾಸಿ, ಗ್ರಾಮವಾಸಿ, ನಗರವಾಸಿ, ತುರಂಗವಾಸಿ ಸ್ವಾತಂತ್ರ್ಯಯೋಧರ ಸ್ಮರಣೆ ಮಾಡಿ, ತಮ್ಮ ಶ್ರದ್ಧಾಂಜಲಿಯನ್ನು ಸಮರ್ಪಿಸಿದರು.

ಹೀಗೆ ನೇರವಾಗಿ ಸತ್ಯಾಗ್ರಹ, ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗವಹಿಸಿದ ಪುರುಷರಿಗೆ ಸರ್ವ ಬಗೆಯ ಸಹಕಾರವನ್ನಿತ್ತ ಮಹಿಳೆಯರನ್ನೂ ಈ ಸಂದರ್ಭದಲ್ಲಿ ಸ್ಮರಿಸುವುದು ಉಚಿತವಲ್ಲವೇ?

ಉದಾಹರಣೆಗಾಗಿ ಗಾಂಧೀಜಿಯವರ ಎಲ್ಲ ಬಗೆಯ ಪ್ರಯೋಗಗಳನ್ನು ಅರ್ಥೈಸಿಕೊಂಡು ಅವರೊಂದಿಗೆ ಹೆಜ್ಜೆಜೋಡಿಸಿ ಕೊನೆಗೆ ಅವರನ್ನು ಬಂಧಿಸಿ ಇಡಲಾಗಿದ್ದ ಪುಣೆಯ ಆಗಾಖಾನ್ ಅರಮನೆ ಯಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಮೃತ್ಯುವನ್ನಪ್ಪಿದ ಕಸ್ತೂರಬಾರವರ ತ್ಯಾಗ ಸ್ಮರಿಸಬೇಕಲ್ಲವೇ ?

## ಸೇವೆಯೇ ಪ್ರತಿರೂಪ

ಅಮ್ಮುಕುಟ್ಟಿ ಸ್ವಾಮಿನಾಥನ್ ಏಪ್ರಿಲ್ 22, 1894 ರಂದು ಕೇರಳದ ಪೊನ್ನನಿ ತಾಲ್ಲೂಕಿನ ನಾಯರ್ ಜಾತಿಯ ಗೋವಿಂದ ಮೆನನ್ ರವರ 13ನೇ ಮಗಳಾಗಿ ಜನಿಸಿದರು. ಅಮ್ಮು ಎಂದಿಗೂ ಶಾಲೆಗೆ ಹೋಗಲಿಲ್ಲ ಮತ್ತು ಮನೆಯಲ್ಲಿ ಮೂಲಭೂತ ಶಿಕ್ಷಣವನ್ನು ಮಾತ್ರ ಮಲಯಾಳಂನಲ್ಲಿ



ಅಮ್ಮುಕುಟ್ಟಿ ಸ್ವಾಮಿನಾಥನ್

ಪಡೆದರು. ಹದಿಮೂರನೇ ವಯಸ್ಸಿನಲ್ಲಿ ತನಗಿಂತ ಇಪ್ಪತ್ತು ವರ್ಷ ಹಿರಿಯವರಾದ ಸ್ವಾಮಿನಾಥನ್‌ರವರ ಜೊತೆ ವಿವಾಹವಾದರು. ವಿವೇಕಿಯಾದ ಸ್ವಾಮಿನಾಥನ್ ಅಮ್ಮು ರವರ ಶಿಕ್ಷಣ ಅಭಿವೃದ್ಧಿಯಾಗಲು ಎಲ್ಲ ರೀತಿಯ ಸಹಕಾರ, ಮಾರ್ಗ ದರ್ಶನ ನೀಡಿದರು. ಇದರ ಫಲವಾಗಿ ಅಮ್ಮು ಮಹಾತ್ಮಾ ಗಾಂಧೀಜಿಯವರ ಅನುಯಾಯಿ ಯಾಗಿ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಸನ್ನದ್ಧರಾದರು. 1917ರಲ್ಲಿ "ಭಾರತೀಯ ಮಹಿಳಾ ಸಂಘಟನೆ"ಯನ್ನು ಸ್ಥಾಪಿಸಿ, ಅದರ ಮೂಲಕ ಗಾಂಧೀಪ್ರೇರಿತ ಅನೇಕ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಅನೇಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಕೆಲಸ ಮಾಡಿ ಮಾತೃಭೂಮಿಯ ಸೇವೆಯ ಮೂಲಕ ಆದರ್ಶ ಮಹಿಳೆಯಾಗಿ 1978ರಲ್ಲಿ ದೈವಾಧೀನರಾದರು.

## ತೊಟ್ಟಿಲು ತೂಗುವ ಕೈ ದೇಶವನ್ನೂ ಆಳಬಲ್ಲದು



ಸುಭಾಷ್ ಮತ್ತು "ಆಜಾದ್ ಹಿಂದ್ ಫೌಜ್"ನ ಮಹಿಳಾ ವಿಭಾಗದ ಮುಖ್ಯಸ್ಥರಾಗಿ ಕ್ಯಾಪ್ಟನ್ ಲಕ್ಷ್ಮೀಸೆಹಗಲ್

ಈ ತಲೆಬರಹಕ್ಕೆ ಅನ್ವರ್ಥವೇ ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್. ದ್ವಿತೀಯ ಪ್ರಪಂಚ ಮಹಾಯುದ್ಧದಲ್ಲಿ ಭಾರತೀಯ ಸೇನೆ ಯಲ್ಲಿ ಕಾರ್ಯ ನಿರ್ವ ಹಿಸಿ, ನಂತರ ಇವರು ಕ್ಯಾಪ್ಟನ್ ಲಕ್ಷ್ಮೀ ಎಂದೇ ಹೆಸರಾದರು. 1914ನೇ ಇಸವಿ ಅಕ್ಟೋಬರ್ ಇಪ್ಪತ್ನಾಲ್ಕರಂದು ಕೇರಳದ ಪಾಲಕ್ಕಾಡ್‌ನಲ್ಲಿ ಜನಿಸಿದರು.

1940ರಲ್ಲಿ ಪೈಲಟ್ ಪಿ.ಕೆ.ಎನ್. ರಾವ್ ಅವರೊಂದಿಗಿನ ವಿವಾಹ ವಿಫಲವಾದ ನಂತರ ಅವರು ಸಿಂಗಾಪುರಕ್ಕೆ ತೆರಳಿದರು. ಅಲ್ಲಿ ನೇತಾಜಿಯವರ ಜೊತೆಗೂಡಿ "ಆಜಾದ್ ಹಿಂದ್ ಫೌಜ್"ನ ಮಹಿಳಾವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. 1947ರಲ್ಲಿ ಪ್ರೇಮ್‌ಕುಮಾರ್ ಸೆಹೆಗಲ್‌ರವರೊಂದಿಗೆ ವಿವಾಹವಾಗಿ ಕಾನ್ಪುರದಲ್ಲಿ ನೆಲೆಸಿದರು. ಅಲ್ಲಿ ಅವರು ತಮ್ಮ ವೈದ್ಯಕೀಯ ಅಭ್ಯಾಸವನ್ನು ಮುಂದುವರೆಸಿ, ಭಾರತದ ವಿಭಜನೆಯ ನಂತರ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದ ನಿರಾಶ್ರಿತರಿಗೆ ಸಹಾಯ ಮಾಡಿದರು. 97 ವರ್ಷದ ತುಂಬು ಜೀವನ ನಡೆಸಿ 2012ರಲ್ಲಿ ಹೃದಯಾ ಘಾತದಿಂದ ನಿಧನರಾದರು. ಅವರ ಅಪೇಕ್ಷೆಯಂತೆ ದೇಹ ವನ್ನು ಗಣೇಶ್‌ಶಂಕರ್ ವಿದ್ಯಾರ್ಥಿ ಮೆಮೋರಿಯಲ್ ಕಾಲೇಜಿಗೆ ಸಂಶೋಧನೆಗಾಗಿ ಅರ್ಪಿಸಲಾಯಿತು.

## ಕಬ್ಬಿಣದ ಹೆಂಗಸು



ಕಬ್ಬಿಣದ ಹೆಂಗಸು – ಉಮಾಬಾಯಿ ಕುಂದಾಪುರ

ಉಮಾಬಾಯಿ ಕುಂದಾಪುರ ಮಹಿಳೆಯರಿಗೆ ಶಿಕ್ಷಣ ಕಲಿಸಲು ಮತ್ತು ಬ್ರಿಟಿಷರ ವಿರುದ್ಧ ಹೋರಾ ಡಲು ಜೀವನವನ್ನೇ ಮುಡುಪಾಗಿ ಟ್ಟವರು. 1892ರಲ್ಲಿ ಮಂಗಳೂರಿ ನಲ್ಲಿ ಜನನ. ಇಪ್ಪತ್ತೈದನೇ ವಯಸ್ಸಿನಲ್ಲಿಯೇ ಪತಿ ವಿಯೋಗ. ಮಾವನವರ ಪ್ರೇರಣೆಯಿಂದ ಹುಬ್ಬಳ್ಳಿಗೆ ಬಂದು "ಕರ್ನಾಟಕ ಪ್ರೆಸ್" ಮುದ್ರಣಾಲಯ ಹಾಗೂ ಮಹಿಳೆಯರಿಗಾಗಿ "ತಿಲಕ್ ಕನ್ಯಾಶಾಲಾ" ತೆರೆದರು. 1932ರಲ್ಲಿ ನಡೆದ "ಆಲ್ ಇಂಡಿಯಾ ಕಾಂಗ್ರೆಸ್"ನ ಬೆಳಗಾಂ ಅಧಿವೇಶನಕ್ಕಾಗಿ ನೂರೈವತ್ತು ಜನ ಮಹಿಳೆ ಯರನ್ನು ಸಂಘಟಿಸುವ ಮಹತ್ತ್ವದ ಕೆಲಸವನ್ನು ಡಾ॥ ಹರ್ಡೀಕರ್‌ರವರ ಜೊತೆಗೂಡಿ ನಿರ್ವಹಿಸಿದರು. ಇತರ ಗ್ರಾಮಸೇವಿಕೆಯರೊಂದಿಗೆ ಓಡಾಡಿ ಧನ ಸಂಗ್ರಹಿಸಿ ಮಕ್ಕಳ ಅಭ್ಯುದಯಕ್ಕಾಗಿ, ಆರೋಗ್ಯವರ್ಧನೆಗಾಗಿ ಅನೇಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಉಮಾಬಾಯಿ ಯವರ ಕಾರ್ಯಕ್ಷಮತೆಯನ್ನು ಗಮನಿಸಿ, ಗಾಂಧೀಜಿ ಯವರು ಕರ್ನಾಟಕ ವಿಭಾಗದ "ಕಸ್ತೂರಬಾ ಟ್ರಸ್ಟ್"ನ ಮುಖ್ಯಸ್ಥೆಯಾಗಿ ನಾಮನಿರ್ದೇಶನ ಮಾಡಿದರು. ತಿಲಕ್ ಮತ್ತು ಗಾಂಧೀಜಿಯವರ ಸ್ವಾತಂತ್ರ್ಯ ಹೋರಾಟದ ಎಲ್ಲ ಚಳುವಳಿಗಳಲ್ಲೂ ತಪ್ಪದೇ ಭಾಗವಹಿಸುತ್ತಿದ್ದರಲ್ಲದೆ,

*ಸತ್ಯಕ್ಕೆ ಒಂದು ಬಣ್ಣ, ಸುಳ್ಳಿಗೆ ನಾನಾ ಬಣ್ಣ – ಲ್ಯಾಟಿನ್ ಗಾದೆ*

ಹೋರಾಟಕ್ಕೆ ಪ್ರೇರೇಪಿಸುವ "ಸ್ವದೇಶಿ ವ್ರತ್" ಎಂಬ ಮರಾಠಿ ನಾಟಕವನ್ನು ಬರೆದು ಹಳ್ಳಿ ಹಳ್ಳಿಗಳಲ್ಲೂ ಆಡಿಸಿದ ಹಿರಿಮೆ ಇವರದು.

ಸೇವಾದಳದ ಮಹಿಳಾ ವಿಭಾಗದ ನಾಯಕತ್ವವನ್ನು ಸಮರ್ಥ ವಾಗಿ ನಿಭಾಯಿಸಿದರು. ಇಂತಹ ಕ್ರಿಯಾಶೀಲ, ಕಾರ್ಯತತ್ಪರತೆಯ ಮಹಿಳೆಯನ್ನು ಹದ್ದಿನ ಕಣ್ಣಿನ ಬ್ರಿಟಿಷರು ಗುರುತಿಸದೇ ಬಿಟ್ಟಾರೆಯೇ? ಉಮಾಬಾಯಿ ಯವರು ಯೆರವಾಡ ಜೈಲಿನಲ್ಲಿ ಬಂದಿಯಾದರು. ಕರ್ನಾಟಕ ಪ್ರೆಸ್ ಮತ್ತು ಕನ್ಯಾಶಾಲಾ ಈ ಎರಡನ್ನೂ ಅಸಿಂಧು ಎಂದು ಪರಿಗಣಿಸಿ, ಮುಟ್ಟುಗೋಲು ಹಾಕಿ ಸರ್ಕಾರ ವಶಪಡಿಸಿಕೊಂಡಿತು. ಉಮಾಬಾಯಿ ಕುಂದಾ ಪುರ ತಮ್ಮ ಮಾವನವರ ಸ್ಮರಣಾರ್ಥ ನಿರ್ಮಿಸಿದ "ಅನಂತಸ್ಮೃತಿ" ಮನೆಯಲ್ಲಿಯೇ "ಭಗಿನೀಮಂಡಲ"ದ ಚಟುವಟಿಕೆಗಳನ್ನು ಮುಂದುವರೆಸಿದರು. ಮಹಿಳಾ ಹೋರಾಟಗಾರ್ತಿಯರಿಗೆ ಆ ಮನೆಯೇ ಆಸರೆ ಯಾಯಿತು. ಅವರ ದೇಶಪ್ರೇಮ ಇತರ ಮಹಿಳೆಯರಿಗೆ ಪ್ರೇರಣೆಯಾಯಿತು.

## ಭಾರತದ ಕೋಗಿಲೆ



ಭಾರತದ ಕೋಗಿಲೆ
ಸರೋಜಿನೀ ನಾಯ್ಡು

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಅಗ್ರಗಣ್ಯರಲ್ಲಿ ಒಬ್ಬ ರಾಗಿ, ಭಾರತದ ಕೋಗಿಲೆ ಎಂದೇ ಹೆಸರಾದವರು ಸರೋಜಿನೀ ನಾಯ್ಡು. "ಕ್ವಿಟ್ ಇಂಡಿಯಾ ಚಳುವಳಿ" ಮತ್ತು "ಅಸಹಕಾರ ಚಳುವಳಿ"ಗಳಲ್ಲಿ ಪ್ರಮುಖ ಪಾತ್ರವಹಿಸಿದ ಧೀರ ಮಹಿಳೆ.

ಮತ ಚಲಾಯಿಸುವ ಹಕ್ಕು ಎಲ್ಲರಿಗೂ ಬೇಕೇಬೇಕು. ವಿಶೇಷ ವಾಗಿ ಮಹಿಳೆಯರಿಗೆ ಅವಶ್ಯ ಎನ್ನುವ ವಿಷಯದ ಬಗ್ಗೆ ಸರೋಜಿನೀನಾಯ್ಡುರವರು ಹೆಚ್ಚು ಕೆಲಸ ಮಾಡುತ್ತಿದ್ದರು. 1928ನೇ ಇಸವಿಯಲ್ಲಿಯೇ ಸರೋಜಿನೀ ನಾಯ್ಡುರವರ ಪದ್ಯ, ಕವನ ಸಂಗ್ರಹ ನ್ಯೂಯಾರ್ಕ್‌ನಲ್ಲಿ ಪ್ರಕಟವಾಗಿದ್ದುದು ನಮ್ಮ ಭಾರತಕ್ಕೆ ಹೆಮ್ಮೆಯ ವಿಷಯ. 1949ರಲ್ಲಿ ಹೃದಯಾಘಾತದಿಂದ ನಾಯ್ಡುರವರು ನಿಧನರಾದರು.

## ಕ್ರಾಂತಿಕಾರೀ ಹೋರಾಟದ ಜನನಿ



ಭಿಕಾಜಿ ಕಾಮ

ನಾರಿ ಶಕ್ತಿಯ ಪ್ರತೀಕವೆನಿಸಿದ ಭಿಕಾಜಿಕಾಮ ಮುಂಬಯಿನ ನವಸಾರಿಯಲ್ಲಿ ಜನಿಸಿ, ಶ್ರೀಮಂತ ಕುಟುಂಬಕ್ಕೆ ಸೊಸೆಯಾಗಿ ಸೇರಿ ದರು. 1897ರಲ್ಲಿ ಮುಂಬೈಯಲ್ಲಿ ದಣಿವರಿಯದೆ ರೋಗಿಗಳ ಸೇವೆಗೆ ತನ್ನನ್ನು ಸಮರ್ಪಿಸಿಕೊಂಡುದಲ್ಲದೆ, ಬಡಜನರ ಕಷ್ಟ ಪರಿಹರಿಸುವಲ್ಲಿ ಕೂಡ ನಿಷ್ಠೆಯಿಂದ, ಅವಿಶ್ರಾಂತವಾಗಿ ದುಡಿದರು.

ಜರ್ಮನಿಯ Stuttgart ನಲ್ಲಿ "International Socialist Conference"ನ ಸಂದರ್ಭದಲ್ಲಿ Union Jackಅನ್ನು ಭಾರತದ ಬಾವುಟವೆಂದು ಬಿಂಬಿಸಿದಾಗ ಭಿಕಾಜಿ ಕಾಮ ವಿರೋಧಿಸಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಿದರು. ವೀರ ಸಾವರ್ಕರ್‌ರನ್ನು ಬಂಧಿಸಿ ಲಂಡನ್‌ನಿಂದ ಭಾರತಕ್ಕೆ ಕರೆ ತರುವಾಗ ಅವರನ್ನು ಬಿಡಿಸಿ ಕೊಳ್ಳುವಲ್ಲಿ ಮೇಡಮ್ ಕಾಮರವರ ಕೈವಾಡವಿತ್ತು. ಯೋಜನೆ ಲಂಡನ್‌ನ ವಿಕ್ಟೋರಿಯ ರೈಲು ನಿಲ್ದಾಣದಲ್ಲಿ ಸಫಲವಾಗಲಿಲ್ಲ. ಅವರನ್ನು ಹಡಗಿನಲ್ಲಿ ಭಾರತಕ್ಕೆ ಕರೆತರುವ ದಾರಿಯಲ್ಲಿ ಫ್ರಾನ್ಸ್‌ನ ಮಾರ್‌ಸೆಲ್ಸ್ ಬಂದರಿಗೆ ಹಡಗು ಬರುವುದೆಂದು ತಿಳಿದು ಅಲ್ಲಿಂದಲೇ ಸಾವರ್ಕರ್ ರನ್ನು ಬಿಡಿಸಿಕೊಂಡು ಹೋಗುವ ಯೋಜನೆಯಿತ್ತು. ಮೇಡಂ ಕಾಮಾ ಮಾರ್‌ಸೆಲ್ಸ್‌ನ್ನು ಅರ್ಧಗಂಟೆ ತಡವಾಗಿ ತಲುಪಿದ ಕಾರಣ ಸಾವರ್ಕರ್ ಬ್ರಿಟಿಷರ ಬಂದಿಯಾದರು. ಮೇಲಿನ ಎರಡೂ ಪ್ರಸಂಗಗಳಲ್ಲಿಯೂ ಮೇಡಮ್ ಕಾಮರವರೇ ಯೋಜನೆ ಮಾಡಿ ಬ್ರಿಟಿಷರನ್ನು ಎದುರಿಸುವ ಎದೆಗಾರಿಕೆಯನ್ನು ತೋರಿದ್ದರು. ಮೇಡಂ ಕಾಮ ಅನಾರೋಗ್ಯದ ನಿಮಿತ್ತ 1935ರಲ್ಲಿ ಮುಂಬಯಿಗೆ ಹಿಂತಿರುಗಿದರು. ಎಪ್ಪತ್ನಾಲ್ಕು ವರ್ಷಗಳ ಜೀವನ ನಡೆಸಿ 1936ರಲ್ಲಿ ಕೊನೆಯುಸಿರನ್ನೆಳೆದರು.

**ಗುಪ್ತ ಆಕಾಶವಾಣಿ ಸಂಚಾಲಕಿ ಉಷಾ ಮೆಹೆತಾ** ಮಾರ್ಚ್ 25, 1920ರಂದು ಭಾರತದ ಗುಜರಾತಿನಲ್ಲಿ ಜನಿಸಿದರು. "Simon Go Back" ಎಂಬ ಘೋಷಣೆಯ

*ಪರರನ್ನು ಗೌರವಿಸುವುದನ್ನು ಕಲಿಯದಿದ್ದರೆ ನಾವೆಂದೂ ದೊಡ್ಡವರಾಗುವುದಿಲ್ಲ – ವಲ್ಲಭಬಾಯಿ ಪಟೇಲ್*



ಮೂಲಕ ಹೆಂಡದಂಗಡಿ ಮುಚ್ಚಲು ಚಳುವಳಿ ನಡೆಸಿದರು. ಬ್ರಿಟಿಷರ ವಿರುದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ಕೊಟ್ಟ ಕರೆಯನ್ನು ಬಲ ಗೊಳಿಸುವ ನಿಟ್ಟಿನಲ್ಲಿ, ಉಷಾ ಮೆಹೆತಾ "Under Radio Station" ಸಿದ್ಧಪಡಿಸಿದರು. 1998ರಲ್ಲಿ ಭಾರತದ ಎರಡನೇ ನಾಗರಿಕ ಸಮ್ಮಾನವಾದ "ಪದ್ಮವಿಭೂಷಣ" ಪ್ರಶಸ್ತಿಗೆ ಭಾಜನ ರಾದರು. 2000ನೇ ಇಸವಿ ಆಗಸ್ಟ್ ಹನ್ನೊಂದರಂದು ದೈವಾಧೀನ ರಾದರು.

### ಒರಿಸ್ಸಾದ ಧ್ವನಿ



ಕುಂತಲಕುಮಾರಿ ಸಬತ್

ಬಸ್ತರ್ ಜಿಲ್ಲೆಯ ಜಗದಾಲ್ ಪುರದಲ್ಲಿ ಜನಿಸಿದವರು ಕುಂತಲ ಕುಮಾರಿ ಸಬತ್. ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಸಹಕಾರ ಚಳುವಳಿಯಲ್ಲಿ ಜನರು ಭಾಗ ವಹಿಸಲು ತಮ್ಮ ಬರವಣಿಗೆಯ ಮೂಲಕ ಪ್ರೇರಣೆ ನೀಡಿದರು. ಬಂಕಿಮರ ಬರವಣಿಗೆಯ ರೀತಿಯಲ್ಲಿಯೇ ಇದ್ದ ತಮ್ಮ ಕವನಗಳ ಮೂಲಕ ಜನಜಾಗೃತಿಯನ್ನುಂಟುಮಾಡಿದರು. ಈಕೆಯ ರಾಷ್ಟ್ರ ಸಮರದ ಹಾಡುಗಳಿಂದ ಪ್ರೇರಿತರಾದ ಯುವಜನತೆ ಹುಚ್ಚೆದ್ದು ಅಸಹಕಾರ ಚಳುವಳಿಗೆ ಧುಮುಕಿದರು. ಜೀವಿತದ ಅವಧಿ ಕಡಿಮೆ ಆದರೂ ಕೂಡ ಬ್ರಿಟಿಷರ ವಿರುದ್ಧ ಜನರ ಆವೇಶ ಹೆಚ್ಚುವಂತೆ ಮಾಡುವ ಅವರ ಕೆಲಸದ ವೇಗ ಕಡಿಮೆ ಆಗಲೇ ಇಲ್ಲ. ಅವರ "ಆಹ್ವಾನ್" ಕವನವು ಸ್ವಾತಂತ್ರ್ಯ ಸಮರ ಸಾರುವಲ್ಲಿ ಜನತೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿತು.

ವೃತ್ತಿಯಿಂದ ವೈದ್ಯೆಯಾಗಿ, ಬರವಣಿಗೆಯಿಂದ ಸ್ವಾತಂತ್ರ್ಯ ಸಮರದ ಶಕ್ತಿಯಾಗಿ, ಬುದ್ಧಿಮತ್ತೆಯಿಂದ ಉತ್ತಮ ಭಾಷಣಕಾರರಾಗಿ, ಒಡಿಸ್ಸಾದ ಮುಖವಾಣಿ ಯಾಗಿ ಕುಂತಲಕುಮಾರಿಯು ದೇಶಕ್ಕಾಗಿ ದುಡಿದ ಪ್ರೇರಣಾದಾಯಿ ಮಹಿಳೆ. ತಮ್ಮ ಮೂವತ್ತೇಳನೇ ವಯಸ್ಸಿನಲ್ಲಿ ಭಗವಂತನ ಪಾದವನ್ನು ಸೇರಿದರು.

### ಅಗ್ನಿಕನ್ಯೆ



ಕಲ್ಯಾಣಿದಾಸ್

ಬಂಗಾಳದ ಕೃಷ್ಣನಗರದ ಬೇಣಿ ಮಾಧಬ್‌ದಾಸ್‌ರ ಪುತ್ರಿಯ ರಾದ ಕಲ್ಯಾಣಿದಾಸ್ ಹಾಗೂ ಬೀನಾದಾಸ್ ಇಬ್ಬರೂ ನಾಡ ಬಿಡುಗಡೆಗಾಗಿ ಸಮರ್ಪಿತರಾದ ವರು. ಬೀನಾದಾಸ್ ಮಹಿಳಾ ಅರೆಕ್ರಾಂತಿಕಾರಿ "ಛಾತ್ರಿ ಸಂಘ"ದ ಸದಸ್ಯೆಯಾಗಿದ್ದರು.

ಸಣ್ಣ ವಯಸ್ಸಿನಲ್ಲಿಯೇ ಬ್ರಿಟಿಷರ ಅನ್ಯಾಯದ ಕತೆಗಳನ್ನು ಕೇಳಿ ಬೀನಾದಾಸ್‌ಳ ಮನಸ್ಸು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಲು ನಿರ್ಧರಿತ ವಾಗಿತ್ತು. ಅವರು ಓದುತ್ತಿದ್ದ ಶಾಲೆಗೆ ಬ್ರಿಟಿಷ್ ವೈಸರಾಯ್‌ನ ಹೆಂಡತಿ ಶಾಲಾ ವೀಕ್ಷಣೆಗೆ ಬಂದಾಗ ಶಾಲೆಯ ಮುಖ್ಯಸ್ಥರು ಹೂಗುಚ್ಛ ಕೊಟ್ಟು ನಮಸ್ಕರಿಸಲು ಹೇಳಿದಾಗ ವಿರೋಧಿಸಿದರು. ಯಾವುದೇ ವಿರೋಧಗಳಿಗೂ ಹೆದರದೆ 1928ರಲ್ಲಿ ವಿದ್ಯಾರ್ಥಿಗಳನ್ನೂ ಒಡಗೂಡಿಸಿಕೊಂಡು "Simon-Commission" ವಿರುದ್ಧ ಪ್ರತಿಭಟನೆ ನಡೆಸಿದರು. ವಿದ್ಯಾಭ್ಯಾಸ ಮುಂದುವರಿದಂತೆ ಕಾಲೇಜಿನಲ್ಲಿಯೂ ಇವರ ಸ್ವತಂತ್ರ ಭಾರತದ ಕಿಚ್ಚು ಹೆಚ್ಚುತ್ತಲೇ ಹೋಯಿತು.



ಬೀನಾದಾಸ್

ತನ್ನ ಪತಿಯ ಮರಣದ ನಂತರ, ದಾಸ್ ರಿಷಿಕೇಶದಲ್ಲಿ ಒಂಟಿ ಜೀವನವನ್ನು ನಡೆಸಿದರು ಮತ್ತು ಅನಾಮಧೇಯರಾಗಿ ನಿಧನರಾದರು. ಆಕೆಯ ಮೃತ ದೇಹವನ್ನು 26 ಡಿಸೆಂಬರ್ 1986ರಂದು ರಸ್ತೆ ಬದಿಯಿಂದ ಭಾಗಶಃ ಕೊಳೆತ ಸ್ಥಿತಿಯಲ್ಲಿ ಪತ್ತೆ ಮಾಡಲಾಯಿತು. ವಿಷಯ ತಿಳಿದ ಪೊಲೀಸರಿಗೆ ಅವರ ಗುರುತನ್ನು ನಿರ್ಧರಿಸಲು ಒಂದು ತಿಂಗಳು ಬೇಕಾಯಿತು.

ಬೀನಾದಾಸ್ ಎಂಬ ಕ್ರಾಂತಿಕಾರಿಯು ರಕ್ತ ಭಾರತೀಯರೆಲ್ಲರೂ ಒಗ್ಗೂಡಿ ಭಾರತಾಂಬೆಗೆ ಸ್ವಾತಂತ್ರ್ಯ ತಂದೊಡ್ಡುವವರೆಗೂ ತಣ್ಣಗಾಗಲೇ ಇಲ್ಲ.

*ತಾಳ್ಮೆ ಕಹಿಯಾದರೂ ಆದರೂ ಅದರ ಫಲ ಸಿಹಿ – ರೂಸೋ*

## ಮಣಿಪುರದ ನಾಗಾಗಳ ಚಾಮುಂಡಿ


ರಾಣಿಗಾಯ್‌ಡಿನಲಿಯಾ

1915ರ ಜನವರಿ 26 ರಂದು ನಾಗಾ ಜನಾಂಗದಲ್ಲಿ ಜನಿಸಿದ ರಾಣಿಗಾಯ್‌ಡಿನಲಿಯಾರನ್ನು "ಚರಚಾಮುಂಡಿ ದೇವಿ" ಎಂದು ಭಾವಿಸಲಾಗಿತ್ತು. ಆಧ್ಯಾತ್ಮಿಕ ಹಾಗೂ ರಾಜಕೀಯ ಕ್ಷೇತ್ರದ ನಾಯಕತ್ವವನ್ನು ಹೊಂದಿದ್ದ ಈಕೆಯ ದಾಯಾದಿ ಜಡನಾಂಗೋ ಸಂಘ ಪ್ರಾರಂಭಿಸಿದರು. ಗುಡ್ಡ ಗಾಡು ಜನರ ಅಭಿವೃದ್ಧಿಯ "ಹೆರ್ಕಾ" ಚಳುವಳಿಯಲ್ಲಿ ತನ್ನ ಹದಿಮೂರನೇ ವಯಸ್ಸಿನಲ್ಲಿಯೇ ಭಾಗವಹಿಸಿದ್ದರು. ಚಳುವಳಿಗಾರರು ಮತ್ತು ಅನೇಕ ವ್ಯಾಪಾರಸ್ಥರ ಮೇಲೆ ದೌರ್ಜನ್ಯ ಮಾಡಿದ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಕಂಕಣತೊಟ್ಟರು. ಛದ್ಮವೇಷದಲ್ಲಿ ಅನೇಕ ಬಾರಿ ಅವರ ಮೇಲೆ ದಾಳಿ, ಹದಿನಾರನೇ ವಯಸ್ಸಿನಲ್ಲಿಯೇ ಬ್ರಿಟಿಷರ ಸೆರೆಯಾಳಾದರು. ಸ್ವಾತಂತ್ರ್ಯಾನಂತರ ಭಾರತ ಸರ್ಕಾರ 1982ರಲ್ಲಿ "ಪದ್ಮಭೂಷಣ್" ಪ್ರಶಸ್ತಿ, "ತಾಮ್ರಪತ್ರ" ಬಹುಮಾನ ನೀಡಿದೆ. ನಾಗಾಗಳ ಪ್ರಾಚೀನ ಪದ್ಧತಿ ಪುರಸ್ಕರಿಸುವುದರೊಂದಿಗೆ, ಕ್ರೈಸ್ತ ಮತಾಂತರ ವಿರೋಧಿಯೂ ಆತದ್ದರು. ಫೆಬ್ರವರಿ ಹದಿನೇಳು, 1993ರಲ್ಲಿ ಭಗವಂತನ ಪಾದ ಸೇರಿದರು.

## ಅಸ್ಸಾಂನ ವೀರ ವನಿತೆಯರು

"ಗೆದ್ದರೆ ಧ್ವಜ ಹಿಡಿದು ಬರುವೆ, ಸತ್ತರೆ ತ್ರಿವರ್ಣ ಧ್ವಜ ಸುತ್ತಿ ಬರುವೆ" – ಎಂದು ಸೈನಿಕ ರಣರಂಗಕ್ಕೆ ತೆರಳುತ್ತಾನೆ. ಸಾಮಾನ್ಯವಾಗಿ ಸೈನಿಕ ಗೆದ್ದಾಗ, ರಾಷ್ಟ್ರಮಟ್ಟದ ಕ್ರೀಡಾಗುಂಪು ಗೆದ್ದಾಗ ಭಾರತದ ಧ್ವಜ ಹಿಡಿದೆತ್ತಿ ಕುಣಿದಾಡುತ್ತಾರೆ.

ಹದಿನೇಳರ ತರುಣಿ ಕನಕಲತಾ ಬರುವಾಯಿಂದ ಎಪ್ಪತ್ತೈದರ ವೃದ್ಧೆ ಮಾತಂಗಿನಿ ಹಜ್ರಾರವರೆಗೆ ರಾಷ್ಟ್ರ ಧ್ವಜದ ರಕ್ಷಣೆಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ್ದಾರೆ.

## ಮಾತಂಗಿನಿ ಹಜ್ರಾ

1942 ಸೆಪ್ಟಂಬರ್ ಇಪ್ಪತ್ತರಂದು ಗೋಪ್ಪಾರ ಪೋಲಿಸ್ ಠಾಣೆ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಕಾರ್ಯಕ್ರಮ. "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಚಳುವಳಿಯ ಉಚ್ಛ್ರಾಯಸ್ಥಿತಿಯಲ್ಲಿದ್ದ ಕಾಲ. ಅಸ್ಸಾಂನ ಅಬಾಲವೃದ್ಧರಾದಿಯಾಗಿ ಸಾವಿರಾರು ಜನ ಬೀದಿಗಿಳಿ ದಿದ್ದರು. ಬಹುದೊಡ್ಡ ಗುಂಪಿನ ಮುಂದಾಳತ್ವ ಪಡೆದ ಹದಿನೇಳರ ಹರೆಯದ ಕನಕಲತಾ ಬರುವಾ ತ್ರಿವರ್ಣ ಧ್ವಜ ಹಿಡಿದು ಮುನ್ನುಗ್ಗು ತ್ತಿದ್ದಳು. ಬ್ರಿಟಿಷರ ವಿರೋಧಕ್ಕೆ ಕವಡೆಕಾಸಿನ ಬೆಲೆ ನೀಡದೆ ಸಾವಿಗೂ ಅಂಜದೆ ಚಂದ್ರಪ್ರಭಾ ಸಾಯಿಕಿಯಾನಿ, ಧರ್‌ಕಿದಸಿ ಬರುವಾ, ಟೈಲ್ಸ್‌ವಾರಿ ಬರುವಾ, ಗೋಲಾಪಿ ಚುಟೈನಿ, ಲೀಲಾ ನಿಯೋಗೋನಿ, ರಾಣಿಗಾಯ್‌ಡಿನಿ ಲಿಯಾ ಇವರೆಲ್ಲರೊಡಗೂಡಿ 'ಮೃತ್ಯುವಾಹಿನಿ' ಪಡೆಯಲ್ಲಿ ಮುನ್ನುಗ್ಗುತ್ತಿದ್ದಳು. ಪೋಲಿಸರ ಗುಂಡಿಗೆ ಎದೆಯೊಡ್ಡಿ ಕೆಳಗೆ ಬಿದ್ದರೂ ಸಹ ರಾಷ್ಟ್ರಧ್ವಜ ನೆಲಕ್ಕೆ ಬೀಳದಂತೆ ಎತ್ತಿ ಹಿಡಿದ ವೀರವನಿತೆ. ಕೆಲಹೊತ್ತಿನ ನಂತರ ಮುಕುಂದ ಕಾಕತಿ ಎಂಬ ತರುಣ ಮುಂದೆ ಬಂದು ಧ್ವಜವನ್ನು ಎತ್ತಿಕೊಂಡಾಗಲೇ ನಿರಾಳವಾಗಿ ಪ್ರಾಣಬಿಟ್ಟರು.


ಮಾತಂಗಿನಿ ಹಜ್ರಾ

ಅದೇ ದಿನ ನಾಗಾಂವ್ ಜಿಲ್ಲೆಯ ಬರ್ಹಾಂಪುರದ ಭೋಗೇಶ್ವರಿಪುಂಖನಾನಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ಫಿನಿಷ್‌ನ ಮೇಲೆ ದಾಳಿ ಮಾಡಿ ಧ್ವಜವನ್ನು ಎತ್ತಿಹಿಡಿದು ಗುಂಡಿಗೆ ಆಹುತಿಯಾದಳು.

## ಧೀರಮಹಿಳೆ

ಮಾತಂಗಿ ಹಜ್ರಾ ಮಿದ್ನಾಪುರ್ ಜಿಲ್ಲೆಯ ಹೋಗ್ಲಾ ಗ್ರಾಮದಲ್ಲಿ ಒಬ್ಬ ರೈತನ ಮಗಳಾಗಿ ಜನಿಸಿ ಇಪ್ಪತ್ತೊಂದನೇ ವಯಸ್ಸಿನಲ್ಲಿಯೇ ವಿಧವೆಯಾದ ಈಕೆ ಎದೆಗುಂದದೆ ಅಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದಳು. ಉಪ್ಪಿನ ಸತ್ಯಾಗ್ರಹದಲ್ಲಿ ಬಂದಿ ಯಾದರೂ, ಬಿಡುಗಡೆಯ ನಂತರ "ಚೌಕಿದಾರ್ ಟ್ಯಾಕ್ಸ್ ಬಂದ್" ಚಳುವಳಿಯಲ್ಲಿ ಭಾಗವಹಿಸಿದಳು.

ಐ.ಎನ್.ಎನಲ್ಲಿ ಸಕ್ರಿಯ ಕಾರ್ಯಕರ್ತಳಾದಾಗ ಖಾದಿ ನೂಲುವಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡಳು.

ತನ್ನ ಎಪ್ಪತ್ತೆರಡನೇ ವಯಸ್ಸಿನಲ್ಲಿಯೂ ಮೇಧಿನೀ ಪೂರೆ ಜಿಲ್ಲೆಯ ತಮ್‌ಲುಕ್ ಪೋಲಿಸ್ ಠಾಣೆಗಳನ್ನು ಮುತ್ತಿಗೆ ಹಾಕುವ ಸಂದರ್ಭದಲ್ಲಿ ಐಪಿಸಿ 144ನೇ ಕರ್ಫ್ಯೂ ಇದ್ದಾಗ್ಯೂ ಸಾವಿರಾರು ಜನರೊಡನೆ ಪೋಲಿಸರ ಗುಂಡಿಗೆ ಬಲಿಯಾಗುವ ಸಂಭವವಿದ್ದಾಗಲೂ ಮುನ್ನುಗ್ಗಿ ಬ್ರಿಟಿಷರ ಸದೆ ಬಡಿಯಲು ಪ್ರಯತ್ನಿಸಿದಳು.

ತಾರಾರಾಣಿ ಶ್ರೀವಾಸ್ತವ, ಲಾವಣ್ಯ ಪ್ರಭಾಘೋಷ್, ಸುಹಾಸಿನಿ ಗಂಗೋಲಿ, ಸುಶೀಲಧಿದೀ, ಪ್ರಮುಲ್ಯಾನಾಲಿನೀ ಬ್ರಹ್ಮ, ದುರ್ಗಾವತಿ ದೇವಿ, ಕಲ್ಯಾಣೀದಾಸ್, ಜಾನಕೀದೇವಿ ಬಜಾಜ್ ಮೊದಲಾದ ಅನೇಕ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯ.

ಬ್ರಿಟಿಷರ ವಿರುದ್ಧ ಧ್ವನಿ ಎತ್ತಿ ಹೋರಾಟಗೈದ ಪುರುಷರ ಸಹವರ್ತಿಯಾಗಿ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಹೋರಾಡಿ ಬೆಂಬಲಿಸಿದ ಮಹಿಳಾಮಣಿಯರ ಬಗ್ಗೆ ತಿಳಿದುಕೊಂಡೆವು. ನಡುಬೀದಿಗಿಳಿದು ಧರಣಿ, ಚಳುವಳಿ ಗಳನ್ನು ನಡೆಸಿದ್ದಲ್ಲದೇ, ಕೆಲವರು ತಮ್ಮ ಬರವಣಿಗೆಯ ಮೂಲಕ ಸ್ವಾತಂತ್ರ್ಯ ಸಮರಕ್ಕೆ ಕಿಡಿಹಚ್ಚಿದರು. ಸ್ವದೇಶದಲ್ಲಲ್ಲದೇ ವಿದೇಶಗಳಲ್ಲಿಯೂ ಭಾರತದ ಸ್ವಾತಂತ್ರ್ಯಕ್ಕಾಗಿ ಸಹಕರಿಸಿ ಹೋರಾಡಿದ ಮಹಿಳೆಯರು ಇದ್ದಾರೆಂಬುದು ನಮ್ಮ ನಿಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಈ ಸ್ವಾತಂತ್ರ್ಯಯಜ್ಞದಲ್ಲಿ ಹವಿಸ್ಸಿನಂತೆ ತಮ್ಮ ಜೀವನವನ್ನೇ ಸಮರ್ಪಿಸಿದ ನಾರೀಶಕ್ತಿಗೆ ಶತಕೋಟಿ ನಮನಗಳು. ಮುಂದಿನ ಪೀಳಿಗೆಗೆ ಇವರುಗಳು ನಡೆದು ಬಂದ ಹಾದಿಯೇ ದಾರಿ ದೀಪ.

"ಭಾರತ್‌ಮಾತಾ ಕೀ ಜೈ"

ವಂದೇ ಮಾತರಂ




Founder President

# Athreya Educational Institutions

K-12 School (ICSE & STATE Syllabus)

**Kindegarten**

**ICSE - 1ST TO 10th STD**

**STATE - 8TH - 10TH STD**

**ATHREYA COMPOSITE PU COLLEGE**

**SCIENCE AND COMMERCE - with Integrated IIT-JEE, CET AND NEET COACHING)**

# ಎ.ಬಿ.ಆರ್.ಎಸ್.ಎಂ: ಒಂದು ಪರಿಚಯ



– ಶಿವಾನಂದ ಸಿಂಧನಕೇರಾ
ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ,
ಎ.ಬಿ.ಆರ್.ಎಸ್.ಎಂ, ದೆಹಲಿ

1978. ಭೂಪಾಲ್‌ನ ಮಹಾರಾಷ್ಟ್ರಭವನದಲ್ಲಿ ಬೇರೆ ಬೇರೆ ರಾಜ್ಯಗಳ ಶಿಕ್ಷಕ ಸಂಘಟನೆಗಳ ಸಭೆ ನಡೆದಿತ್ತು. ಸಭೆ ಮುಕುಂದರಾವ್ ಕುಲಕರ್ಣಿಯವರ ನೇತೃತ್ವದಲ್ಲಿ ನಡೆದಿತ್ತು. ಶಿಕ್ಷಕರ, ಶಿಕ್ಷಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಚಿಂತನೆ ನಡೆದಿತ್ತು. ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ಹಿಡಿದು ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಒಳಗೊಂಡಂತೆ ಒಂದು ಸಂಘಟನೆಯನ್ನು ಅಸ್ತಿತ್ವಕ್ಕೆ ತರಬೇಕೆಂದು ನಿರ್ಧಾರವಾಯಿತು. ಫಲವಾಗಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ಎ.ಬಿ.ಆರ್.ಎಸ್.ಎಂ)ವು 1988ರಲ್ಲಿ ಜನ್ಮ ತಾಳಿತು. ಪ್ರಾರಂಭದಲ್ಲಿ ಕೃ.ನರಹರಿಯವರು ಅಧ್ಯಕ್ಷರಾಗಿ ನಂತರದ ಮೂರು-ನಾಲ್ಕು ವರ್ಷಗಳು ಮುಕುಂದರಾವ್ ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಸಂಘಟನೆಯು ಕಾರ್ಯನಿರ್ವಹಿಸಿತು. ಆ ನಂತರದಲ್ಲಿ ಮತ್ತೆ ಕೃ.ನರಹರಿಯವರು ಅಧ್ಯಕ್ಷರಾಗಿ ಮುಂದುವರೆದಿದ್ದರೂ ಸಹ ಮುಕುಂದರಾವ್ ಕುಲಕರ್ಣಿಯವರು ದೇಶದಾದ್ಯಂತ ಪ್ರವಾಸ ಮಾಡುತ್ತಾ, ಸಂಘಟನೆಯನ್ನು ಬಲಪಡಿಸಲು ಪೂರ್ಣ ಪ್ರಯತ್ನ ಮಾಡಿದರು. ಭಾರತೀಯ ಶಿಕ್ಷಣ ಮಂಡಲ ಎಂಬ ಸಂಘಟನೆಗೂ ಮುಕುಂದರಾವ್ ಕುಲಕರ್ಣಿಯವರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದುದರಿಂದ ಶ್ರೀ ರಜ್ಜೂಭೈಯ್ಯಾ ಅವರ ಸಲಹೆಯ ಮೇರೆಗೆ ಎರಡೂ ಸಂಘಟನೆಗಳನ್ನು ಪ್ರತ್ಯೇಕ ಮಾಡಲು ನಿರ್ಧರಿಸಲಾಯಿತು. ಅದರಂತೆ ಶೈಕ್ಷಣಿಕ ಅಭಿವೃದ್ಧಿಯ ಕಾರ್ಯವನ್ನು ಭಾರತೀಯ ಶಿಕ್ಷಣ ಮಂಡಲವೂ, ಶಿಕ್ಷಕರಿಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘವೂ ನಿರ್ವಹಿಸತಕ್ಕದ್ದೆಂದು ನಿಗದಿಪಡಿಸಿಕೊಳ್ಳಲಾಯಿತು.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಸಂಘಟನೆಯು ಇತರ ಶಿಕ್ಷಕ ಸಂಘಟನೆಗಳಿಗಿಂತ ಮೂರು ಅಂಶಗಳಿಂದ ತನ್ನದೇ ವೈಶಿಷ್ಟ್ಯವನ್ನು ಹೊಂದಿದೆ.

1. ಸರಕಾರಿ ಉನ್ನತ ವಿಶ್ವವಿದ್ಯಾಲಯಗಳಲ್ಲದೇ ಇತರೇ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳೂ ಕೂಡ ಈ ಸಂಘಟನೆಯಲ್ಲಿ ಸೇರಿಕೊಂಡಿವೆ.
2. ಮಹಿಳಾ ವಿಭಾಗಕ್ಕೂ ಕೂಡ ಸಂಘಟನೆಯಲ್ಲಿ ಪ್ರಮುಖ ಜವಾಬ್ದಾರಿಯಿದೆ.
3. ಸಂಘಟನೆಯಲ್ಲಿ ಬೋಧಕೇತರ ಸಿಬ್ಬಂದಿಗೂ ಕೂಡ ಅವಕಾಶವನ್ನು ಕಲ್ಪಿಸುವ ಚಿಂತನೆಯನ್ನು ಮಾಡಲಾಗುತ್ತಿದೆ.

ರಾಷ್ಟ್ರೀಯ ಚಿಂತನೆಯ ಆಧಾರದ ಮೇಲೆ ದೇಶದ ಇತಿಹಾಸ, ಸಂಸ್ಕೃತಿ, ಪರಂಪರೆ ಮತ್ತು ಮೌಲ್ಯಗಳನ್ನು ಶಿಕ್ಷಕರ ಮೂಲಕ ಶೈಕ್ಷಣಿಕ ಪರಿಸರವನ್ನು ಉತ್ತಮ ಪಡಿಸುವುದರೊಂದಿಗೆ ದೇಶವನ್ನು ಅಭಿವೃದ್ಧಿ ಯತ್ತ ಮುನ್ನಡೆಸುವ ಗುರಿಯೊಂದಿಗೆ ಸಂಘಟನೆಯು ಕೆಲಸ ಮಾಡುತ್ತಿದೆ. ಪ್ರಾಥಮಿಕ ಶಾಲೆಯ ಶಿಕ್ಷಕರಿಂದ ಹಿಡಿದು ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರನ್ನು ಒಳಗೊಂಡಂತೆ ದೇಶದ ಇಪ್ಪತ್ತೈದು ರಾಜ್ಯಗಳಲ್ಲಿ ಸಕ್ರಿಯವಾಗಿ ಎ.ಬಿ.ಆರ್.ಎಸ್.ಎಂ. ನಿರಂತರವಾಗಿ ಕಾರ್ಯಕ್ರಮಗಳ ಮೂಲಕ ಚಟುವಟಿಕೆಗಳನ್ನು ನಡೆಸುತ್ತಿದೆ. ಎ.ಬಿ.ಆರ್.ಎಸ್.ಎಂ.ನ ಧ್ಯೇಯವಾಕ್ಯ **'ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ, ಶಿಕ್ಷಕನ ಹಿತಕ್ಕಾಗಿ ಸಮಾಜ'**. ಈ ಗುರಿಯೊಂದಿಗೆ ಭಾರತೀಯ ಜ್ಞಾನಪರಂಪರೆಯ ವಾರಸುದಾರರನ್ನು ನಿರ್ಮಾಣ ಮಾಡುವುದೇ ಶೈಕ್ಷಿಕ ಮಹಾಸಂಘದ ಉದ್ದೇಶ. ದೇಶದ ಇಪ್ಪತ್ತೈದು ರಾಜ್ಯಗಳಲ್ಲಿ ಮೂವತ್ತೊಂಭತ್ತು ರಾಜ್ಯ ಸಂಘಟನೆಗಳು ಹಾಗೂ ನೂರೈವತ್ತಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಲ್ಲಿ

ಹನ್ನೆರಡು ಲಕ್ಷಕ್ಕೂ ಅಧಿಕ ಸದಸ್ಯರನ್ನು ಹೊಂದಿರುವ ವಿಶ್ವದ ಅತ್ಯುನ್ನತ ಶಿಕ್ಷಕ ಸಂಘಟನೆ. ಶಿಕ್ಷಣದ ಮೂಲಕ ಸಮಗ್ರ ಅಭಿವೃದ್ಧಿ ಮತ್ತು ಬದಲಾವಣೆ, ಶಿಕ್ಷಕರ ವ್ಯಕ್ತಿತ್ವ ವಿಕಾಸ, ಶಿಕ್ಷಕರ ಕಲ್ಯಾಣ ಮತ್ತು ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಅವಿರತ ಪ್ರಯತ್ನ ಮಾಡುತ್ತಿದೆ. ದೇಶದ ಶಿಕ್ಷಣದ ನೀತಿ–ನಿರೂಪಣೆಯಲ್ಲಿ ಸಹಭಾಗಿತ್ವ, ಯು.ಜಿ.ಸಿ. ಎನ್.ಸಿ.ಇ.ಆರ್.ಟಿ, ಎ.ಐ.ಸಿ.ಟಿ.ಇ ಹೀಗೆ ಹಲವಾರು ಶೈಕ್ಷಣಿಕ ಹಾಗೂ ಸಂಶೋಧನಾ ಸಂಸ್ಥೆಗಳ ಜೊತೆ ನಿರಂತರ ಸಂಪರ್ಕವಿಟ್ಟುಕೊಂಡು ಪ್ರಯತ್ನಶೀಲವಾಗಿದೆ.

ಎ.ಬಿ.ಆರ್.ಎಸ್.ಎಂ.ನ ಸ್ಥಾಪನೆಯು ಮಹಾರಾಷ್ಟ್ರ ರಾಜ್ಯದ ವಿಧಾನಪರಿಷತ್ ಸದಸ್ಯರಾಗಿದ್ದ ಮುಕುಂದ ರಾವ್ ಕುಲಕರ್ಣಿ ಮತ್ತು ಕರ್ನಾಟಕ ರಾಜ್ಯದ ವಿಧಾನಪರಿಷತ್ ಸದಸ್ಯರಾಗಿದ್ದ ಕೃ. ನರಹರಿ ಹೀಗೆ ಹಲವಾರು ಮಹನೀಯರ ದೂರದೃಷ್ಟಿಯಿಂದ ಆಗಿದೆ.

## ಎ.ಬಿ.ಆರ್.ಎಸ್.ಎಂ ಕಾರ್ಯಕ್ರಮಗಳು

**ಕರ್ತವ್ಯಬೋಧ ದಿವಸ್:** ಕಾರ್ಯಕ್ರಮವು ಸ್ವಾಮಿ ವಿವೇಕಾನಂದ ಜಯಂತಿ (ಜನವರಿ 12) ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸ್ ಜಯಂತಿ (ಜನವರಿ 23) ಆಧಾರವಾಗಿ ಇಟ್ಟುಕೊಂಡು, ಇಬ್ಬರು ಮಹಾಪುರುಷರನ್ನು ಸ್ಮರಣೆ ಮಾಡುವ ಉದ್ದೇಶದಿಂದಾಗಿದೆ. ಶಿಕ್ಷಕರಲ್ಲಿ ಕೌಟುಂಬಿಕ, ಸಾಮಾಜಿಕ, ರಾಷ್ಟ್ರೀಯ ಜವಾಬ್ದಾರಿ ಮತ್ತು ಕರ್ತವ್ಯಪ್ರಜ್ಞೆ ಮೂಡಿಸುವುದೇ ಕರ್ತವ್ಯಬೋಧ ದಿವಸ್ ಕಾರ್ಯಕ್ರಮದ ಗುರಿಯಾಗಿದೆ. ನಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸಿದ ಅನೇಕ ಸಂತರು, ಶಿಕ್ಷಣತಜ್ಞರು, ವಿಶ್ವ ವಿದ್ಯಾನಿಲಯದ ಕುಲಪತಿಗಳು ಮತ್ತು ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೀಗೆ ಹಲವಾರು ವ್ಯಕ್ತಿಗಳು ಕಾರ್ಯಕ್ರಮದ ಮಹತ್ತ್ವ ಮತ್ತು ವೈಶಿಷ್ಟ್ಯವನ್ನು ಗುರುತಿಸಿ ಪ್ರಶಂಸಿಸಿದ್ದಾರೆ.

**ವರ್ಷಪ್ರತಿಪದ :** ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ವರ್ಷದ ಪ್ರಾರಂಭ ತುಂಬಾ ಮಹತ್ತ್ವದ್ದಾಗಿದೆ. ವೈಜ್ಞಾನಿಕ ತಳಹದಿಯ ಮೇಲೆ ಪ್ರಕೃತಿಯಲ್ಲಿ ಆಗುವ ಬದಲಾವಣೆಯನ್ನು ಆಧರಿಸಿ ಭಾರತೀಯರಿಗೆ ಹೊಸವರ್ಷದ ಆಚರಣೆಯು 'ವರ್ಷ ಪ್ರತಿಪದ' ಯುಗಾದಿ ಹಬ್ಬದಿಂದ ಪ್ರಾರಂಭವಾಗುತ್ತದೆ. ನಮ್ಮ ಪೂರ್ವಜರು ಪಾಶ್ಚಾತ್ಯ ದೇಶಗಳ ಕ್ಯಾಲೆಂಡರ್ ಪ್ರಕಾರ ಜನವರಿ ಒಂದರಂದು ಹೊಸ ವರ್ಷಾಚರಣೆ ಮಾಡುವುದು ಸರಿಯಲ್ಲ ಎಂದು ಮನಗಂಡು, ಚಂದ್ರ, ಭೂಮಿ, ಗ್ರಹಗಳ ಮತ್ತು ಸೂರ್ಯ ಚಲನೆಯಿಂದ ಋತುಗಳಲ್ಲಿ, ಪಂಚಭೂತಗಳಲ್ಲಿ ಆಗುವ ಪರಿವರ್ತನೆ ಮತ್ತು ಪ್ರಕೃತಿಯಲ್ಲಿ ಆಗುವ ಮಹತ್ತರ ಬದಲಾವಣೆ ನೋಡಿ ಯುಗಾದಿ ಹಬ್ಬದಂದು ಹೊಸವರ್ಷಾಚರಣೆ ಆಚರಿಸಬೇಕೆಂದು ನಿರ್ಧರಿಸಿದರು. ವರ್ಷಪ್ರತಿಪದ ಶಿಕ್ಷಕರ ಮೂಲಕ ಮುಂದಿನ ಪೀಳಿಗೆಗೆ ಇವೆಲ್ಲದರ ಮಹತ್ತ್ವದ ಕಾರ್ಯಕ್ರಮವಾಗಿದೆ.

**ಗುರುವಂದನ :** ಎ.ಬಿ.ಆರ್.ಎಸ್.ಎಂ.ನ ಇನ್ನೊಂದು ಮಹತ್ತ್ವದ ಕಾರ್ಯಕ್ರಮವೆಂದರೆ ಆಷಾಢ ಮಾಸದ ಗುರು ಪೂರ್ಣಿಮೆಯಂದು 'ಗುರುವಂದನ' ಆಚರಣೆ. ಗುರು ಮತ್ತು ಶಿಷ್ಯರ ಸಂಬಂಧ ತಿಳಿಸುವಂತಹ ಗುರುವಂದನಾ ಕಾರ್ಯಕ್ರಮ ಅತ್ಯಂತ ಮಹತ್ತ್ವದ್ದಾಗಿದೆ. ಆದಿಗುರು ವೇದವ್ಯಾಸರಿಂದ ಗುರುಪರಂಪರೆಯನ್ನು ಸ್ಮರಿಸುವ ಮೂಲಕ ನಮ್ಮ ದೇಶದಲ್ಲಿ ಗುರುಗಳು, ಋಷಿಗಳು, ಸಂತರು, ದಾರ್ಶನಿಕರು ನೀಡಿದ ಜ್ಞಾನ ಪರಂಪರೆಯ ಅರಿವನ್ನು ಶಿಕ್ಷಕರಿಗೆ ತಿಳಿಸುವ ಕಾರ್ಯಕ್ರಮ ಇದಾಗಿದೆ.

ಶಿಕ್ಷಕರಿಗೆ ಕಾರ್ಯಾಗಾರಗಳು, ಸೆಮಿನಾರ್‌ಗಳು, ಅಂತಾರಾಷ್ಟ್ರೀಯ ಸಂಗೋಷ್ಠಿಗಳು, ವಿಷಯಾಧಾರಿತ ಕಾರ್ಯಾಗಾರಗಳು, ಶಾಶ್ವತ ಜೀವನಮೌಲ್ಯಗಳ ಬಗ್ಗೆ ಕಾರ್ಯಕ್ರಮಗಳು ಹೀಗೆ ಹಲವಾರು ಕಾರ್ಯಕ್ರಮಗಳ ಮೂಲಕ ಶಿಕ್ಷಕರ ಜ್ಞಾನಮಟ್ಟವನ್ನು ಹೆಚ್ಚಿಸುವುದಾಗಿದೆ. ಶಿಕ್ಷಕರ ಸಮಸ್ಯೆಗಳನ್ನೂ ಕೈಗೆತ್ತಿಕೊಂಡು, ಕೆಲವು ಸಂದರ್ಭಗಳಲ್ಲಿ ಆಂದೋಲನಗಳನ್ನು ಮಾಡುವುದರ ಮೂಲಕ ಮತ್ತು ಸರ್ಕಾರದ ಜೊತೆಗೆ ಮಾತುಕತೆ ನಡೆಸುವುದರೊಂದಿಗೆ ಪರಿಹಾರ ಕೊಡಿಸುವ ಕಾರ್ಯ

ವನ್ನು ಎ.ಬಿ.ಆರ್.ಎಸ್.ಎಂ ನಿರಂತರವಾಗಿ ಮಾಡುತ್ತಾ ಬಂದಿದೆ.

ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಣೆ ನಿಮಿತ್ತ ಎರಡು ಪ್ರಮುಖ ಕಾರ್ಯಕ್ರಮಗಳ ಯೋಜನೆ ರೂಪಿಸುವುದರೊಂದಿಗೆ ಯಶಸ್ವಿ ಮಾಡುವ ನಿಟ್ಟಿನಲ್ಲಿ ಎ.ಬಿ.ಆರ್.ಎಸ್.ಎಂ ಪ್ರಯತ್ನಶೀಲವಾಗಿದೆ. ಮೊದಲನೇ ಕಾರ್ಯಕ್ರಮ **'ಹಮಾರಾ ವಿದ್ಯಾಲಯ್ ಹಮಾರಾ ತೀರ್ಥಕ್ಷೇತ್ರ'** (ನಮ್ಮ ವಿದ್ಯಾಲಯ ನಮ್ಮ ತೀರ್ಥಕ್ಷೇತ್ರ.) ಇದರ ಮುಖಾಂತರ ವಿಶೇಷವಾಗಿ ಸರಕಾರಿ ಶಾಲೆಗಳ ಶೈಕ್ಷಣಿಕ ಮತ್ತು ಭೌತಿಕ ಅಭಿವೃದ್ಧಿಗಾಗಿ ಪ್ರತಿ ರಾಜ್ಯದಲ್ಲಿ ಕನಿಷ್ಠ ಎಪ್ಪತ್ತೈದು ಶಾಲೆಗಳನ್ನು ದತ್ತು ತೆಗೆದುಕೊಂಡು ಪರಿವರ್ತನೆ ಮಾಡುವ ಯೋಜನೆ ಇದಾಗಿದೆ.

ಎರಡನೇ ಕಾರ್ಯಕ್ರಮ, ಪ್ರತಿಶಾಲೆಗಳಲ್ಲಿ ಏಕಕಾಲಕ್ಕೆ ಅಂದರೆ ಆಗಸ್ಟ್ ಒಂದು, 2022 ರಂದು ಸ್ವಾತಂತ್ರ್ಯ ಅಮೃತಮಹೋತ್ಸವದ ಆಚರಣೆ ನಿಮಿತ್ತ, **'ಇಂಡಿಯಾ'ದಿಂದ 'ಭಾರತ'ದೆಡೆಗೆ** ಈ ಶೀರ್ಷಿಕೆ ಅಡಿಯಲ್ಲಿ ದೇಶದ 2,10,000ಕ್ಕೂ ಅಧಿಕ ಶಾಲೆಗಳಲ್ಲಿ ಕಾರ್ಯಕ್ರಮ ನಡೆಸಿರುವುದು ಎ.ಬಿ.ಆರ್.ಎಸ್.ಎಂ.ನ ಸಂಘಟನಾಶಕ್ತಿಯ ದ್ಯೋತಕವಾಗಿದೆ. ಕಾರ್ಯಕ್ರಮದ ನಿಮಿತ್ತ ನಿವೃತ್ತ ಸೈನಿಕರನ್ನು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಮತ್ತು ಹುತಾತ್ಮರಾದವರನ್ನು ಗುರುತಿಸಿ, ಸನ್ಮಾನಿಸಿದ ಕಾರ್ಯಕ್ರಮ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಲಾಗಿದೆ.

ಈ ಕಾರ್ಯಕ್ರಮದ ಮೂಲಕ ಸಮಾಜದಲ್ಲಿ, ವಿದ್ಯಾರ್ಥಿಗಳಲ್ಲಿ ಮತ್ತು ಶಿಕ್ಷಕರಲ್ಲಿ ವಿಶೇಷ ಜಾಗೃತಿ, ಮಾತ್ರವಲ್ಲದೆ ಶೈಕ್ಷಣಿಕ ಜಗತ್ತಿನಲ್ಲಿಯೂ ಬಹಳ ದೊಡ್ಡ ಸಂಚಲನವನ್ನು ಮೂಡಿಸಿದೆ.

ಪ್ರತಿ ವರ್ಷ ಮೂರು ಜನ ಶಿಕ್ಷಣ ತಜ್ಞರನ್ನು ಆಯ್ಕೆಮಾಡಿ ಅವರಿಗೆ ರಾಷ್ಟ್ರೀಯ ಶಿಕ್ಷಕ ಸಮ್ಮಾನ ಕಾರ್ಯಕ್ರಮದ ಮೂಲಕ **'ಶಿಕ್ಷಾಭೂಷಣ'** ಪ್ರಶಸ್ತಿ ನೀಡಿ, ಅವರಿಗೆ ಒಂದು ಲಕ್ಷ ನಗದು, ಬೆಳ್ಳಿಫಲಕ ಮತ್ತು ಸಮ್ಮಾನ ಪತ್ರ ನೀಡಲಾಗುತ್ತದೆ. ಸಮ್ಮಾನ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ದೇಶದ ವಿವಿಧ ರಾಜ್ಯಗಳ ನಮ್ಮ ಸಂಘಟನೆಯ ಪ್ರತಿಯೊಬ್ಬ ಸದಸ್ಯರಿಂದ ಒಂದು ನೂರು ರೂಪಾಯಿ ಸಂಗ್ರಹಿಸಿ ಭರಿಸುವ ವ್ಯವಸ್ಥೆ ಮಾಡಲಾಗಿದೆ.

**'ಶಿಕ್ಷಕರಿಂದ,**

**ಶಿಕ್ಷಕರಿಗಾಗಿ ಮತ್ತು**

**ಶಿಕ್ಷಕರಿಗೋಸ್ಕರ'** ನಡೆಸುವ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿದೆ.

ಶೈಕ್ಷಿಕ ಮಹಾಸಂಘ ಪ್ರಾರಂಭವಾದಾಗಿನಿಂದ ಪ್ರತಿ ಮೂರು ವರ್ಷಕ್ಕೊಮ್ಮೆ ಅಖಿಲ ಭಾರತೀಯ ಮಟ್ಟದ ರಾಷ್ಟ್ರೀಯ ಅಧಿವೇಶನ ನಡೆಸುವ ಯೋಜನೆ ರೂಪಿತವಾಗಿದೆ. ಈ ಅಧಿವೇಶನದಲ್ಲಿ ದೇಶದ ಇಪ್ಪತ್ತೈದು ರಾಜ್ಯಗಳ (ಜಮ್ಮು–ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ) ಪ್ರತಿ ಜಿಲ್ಲೆಯ ಪ್ರತಿನಿಧಿಗಳು ಭಾಗವಹಿಸುತ್ತಾರೆ. ಈ ಕಾರ್ಯಕ್ರಮದ ಮೂಲಕ ಇಡೀ ಭಾರತ ಕಣ್ಣ ಮುಂದೆ ಬರುತ್ತದೆ. ಎಲ್ಲಾ ಜಿಲ್ಲಾ ಪ್ರತಿನಿಧಿಗಳಿಗೆ ಎ.ಬಿ.ಆರ್.ಎಸ್.ಎಂ.ನ ವಿಶ್ವರೂಪ ದರ್ಶನವಾಗಿ, ಶಕ್ತಿಯನ್ನು ಪಡೆದು ಹೆಚ್ಚಿನ ರೀತಿಯಲ್ಲಿ ಸಂಘಟನೆ ಮತ್ತು ಶೈಕ್ಷಣಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ರಾಷ್ಟ್ರೀಯ ಅಧಿವೇಶನ ಸಹಕಾರಿಯಾಗುತ್ತದೆ. ಇಲ್ಲಿಯವರೆಗೆ ಏಳು ರಾಷ್ಟ್ರೀಯ ಅಧಿವೇಶನಗಳು ಯಶಸ್ವಿಯಾಗಿ ನಡೆದಿವೆ. 2022ರ ನವೆಂಬರ್ 11, 12 ಮತ್ತು 13ರಂದು ಬೆಂಗಳೂರಿನಲ್ಲಿ 8ನೇ ರಾಷ್ಟ್ರೀಯ ಅಧಿವೇಶನ ನಡೆಯಲಿದೆ.


ಹೀಗೆ ಹಲವಾರು ಕಾರ್ಯಕ್ರಮಗಳ ಮೂಲಕ ಎ.ಬಿ.ಆರ್. ಎಸ್.ಎಂ. ಭಾರತದೇಶದಲ್ಲಿ ಶೈಕ್ಷಣಿಕ ಪರಿವರ್ತನೆ ಮಾಡುವ ಉದ್ದೇಶದಿಂದ ನಿರಂತರವಾಗಿ ಕೆಲಸ ಮಾಡುವ ದೇಶದ ಅತ್ಯಂತ ದೊಡ್ಡ ಸಂಘಟನೆಯಾಗಿದೆಯೆಂದು ಹೆಮ್ಮೆಯಿಂದ ಹೇಳಬಹುದು.

# युवा क्रान्तिकारी डॉ. केशव बलिराम हेडगेवार

**डॉ. गीताराम शर्मा**
एस.बी.पी., राजकीय महाविद्यालय,
डूंगरपुर (राज.)



कोई छोटा सा मेघखण्ड कथमपि विराट सूर्यमण्डल को तो नहीं ढक सकता लेकिन जिसकी आँखें मेघखण्ड से ढकी हों और उसे अमित तेजस्वी सूर्य दिखाई नहीं दे तो उससे सूर्य का तेज तो कम नहीं हो जाता। ऐसी ही मनःस्थिति तब होती है जब स्वतन्त्रता आन्दोलन में डॉ. बलिराम हेडगेवार और संघ की भूमिका से पूर्णतः अनभिज्ञ किन्तु हठात् ज्ञानाभिमानपोषी कुतर्क यदा कदा सुनायी देते हैं। स्वतन्त्रता आन्दोलन की समग्र चर्या के अध्येता सम्यक् प्रकार से यह जानते हैं कि डॉ. केशव बलिराम हेडगेवार में राष्ट्र भक्ति के संस्कार मानो जन्मजात ही अनुस्यूत थे जो स्वतंत्रता आन्दोलन का संसर्ग पाकर विराट रुप में प्रस्फुटित होने लगे थे। कुछ प्रतिनिधि घटनाओं से उनके स्वातन्त्र्य चेतना विषयक संस्कारों से साक्षात् संभव है यथा – 22 जून 1897 की घटना है जब ब्रिटेन की महारानी विक्टोरिया के राज्यारोहण के साठ वर्ष पूर्ण होने के उपलक्ष में आयोजित उत्सवों में परतन्त्र भारत के विद्यालयों में मिठाई बाँटी जा रही थी। ऐसी ही मिठाई जब 9 वर्षीय बालक केशव के विद्यालय में बांटी गयी तो केशव ने स्वयं को मिली मिठाई इस प्रतिक्रिया के साथ फेंक दी कि - "यह हमारी महारानी नहीं है इसलिए उनके उत्सव की मिठाई हमें क्यों?" इसी तरह 1901 में इग्लैंड के राजा एडवर्ड सप्तम के राज्यारोहण के अवसर पर राजनिष्ठ लोगों ने देश के अन्य भागों की तरह नागपुर में भी आतिशबाजी का आयोजन किया था। इस कार्यक्रम को देखने के लिए उतावले मित्रों को बाल केशव ने यह समझाते हुए रोका कि - "विदेशी राजा का राज्यारोहण उत्सव मनाना हमारे लिए शर्म की बात है। बचपन में जिन दिनों विद्यार्थी केशव के मन को छत्रपति शिवाजी की संकल्प शक्ति, शौर्य, राष्ट्र भक्ति के गुण उत्तरोत्तर राष्ट्र प्रेम की ओर प्रेरित कर रहे थे उन्हीं दिनों नागपुर के सीताबर्डी के किले के ऊपर इंग्लैंड के ध्वज "यूनियन जैक" को फहरता देख बाल केशव के मन ने शिवाजी की गुरिल्ला युद्ध पद्धति के प्रयोग की



ಎಷ್ಟು ಕಾಲ ಬದುಕುವೇ ಎನ್ನುವುದಕ್ಕಿಂತ ಹೇಗೆ ಬದುಕುವೇ ಎಂಬುದೇ ಮುಖ್ಯ – ಸ್ವಾಮಿ ವಿವೇಕಾನಂದ

ठान ली और अपने कुछ मित्रों के साथ मिलकर लगभग दो किमी लम्बी सुरंग खोद डाली लेकिन यूनियन जैक तक पहुँचने से पूर्व ही भेद खुल जाने पर बुजर्गों ने डांट डपट कर भगा दिया। इस घटना का उल्लेख उनके चाचा मोरेश्वर हेडगेवार ने इस तरह किया है कि - "जिस उम्र में अन्यान्य बालक खेलने कूदने में मस्त रहते हैं, उसी आयु में अंग्रेजों को निकाल बाहर करने का यह उद्देश्य पूर्ण होने से पूर्व ही सेनापति अपने छोटे से गुरिल्ले दल के साथ घर वालों द्वारा बंदी बना लिया गया। केशव का बचपन जैसे-जैसे बीत रहा था वैसे-वैसे देशभक्ति का ज्वार भी मन में और अधिक आवेग से हिलोरे लेने लगा। कम उम्र में ही तिलक जी द्वारा उन दिनों प्रकाशित किये जा रहे तथा मध्य प्रान्त में पूरे आवेग से राष्ट्र भक्तिपूर्ण वैचारिक क्रांति के ध्वज वाहक केसरी और मराठा नामक समाचार पत्रों के वे नियमित पाठक थे। 19 वीं शताब्दी के प्रारम्भ में ही तिलक जी के प्रभाव से नागपुर राष्ट्रवादी आन्दोलनों के क्षितिज पर स्पष्टता से उभरने लगा था। 1902 में तिलक जी के भाषण सुनकर पहले से ही श्रद्धान्वित किशोर केशव बलिराम हेडगेवार का मन और अधिक राष्ट्र भाव से भर उठा। उभरते हुए राष्ट्रवादी परिवेश में जन मानस में श्रद्धा के केन्द्र शिवाजी की वीरता, राष्ट्रवादी विचार और समर्थ गुरु रामदास के शिक्षाप्रद उपदेशों ने हेडगेवार के मन को राष्ट्रोन्मुखी बनाने और क्रान्तिकारी आन्दोलनों की ओर खूब प्रेरित किया। राष्ट्र भक्त डॉ. बी.एस. मुंजे के सानिध्य में उन्होंने 1904 में बम बनाने की विधि सीखी।1905 में बंगाल विभाजन के समय मुंजे ने विद्यार्थी समाज नामक संगठन का गठन कर उससे विद्यार्थियों को जोड़ने का दायित्व हेडगेवार को ही दिया। इसी समय स्वदेशी विचार एवं उद्योग विस्तार के लिए स्थापित तिलक पैसा फण्ड एवं प्रसिद्ध क्रांतिकारी पी. एस. खानखोजे द्वारा स्थापित आर्यबान्धव वीथिका आदि संस्थाओं के लिए धन संग्रह और वैचारिक प्रचार-प्रसार के लिए प्रतिबद्ध होकर कार्य किया। बंग विभाजन के बाद राजनीतिक आन्दोलनों में बढ़ती हुयी विद्यार्थियों की बढ़ती हुयी सहभागिता से चिन्तित सरकार ने रिस्ले सर्कुलर द्वारा न केवल राजनैतिक आन्दोलनों और गतिविधियों में विद्यार्थियों की सहभागिता को प्रतिबन्धित कर दिया अपितु वन्दे मातरम् जैसे नारे लगाना भी दण्डनीय अपराध घोषित कर दिये । इसी प्रतिबन्धित अवधि में 1907 में केशव के नील सिटी स्कूल में वार्षिक निरीक्षण हेतु विद्यालय निरीक्षक का आगमन हुआ। जैसे ही निरीक्षक केशव की कक्षा में गये वैसे ही पहले से योजनाबद्ध कक्षा के सभी छात्रों ने सामूहिक रुप से वन्देमातरम् के साथ जोशीला स्वागत किया। इस अप्रत्याशित घटना से विद्यालय के वातावरण में मानो भूचाल ही आ गया। विद्यालय की प्रबन्ध समिति के चेयरमेन सर विपिन कृष्ण बोस के खूब समझाने पर भी जब विद्यार्थियों ने इस घटना के लिए माफी नहीं मांगी तो बोस ने कक्षा के सभी विद्यार्थियों को निष्कासित कर दिया। प्रतिक्रिया में विद्यार्थियों की दो माह हड़ताल चली, जुलूस, विरोध प्रदर्शन हुए। अन्ततः माता पिता और शिक्षकों के दबाव में अन्य छात्रों ने तो माफी माँग ली लेकिन केशव ने माफी माँगने से स्पष्ट मना करते हुए कहा कि - "अगर मातृभूमि की आराधना अपराध है तो मैं यह अपराध एक नहीं अनगिनत बार करूँगा और इसके लिए मिलने वाली सजा को भी सहर्ष स्वीकार करूँगा। इस घटना से केशव का विद्यालय से निष्कासन तो हुआ किन्तु वे एक लोकप्रिय युवा नेता के रूप में पहचाने जाने लगे साथ ही सरकारी अधिकारियों, यूरोपीय लोगों एवं राष्ट्र भक्तों के लिए भय और चिन्ता का वातावरण बना। उम्र बढ़ने के साथ ही हेडगेवार की क्रांतिकारी गतिविधियों में संलिप्तता और समवयस्क युवकों को संगठित करने की क्षमता उत्तरोत्तर बढ़ रही थी। हेडगेवार ने 1908 में पुलिस चौकी पर बम फेंका जो पास के किसी तालाब में गिरा यद्यपि पर्याप्त प्रमाण के अभाव में इस घटना के लिए कोई मुकदमा उन पर नहीं चलाया जा सका लेकिन इस घटना के दो माह बाद ही निकट के गाँव में दशहरे के अवसर पर प्रतिवर्ष होने वाले रावण दहन और सीमोल्लंघन के कार्यक्रम को अंग्रेजी दासता से जोड़ते हुए जोशीला भाषण दिया कि - "आज हम अनेक प्रकार की सीमाओं से बंधे हैं, उन्हें पार करना हमारा कर्तव्य है। सबसे बड़ी पीड़ा दायक और शर्मनाक बात हमारा परतंत्र होना है। परतंत्र रहना सबसे बड़ा अधर्म है। पापियों एवं परायों का अन्याय सहना भी पाप है। अतः आज विदेशी दासता के विरुद्ध खड़े होना, अंग्रेजों को सात समुद्र पार भेज देना ही सीमोल्लंघन का वास्तविक अर्थ होगा। रावण वध का आज तात्पर्य अंग्रेजी राज का अंत करना है।" उन्होंने इस अवसर पर युवकों के साथ सामूहिक वन्देमातरम् गाया। गुप्तचरों की सूचना पर इस घटना के कारण वे गिरफ्तार हुए। पर्याप्त दबाब के बाद भी उन्होंने इस

घटना के लिए माफी माँगने से स्पष्ट इनकार कर अंग्रेजी सत्ता को स्पष्ट और कड़ा सन्देश दिया। इस घटना के कारण स्कूल से निष्कासित कर दिये गये लेकिन सत्याग्रही और सत्वाभिमानी युवा निन्दा-स्तुति, सफलता-असफलता की परवाह किये बिना ध्येय पथ से किंचित् भी विचलित नहीं होते इसी पथ के अनुयायी केशव की न विद्योपार्जन की गति थमी और न क्रांतिकारी गतिविधियाँ मन्द हुयीं। लोक मान्य तिलक, महर्षि अरविन्द, डॉ. मुंजे की योजनानुसार यवतमाल की राष्ट्रीय शाला से उन्होंने दसवीं की परीक्षा अच्छे प्रतिशत से उत्तीर्ण कर यह प्रमाणित कर दिया कि स्पष्ट ध्येय. दढ इच्छाशक्ति, प्रबल पराक्रम युक्त, परिश्रम के आगे सभी अवरोध बहत बौने हो जाते हैं। राष्ट्र भक्ति से दीप्त हृदय युवा हेडगेवार तिलक के संरक्षण में आगे डाक्टरी की पढ़ाई के लिए कलकत्ता चले गये तथा वहाँ पढ़ाई के साथ-साथ अनुशीलन समिति में सक्रिय रहते हुए राष्ट्र व्यापी विप्लव को साकार करने के उद्देश्य में सक्रिय रहने लगे। कलकत्ता की अनुशीलन समिति उस समय की क्रान्तिकारी गतिविधियों के लिए खूब सक्रिय थी। महाराष्ट्र के गुप्त क्रान्तिकारियों की गतिविधियों को बंगाल की अनुशीलन समिति से जोड़कर सशक्त बनाने में हेडगेवार की सक्रियता सेतु बन गयी। यद्यपि डॉक्टरी की पढ़ाई के लिए नागपुर से कलकत्ता प्रस्थान करते समय हेडगेवार के पास डॉ. मुंजे द्वारा दिये गये परिचय पत्र के अतिरिक्त बहुत कुछ नहीं था लेकिन सफलता सत्व में संनिहित होती है संसाधनों में नहीं जैसे सात्विक विचारों के आलोक में अनेक अभावों के बीच भी उनकी स्वतन्त्रता की अदम्य आकांक्षा कभी दमित नहीं हो सकी। जैसी भवितव्यता वैसा ही संयोग यह लोकोक्ति तब साकार हुयी जब कलकत्ता के प्रसिद्ध नेशनल मैडीकल कॉलेज में केशव बलिराम को प्रवेश मिला। एक तो इस कालेज की समग्र शैक्षिक और प्रबन्धकीय संरचना राष्ट्र भक्ति और क्रान्तिकारी गतिविधियों के अनुकूल थी दूसरा हेडगेवार के मन में क्षणभर के लिए भी अविस्मरणीय 1857 जैसी महाक्रान्ति का पर्यावरण निर्माण की अदम्य आकांक्षा। इस संयोग का सुपरिणाम यह हुआ कि हेडगेवार की मित्रता और सर्वसमावेशी स्वभाव से नेशनल मैडिकल कॉलेज में अन्य प्रान्तों से अध्ययनार्थ आये हुए युवा छात्र अनुशीलन समिति से सहजता से जुड़ने लगे। यह वह सुयोग था जब एक तरफ अनुशीलन समिति में अनेक युवाओं के जुड़ने से महाविप्लव की आधार पीठ निर्मित हो रही थी तो दूसरी ओर डॉ. आशुतोष मुखर्जी, मोती लाल घोष, विपिन चन्द्र पाल, रासबिहारी बोस जैस राष्ट्रभक्तों से हेडगेवार की घनिष्ठता उत्तरोत्तर समृद्ध हो रही थी। इस सुयोग का वर्णन करते हुए हरदास ने लिखा है कि "हेडगेवार ने अपने सात्विक चरित्र, प्रतिबद्धता और असाधारण संगठन कौशल से नौजवान क्रांतिकारियों का दिल जीत लिया था, और उनके प्रति भक्ति भाव रखने वाले देशभक्तों की एक बड़ी जमात थी।" अपने जुझारू व्यक्तित्व और लोकसंग्रही प्रवृत्ति के कारण हेडगेवार बंगाल और अन्य प्रान्तों में चल रही क्रान्तिकारी गतिविधियों के लिए सेतु थे। मुख्य रूप से मध्य प्रान्त के क्रान्तिकारियों से समन्वय और हथियार पूर्ति में हेडगेवार की भूमिका असाधारण थी। क्रान्तिकारी आन्दोलनों के साथ उन्होंने बंगाल के दो जन आन्दोलनों में सक्रिय सहभागिता की। 1911 का दिल्ली दरबार बहिष्कार आन्दोलन, 1914 में सरकार द्वारा राष्ट्रीय मेडीकल कॉलेज की डिग्री न मानने की नीति के विरुद्ध जनमत तैयार करने के लिए आन्दोलन, इसी तरह के अनुशीलन समिति और वैसी ही अन्य समितियों के आन्दोलनों में अपनी प्रत्यक्ष सक्रियता के साथ-साथ युवकों के एक समूह को राष्ट्रभक्ति, सामाज सुधार के अनेक प्रकल्पों से जोड़ते हुए वे सफल सक्रिय युवा क्रान्तिकारी की भूमिका में थे। इस प्रकार पाँच वर्ष तक अनुशीलन समिति में सक्रिय रहते हुए डॉक्टर की डिग्री के साथ साथ मातृभूमि के लिए सर्वस्व समर्पण के संकल्प के साथ 1915 में वे नागपर लौटे। नागपर आकर धनार्जन की विपुल संभावनाओं की उपेक्षा कर मातृभूमि की आराधना को एक मात्र जीवन ध्येय मानकर आजीवन अविवाहित रहकर देश सेवा के लिए संकल्पित डॉ. हेडगेवार 1857 से भी बड़ा महासमर खड़ा करने की योजना में थे। इधर द्वितीय विश्वयुद्ध में अपनी संभावित पराजय से घबड़ाये अंग्रेजों के झांसे में आकर कांग्रेस के दोनों गुटों ने अंग्रेजों के विरुद्ध रुख थोड़ा नरम किया, लेकिन डॉ. हेडगेवार इससे सहमत नहीं थे। इस परिस्थिति का भारत की स्वतंत्रता के लिए सशक्त सशस्त्र क्रान्ति कामना से उन्होंने अनेक प्रान्तों की यात्राएँ कर युवकों को संगठित किया। स्वतन्त्रता की आकांक्षा से आपूरित हृदय डॉ. हेडगेवार की किसी नेता, संगठन अथवा व्यक्ति के प्रति सम्बन्ध की भी एक मात्र कसौटी उनके द्वारा

मातृभूमि के लिए त्याग, पूर्ण स्वतन्त्रता का समर्थन और निस्वार्थ भाव की देश सेवा ही थी | इसलिए लोकमान्य तिलक के प्रति अथाह श्रद्धा होने पर भी प्रथम विश्वयुद्ध के समय तिलक के नरम रुख से वे असहमत थे। डॉ. हेडगेवार ने कांग्रेस में रहते हुए बहु आयामी स्वतन्त्रता आन्दोलन में अपनी प्रतिबद्धतापूर्ण सहभागिता की। कांग्रेस के नागपुर अधिवेशन के बाद तो वे कांग्रेस के महत्त्वपूर्ण नेताओं में गिने जाने लगे। 1921 में वे मध्य प्रान्त के 12 सदस्यों वाले तिलक स्वराज्य फण्ड एवं नागपुर जिला कांग्रेस के लिए चुने गये। साम्राज्यवादी सत्ता के विरुद्ध गांधीजी के नेतृत्व में चलाये जा रहे असहयोग आन्दोलन में अपने व्यक्तिगत सम्बन्ध और असहमतियों का अतिक्रमण कर डॉ. हेडगेवार ने गांधीजी का अनुसरण किया। डॉ हेडगेवार के लिए किसी व्यक्ति अथवा विशिष्ट आग्रह से अधिक स्वतन्त्रता प्राप्ति का ध्येय महत्त्वपूर्ण था। वे सभी राष्ट्रवादी नेताओं, संस्थाओं और आन्दोलन विधियों को एक दूसरे के पूरक मानकर परस्पर सहयोग के पक्षधर थे। नागपुर में असहयोग आन्दोलन को नेतृत्वविहीन करने और कुचलने के लिए सरकार ने मई 1921 में डॉ. हेडगेवार सहित अनेक राष्ट्रभक्तों पर राजद्रोह का मुकदमा किया | डॉ. हेडगेवार को गिरफ्तार किया गया लेकिन वे तनिक भी विचलित नहीं हुए। न्यायालय में अपनी पैरवी स्वयं कर जमानत लेने से इनकार करते हुए उन्होंने कहा - "मेरी अन्तरात्मा मुझे बताती है कि- मैं निर्दोष हूँ। दमन की नीति सरकार की शातिर नीतियों के कारण पहले से ही भड़की आग में केवल ईंधन भरेगी। मुझे विश्वास है कि वह दिन दूर नहीं जब विदेशी शासन अपने पाप पूर्ण, कार्यों का फल भोगेगा। मुझे सर्वव्यापी ईश्वर के न्याय में विश्वास है। इसलिए मैं जमानत के आदेश का पालन करने से इनकार करता हूँ।" इस मुकदमे में उन्हें एक वर्ष के सश्रम कारावास की सजा हुयी, लेकिन वे तनिक भी विचलित नही हुए उनकी प्रतिक्रिया थी -" मातृभूमि की रक्षा करने हेत जेल तो क्या काले पानी जाने अथवा फांसी के तख्ते पर लटकने को भी हमें तैयार रहना चाहिए।" जेल से मुक्त होने के बाद अपने सम्मान में आयोजित समारोह में उन्होंने कहा- "राष्ट्र के सम्मुख सबसे उत्तम एवं श्रेष्ठ लक्ष्य रखना चाहिए और पूर्ण स्वतंत्रता की प्राप्ति से कम कोई ध्येय रखना उपयुक्त नहीं होगा।" इस प्रकार स्वतन्त्रता समर के जितने भी सम विषम आयाम हैं उन सबका उल्लेख मात्र भी इस अति सीमित कथ्य में संभव नहीं है लेकिन सब का सारभूत मन्तव्य है कि युवा क्रांतिकारी डॉ. बलिराम हेडगेवार पूरा जीवन स्वतंत्रता आन्दोलन के पूर्णतः प्रतिबद्ध और समर्पित रहा।

न केवल स्वतन्त्रता प्राप्ति के लिए अपितु स्वतन्त्रता के बाद भी स्व का शाश्वत स्फुरण प्रत्येक भारतीय में देशभक्ति के स्वभाव के रूप में स्थायी बनाने की दृष्टि से उन्होंने 1925 में विजयादशमी के दिन राष्ट्रीय स्वयं सेवक संघ की स्थापना की। वे स्वतंत्रता का उद्देश्य केवल भारत की भौगोलिक स्वाधीनता एवं राजनीतिक सत्ता हस्तान्तरण मात्र तक सीमित रखने के पक्षधर नहीं थे, अपितु उनके लिए स्वतन्त्रता का आन्दोलन भारत राष्ट्र के चिर अस्तित्व और अस्मिता बोध का प्रतीक था। इसलिए संघ की स्थापना से पूर्व युवा क्रान्तिकारी एवं बाद में कांग्रेस कार्यकर्ता के रूप में स्वतन्त्रता आन्दोलन में सतत् सक्रिय रहे। संघ की स्थापना का भी उनका उद्देश्य भारत को परम वैभव सम्पन्न पूर्ण स्वतन्त्र राष्ट्र बनाना था, जैसा कि श्री दत्तोपन्त ठेंगड़ी ने कहा है कि - "डॉ. हेडगेवार संघ को स्वतन्त्रता प्राप्ति के लिए तैयार कर रहे थे, परन्तु उनका लक्ष्य भारत को एक मजबूत, परम वैभवशाली राष्ट्र के रूप में स्थापित करना था और यह कार्य स्वतन्त्रता प्राप्ति के बिना संभव नहीं था।" संघ की स्थापना के बाद भी उन्होंने कांग्रेस की कुछ नीतियों से असहमत होते हुए भी स्वतन्त्रता आन्दोलन के सभी महत्त्वपूर्ण प्रकल्पों में संघ को कांग्रेस का सहयात्री बनाया। फिर चाहे साइमन कमीशन का विरोध हो या 26 जनवरी 1930 सम्पूर्ण भारत में स्वतन्त्रता दिवस मनाने की कांग्रेस की घोषणा हो अथवा सविनय अवज्ञा जैसे बडे आन्दोलन हों, सभी में डॉ. हेडगेवार और संघ दृढ़ता से कांग्रेस के साथ थे। वे ऐसे भव्य भारत के स्वप्न दृष्टा थे जो अपनी शाश्वत सांस्कृतिक, सामाजिक, आध्यात्मिक, राजनीतिक चेतना एवं विश्व वरेण्य ज्ञान विज्ञान के अमृत से विश्वभर में श्रेय और प्रेय का पथप्रदर्शक बने।

डॉ. हेडगेवार के लिए देशभक्ति का अभिप्राय समय आने पर देशानराग का प्रदर्शन मात्र नहीं रहा अपित वे देशभक्ति को ऐसा व्यापक जन्मजात संस्कार मानते थे जो राष्ट्र को सर्वोपरि

मानकर उसके लिए सर्वस्व समर्पण के लिए प्रेरित करे। उन्होंने देशभक्ति की दस सूत्रीय कसौटी तय की, जिसका उल्लेख डॉ. राकेश सिह्ना ने अपनी पुस्तक "डॉ. केशव बलिराम हेडगेवार" में इस प्रकार किया है - "देशभक्ति का अर्थ है हम जिस भूमि एवं समाज के लिए जन्मे हैं, उस भूमि एवं समाज के लिए आत्मीयता और प्रेम। जिस समाज में हमारा जन्म हुआ है, उसकी परंपरा एवं संस्कृति के प्रति लगाव एवं आदर। समाज के जीवन मूल्यों के प्रति विवेक पूर्ण निष्ठा । समाज/राष्ट्र के उत्कर्ष विकास के लिए सर्वस्व समर्पण करने के निमित्त उत्स्फूर्त करनेवाली प्रेरणा शक्ति। व्यक्ति निरपेक्ष समष्टिनिष्ठ जीवन का पवित्र गंगा प्रवाह। भौतिकताओं से दूर रहकर मातृभूमि और उसकी संतानों की निस्वार्थ सेवा । व्यक्तिगत आकांक्षाओं से अधिक राष्ट्र की आवश्यकताओं एवं अपेक्षाओं को महत्त्व। मातृभूमि के चरणों में अनन्य, निस्वार्थ, कर्तव्य कठोर जीवन कुसुमों की मादक सुगंध भरना। समाज एवं राष्ट्र को ही सर्वोच्च देवी देवता मानकर उसी की आराधना करना। संपूर्ण समाज में एकात्म भाव का आविष्कार करना।" डॉ. हजारी प्रसाद द्विवेदी ने ठीक ही कहा है कि - दुर्वार काल स्रोत सबको बहा देगा। स्वर्णाक्षरों में लिखी पंक्तियाँ भी क्रूर काल के थपेड़ों को बर्दाश्त नहीं कर सकेंगी। बस, वही बचेगा जिसे मनुष्य के हृदय में स्थान प्राप्त होगा। सचमुच डॉ. केशव बलिराम हेडगेवार ऐसे ही स्वतन्त्रचेता महापुरुष हैं जिन्हें मनुष्य के हृदय में स्थान प्राप्त है और होगा। जिनका बज्रादपि कठोर और कुसुमादपि कोमल व्यक्तित्व राष्ट्रभक्ति के लिए सदैव अपेक्षित - "सम्पत्तौ च विपत्तौ च महतां एक रुपता" जैसी उदात्त प्रेरणाएँ भरता रहेगा। जिन्होंने आजीवन मातृभूमि की आराधना में अपने निजी सुख दुख की उपेक्षा करते हुए नीति शास्त्र के इस सूत्र को साकार किया कि -"मनस्वी कार्यार्थी न गणपति सुखं वा दुःखम्। अर्थात् मनस्वी ध्येय को देखता है, उसमें आने वाले सुख दुःख को नहीं।।




# ಭಾರತೀಯ ಶಿಕ್ಷಣ ಪರಂಪರೆ

– ರಾಮಚಂದ್ರಭಟ್ ಕೋಟೆಮನೆ
ಹಿರಿಯ ವಿದ್ವಾಂಸರು,
ಮಾಜಿ ಉಪಕುಲಪತಿಗಳು,
ವೇದವಿಜ್ಞಾನ ಗುರುಕುಲ



ಇಚಿದು 'ಭಾರತೀಯ' ಎನ್ನುವ ಪದ ಶಿಕ್ಷಣ ಲೋಕದ ಮಹಾಮಂತ್ರವಾಗುತ್ತಿದೆ. ಅಭಾರತೀಯವಾದ, ಪರದೇಶೀಯವಾದ ವಿಚಾರಕ್ಕೆ ಮನಸೋತು ಮೊಗಲರ ಆಕ್ರಮಣದ ನಂತರದ ಕಾಲದಲ್ಲಿ ಮಾತ್ರವಲ್ಲ, ಪೋರ್ಚುಗೀಸರು, ಫ್ರೆಂಚರು, ಡಚ್ಚರು ಎಲ್ಲರ ವೈಭವಕ್ಕೆ ಮನಸೋತು ಭಾರತದೇಶದ ಶಿಕ್ಷಿತ ಮನಸ್ಸು ಒಪ್ಪನ್ನು ತಪ್ಪಾಗಿ, ತಪ್ಪನ್ನು ಒಪ್ಪಾಗಿ ಅರ್ಥೈಸಿಕೊಂಡು, ಅನೇಕ ಶತಮಾನಗಳವರೆಗೆ ದಾಸ್ಯವನ್ನು ಅನುಭವಿಸಿತು. ಅಂತಹ ದಾಸ್ಯಗಳಲ್ಲಿ ಶಿಕ್ಷಣಲೋಕದ ದಾಸ್ಯ ಬಹಳ ಭಯಾನಕವಾದುದು. ಏಕೆಂದರೆ ನಮ್ಮ ದೇಶದಲ್ಲಿ ಮನೆಯೇ ಅಂದರೆ ಕುಲವೇ ಶಾಲೆ. ಕುಲವೆಂಬ ಶಾಲೆಯಲ್ಲಿ ಕಲಿಯದವರು ಎಲ್ಲಿಯೂ ಕಲಿಯಲು ಸಾಧ್ಯವಿಲ್ಲ.

ಕುಲವೆಂಬ ಶಾಲೆಯಲ್ಲಿ ಅಧಿಶೀಲಸ್ಥರು ಅಂದರೆ ಮಗುವಿಗೆ ಜನ್ಮ ಕೊಟ್ಟ ತಾಯಿ ಎಂಟರಿಂದ ಹನ್ನೆರಡು ವರ್ಷದವರೆಗೆ ತನ್ನ ಕರ್ತವ್ಯ ನಿಭಾಯಿಸುತ್ತಾಳೆ. ತನ್ನ ಅಕ್ಕರೆಯ ಕಂದಮ್ಮ, ಅದು ಗಂಡೋ, ಹೆಣ್ಣೋ, ಅದಕ್ಕೆ ಶೀಲಶಿಕ್ಷಣ ಕೊಡುತ್ತಾಳೆ. ಶ್ರದ್ಧೆ ಮತ್ತು ಮೇಧೆ. ಈ ಎರಡು ವಿಶಿಷ್ಟವಾದ ಮಾನವಮಸ್ತಿಷ್ಕ ಶಕ್ತಿಗಳನ್ನು ಅವಳು ಪಥ್ಯಪಾಲನೆಯ ಮೂಲಕ, ಸಂಯಮದ ಮೂಲಕ ಯುಕ್ತ ಆಹಾರ, ಯುಕ್ತ ವಿಹಾರ, ಯುಕ್ತ ವ್ಯವಹಾರ, ಯುಕ್ತ ಭಾವನೆ, ಯುಕ್ತ ವಿಚಾರ– (ಇವಿಷ್ಟನ್ನು ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ) ಇವುಗಳ ಸಾಕಾರ ರೂಪಳಾಗಿಯೇ ಹೆತ್ತ ತಾಯಿ, ಅದರ ಜೊತೆಗೆ ತಂದೆ, ಅಜ್ಜ–ಅಜ್ಜಿ, ಮನೆಯ ಇತರ ಸದಸ್ಯರು, ಉಳಿದ ಬಂಧು–ಬಾಂಧವರು ಹಾಗೂ ಆ ಕುಲಕ್ಕೆ ಆಗಾಗ ಬರುತ್ತಿರುವ ಹಿತೈಷಿಗಳು ಇವರೆಲ್ಲರೂ ವ್ಯವಹರಿಸಿದಾಗ ಮನೆಯೇ ಪಾಠಶಾಲೆಯಾಗುತ್ತದೆ. ಅದೇ ಕುಲವೆಂಬ ಪಾಠಶಾಲೆಯೆನಿಸಿಕೊಳ್ಳುತ್ತದೆ. ಅಲ್ಲಿ ಮಗುವಿನ ವ್ಯಕ್ತಿತ್ವ ಅರಳುತ್ತದೆ. ಇದನ್ನೇ ನಾವು 'ಅಧಿಶೀಲಶಿಕ್ಷಣ' ಎಂದು ಕರೆಯುವುದು. ಇದೇ ಬಹಳ ಆಘಾತಕ್ಕೆ ಒಳಗಾಯಿತು. ಕಾರಣವೇನೆಂದರೆ, ಪರದೇಶೀಯರು ಆಕ್ರಮಣ ಮಾಡಿ ನಮ್ಮ ದೇಶದ ರಾಜಕೀಯ ಸೂತ್ರವನ್ನು ಹಿಡಿದುಕೊಂಡು ರಾಜನೆನಿಸಿಕೊಂಡರು. ನಮ್ಮ ಜನ 'ನ ವಿಷ್ಣುಃ ಪೃಥಿವೀಪತಿಃ' ಎನ್ನುವ ಭ್ರಮೆಗೆ ಒಳಗಾಗಿದ್ದರು. ಅಂದರೆ ವಿಷ್ಣುವಿನ ಅಂಶವಿಲ್ಲದಿದ್ದರೆ ಅವರು ರಾಜರಾಗುವುದೇ ಇಲ್ಲವೆಂದು. ಹಾಗಾಗಿ ನಮ್ಮಲ್ಲಿ ಎಷ್ಟು ಮೌಢ್ಯ, ಮಾಂದ್ಯ, ಅನುಕರಣೆ ಬೆಳೆಯಿತು ಎಂದರೆ ಯಾರು ಬಂದು ಹೇಗೆ ಬೇಕಾದರೂ ಆಕ್ರಮಣ ಮಾಡಿ ಸಿಂಹಾಸನದ ಮೇಲೆ ಕುಳಿತುಕೊಂಡರೂ ಅವನಲ್ಲಿ ದೇವತಾಂಶವನ್ನು ನೋಡುವುದು ಮತ್ತು ಅವನ ಆಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳುವುದು, ಅವನನ್ನು ಗದ್ಯಪದ್ಯಗಳಲ್ಲಿ ಹಾಡಿ ಹೊಗಳುವುದು. ನಂತರ ಅಲ್ಲಿ ಅವನಿಂದ ಪ್ರಸಾದ ಪಡೆದು 'ಜೀ ಹುಜೂರ್' ಎನ್ನುತ್ತಾ ವಂದಿಮಾಗಧ



ಮಕ್ಕಳಿಗೆ ಪ್ರಾಯೋಗಿಕ ಚಟುವಟಿಕೆ



ಪ್ರಾಚೀನ ಭಾರತದ ಸಮಗ್ರಶಿಕ್ಷಣ ಕೇಂದ್ರಗಳು


ರಾಗುವುದು. ಇದು ಬೆಳೆದುಹೋಯಿತು. ಇದು ಸಮಾಜದ ಸುಶಿಕ್ಷಿತ ವರ್ಗ ಉಚ್ಚವರ್ಗದವರು ಮಾಡುತ್ತಿದ್ದ ದಾಸ್ಯವೃತ್ತಿ. ಇನ್ನು ಸಾಮಾನ್ಯ ಜನರ ವಿಷಯಕ್ಕೆ ಬಂದರೆ, ಅವರೆಲ್ಲ ಸೈನಿಕರಾಗಿ ಸೇರಿ, ತಮ್ಮವರನ್ನೇ ಅಂದರೆ ಹಿಂದೂಗಳನ್ನೇ ಹೊಡೆದು ಹಾಕುವುದು ಎಲ್ಲಾ ನಡೆದುಹೋಯಿತು. ಒಟ್ಟಾರೆ ಈ ರಾಜಪಾಳ್ಯದವರಿಗೆ ಡೊಗ್ಗು ಸಲಾಮು ಹೊಡೆದ ಒಂದು ಸಾವಿರ ವರ್ಷಗಳ ಇತಿಹಾಸ ನಮ್ಮಲ್ಲಿದೆ. ಈ ಅಧ್ಯಾಯ ಈಗ ಪ್ರಕಾಶಕ್ಕೆ ಬರುತ್ತಿರುವುದರಿಂದಲೇ ಇವೆಲ್ಲವನ್ನೂ ಕೊಡವಿ ಏಳಬೇಕು ಅನ್ನುವ ವಿಚಾರ ನಮ್ಮ ಸಂಘದ ವಲಯದಲ್ಲಿ ಬಂದು, ನಾವು ಶಾಖಾ ಮೂಲಕ 1925ರಿಂದಲೂ ಈ ವಿಚಾರವನ್ನು ದೃಢವಾಗಿ ಜನ ಸಾಮಾನ್ಯರ ಮನಸ್ಸಿಗೆ ಮುಟ್ಟಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದೇವೆ. ಪರಿಣಾಮವಾಗಿ ಇವತ್ತಿನವರೆಗೆ ದಾಸ್ಯವಾಗಿದ್ದುದು ಈಗ 'ಭಾರತೀಯತೆ' ಎನ್ನುವುದು ಇವತ್ತಿನ ಶಿಕ್ಷಣದ ಮಹಾಮಂತ್ರವಾಗಿದೆ.

ಈ ವಂದಿಮಾಗಧ ವ್ಯವಹಾರ, ಡೊಗ್ಗು ಸಲಾಮು, ಪರದೇಶೀ ಬುದ್ಧಿ, ಅಂಧಾನುಕರಣೆ, ಮುಂತಾದುವು ಸಂಗೀತ, ಸಾಹಿತ್ಯ ಎಲ್ಲದರಲ್ಲಿಯೂ ಆಗಿತ್ತು. ಅದರಲ್ಲಿಯೂ ಪ್ರಮುಖವಾಗಿ ಪರಿಗಣಿಸಬೇಕಾದುದು ಶಿಕ್ಷಕ ಸಮಾಜದ ಮೇಲಾದ ಆಘಾತ. ಈ ಮಾನಸಿಕ ದಾಸ್ಯಕ್ಕೆ ಮಹಾಮಹಾ ಪಂಡಿತರೂ, ವಿದ್ವಾಂಸರೂ ಪರಕೀಯರ ಆಸ್ಥಾನದಲ್ಲಿ ಅವರನ್ನು ಹೊಗಳಿಕೊಂಡು ಕಾವ್ಯ ರಚನೆ ಮಾಡಿಕೊಂಡಿರುತ್ತಿದ್ದರು, ಕೆಲವು ಜನ. ಎಲ್ಲರೂ ಅಂತಲ್ಲ. ಇಷ್ಟರ ಮಧ್ಯದಲ್ಲಿಯೂ ಅನೇಕ ಮಹಾತ್ಮರು ನಂದಾದೀಪ ಹಚ್ಚಿಕೊಂಡು, ಗುಡಿಗೋಪುರ ಗಳನ್ನು ಬೆಳಗಿಸಿಕೊಂಡು ಭಾರತೀಯತೆಯನ್ನು, ಋಷಿಸಂಸ್ಕೃತಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದರು. ಆ ಕಾರಣಕ್ಕಾಗಿಯೇ ಈ ರೀತಿಯಲ್ಲಿ ಅಲ್ಲೋಲ ಕಲ್ಲೋಲವಾದರೂ, ಭಾರತದೇಶವನ್ನು ಒಡೆಯುವ ಕಾರ್ಯಗಳು ನಡೆದರೂ, ಈ ಒಡೆದುಹೋದ ಭಾರತದೇಶದಲ್ಲಿ 80 ಪ್ರತಿಶತ ಹಿಂದೂಗಳಿದ್ದಾರೆ, ಇನ್ನು ಕೆಲವರು ಕತ್ತಿ ಹಿಡಿದಿದ್ದಾರೆ, ಕೆಲವರು ಲೇಖನಿ ಹಿಡಿದಿದ್ದಾರೆ, ಮತ್ತೆ ಕೆಲವರು ಮಾಧ್ಯಮಗಳಲ್ಲಿ

ಮಾತನಾಡುತ್ತಾರೆ, ಎಲ್ಲಾ ಅಪಸ್ವರಗಳೇ. 'ಮದರಸಾ' ಎನ್ನುವ ಹೆಸರಿನಲ್ಲಿ ಶಿಕ್ಷಣವಿದೆ. ಮಾರ್ಕ್ಸ್, ಲೆಫ್ಟ್, ಲಿಬರಲ್ಸ್ ಎನ್ನುವ ಹೆಸರಿನಲ್ಲಿ ಇವರೆಲ್ಲಾ ಶಿಕ್ಷಣದಲ್ಲಿ ಅಲ್ಲೋಲಕಲ್ಲೋಲ ಮಾಡುತ್ತಿದ್ದಾರೆ. ಬುದ್ಧಿಜೀವಿಗಳೆಂಬ ಹೆಸರಿನಲ್ಲಿ ಲೇಖನಗಳನ್ನು ಬರೆಯುತ್ತಾರೆ. ವಿಶ್ವ ವಿದ್ಯಾಲಯಗಳ ಒಳಗೆಲ್ಲಾ ಸೇರಿಕೊಂಡಿದ್ದಾರೆ. ಪ್ರೊಫೆಸರ್ ಗಳಾಗಿದ್ದಾರೆ.

ಈ ಎಲ್ಲ ಪರಿಸ್ಥಿತಿಗಳ ನಡುವೆಯೂ ಕೊಡವಿ ಏಳಲು ಸ್ವಾತಂತ್ರ್ಯ ಬಂದ ಮೇಲೂ ಎಪ್ಪತ್ತು ವರ್ಷಗಳೇ ಬೇಕಾಯಿತು. ಸ್ವಾತಂತ್ರ್ಯ ಬಂದ ಮೇಲೂ ಈ ರೀತಿಯ ಮಾನಸಿಕ ದಾಸ್ಯಭಾವ ಉಳ್ಳವರೇ ಸರ್ಕಾರದ ಆಡಳಿತಕ್ಷೇತ್ರದಲ್ಲಿ ಶಿಕ್ಷಣಸಚಿವರಾಗಿದ್ದರು, ಪ್ರಧಾನಮಂತ್ರಿ ಗಳಾಗಿದ್ದರು. ಇದೆಲ್ಲವೂ ಎಲ್ಲರಿಗೂ ತಿಳಿದಿರುವ ಅಂಶಗಳೇ. ಈ ಹಿನ್ನೆಲೆಯಲ್ಲಿ 'ಭಾರತೀಯತೆ' ಎಂಬುದು ಶಿಕ್ಷಣಕ್ಷೇತ್ರದಲ್ಲಿ ಮಹಾ ಮಂತ್ರವಾಗಿ ಹೊರ ಹೊಮ್ಮಿರುವುದು ಬಹಳ ದೊಡ್ಡದಾದಂತಹ ವರದಾನ ಅಥವಾ ಕೊಡುಗೆಯೆಂದೇ ಭಾವಿಸಬೇಕು.

ಶಿಕ್ಷಣದಲ್ಲಿ ಭಾರತೀಯತೆ ಇರಲೇಬೇಕು, ಬೇರೆ ಮಾರ್ಗವೇ ಇಲ್ಲ. ಯಾವುದೇ ದೇಶದಲ್ಲಿಯೂ ಕೂಡ ನಾವು ಗಮನಿಸಿದರೆ ಅ ದೇಶದ ಇತಿಹಾಸ, ಅಲ್ಲಿಯ ಕವಿಗಳು ಸೃಷ್ಟಿಸಿದ ಸಾಹಿತ್ಯ, ಅಲ್ಲಿಯ ವಿಜ್ಞಾನಿಗಳು ತಾವು ನಡೆಸಿದ ಸಂಶೋಧನೆಯಿಂದ ಕಂಡುಕೊಂಡಂತಹ ಯಂತ್ರ–ತಂತ್ರ ಕೌಶಲ, ಅಲ್ಲಿಯ ಸಮಾಜದ ನೇತೃತ್ವ ವಹಿಸಿದ ನಾಯಕರು ತೋರಿದ ಮೇಲ್ಪಂಕ್ತಿಯ ದಾರಿ, ಇವೆಲ್ಲ ಪ್ರಧಾನವಾಗುತ್ತವೆ. ಬೇರೆ ಯಾವುದೋ ದೇಶದ್ದಲ್ಲ. ವಿದೇಶದಲ್ಲಿ ಮಳೆ ಬಂದಾಗ ಇಲ್ಲಿ ಕೊಡೆ ಹಿಡಿಯುವುದು, ಅಲ್ಲಿ ಯಾರೋ ಬರೆದ ಪುಸ್ತಕವನ್ನು ಅನುವಾದ ಮಾಡಿ, ಇಲ್ಲಿ ರೊಟ್ಟಿಯ ಹಾಗೆ ಹಂಚುವುದು – ಇವೆಲ್ಲ ಎಷ್ಟು ವಿಚಿತ್ರ? ಏನು ಮಾನಸಿಕ ದಾಸ್ಯದ ಪರಾಕಾಷ್ಠೆ? ಈಗ ಸ್ವದೇಶೀ ದೃಷ್ಟಿ ಉಳ್ಳವರ ನೇತೃತ್ವ ಇದೆ, ಹಾಗಾಗಿ 'ರಾಷ್ಟ್ರೀಯ ಶಿಕ್ಷಾನೀತಿ' ಎನ್ನುವುದು ಶಿಕ್ಷಣಕ್ಷೇತ್ರದಲ್ಲಿ ಬಂದಿದೆ. ಅದನ್ನೂ ಸಹ ಚೆನ್ನಾಗಿ ಕಾರ್ಯಾನ್ವಯ ಮಾಡಬೇಕು. ಅದರಲ್ಲಿಯೂ ಅನೇಕರು ಹಿಂದಿನ ಗವಾಕ್ಷದ ಮೂಲಕ ಲೆಫ್ಟ್ ಲಿಬರಲ್ಸ್ ಅನ್ನೋ ಹೆಸರಿನಲ್ಲಿ, ಬುದ್ಧಿಜೀವಿಗಳು ಅನ್ನೋ ಹೆಸರಿನಲ್ಲಿ ಪ್ರವೇಶ ಮಾಡುತ್ತಾರೆ. 'ವೈಜ್ಞಾನಿಕ ದೃಷ್ಟಿ ಇರಬೇಕು, ಸಂಪ್ರದಾಯಕ್ಕೆ ನಾವು ಒಲಿಯಬಾರದು' ಅಂತ ಅವರ ಅಭಿಪ್ರಾಯ. ಭಾರತ ದೇಶದಲ್ಲಿ ಮಾತ್ರವೇ ಸಂಪ್ರದಾಯ ವೆನ್ನುವುದು ಇರುವುದೇ? ನಮ್ಮಷ್ಟು ವೈಜ್ಞಾನಿಕ ದೃಷ್ಟಿ ಯುಳ್ಳವರು ಬೇರೆ ಎಲ್ಲಿದ್ದಾರೆ? ನಮ್ಮ ಗ್ರಂಥಗಳ ಮೂಲ ರೂಪದ ಅಧ್ಯಯನವನ್ನು ಇವರು ಮಾಡಿದ್ದಾರೆಯೇ? ಎಲ್ಲೋ ಬರೆದಂತಹ ಲೇಖನಗಳು ಇಂಗ್ಲೀಷಿನಲ್ಲಿ ಛಾಪುಗೊಂಡಾಗ ಅದು ಮಹಾ ಬೌದ್ಧಿಕತೆಯಾಗಿ ಬಿಡುತ್ತದೆ. ಒಬ್ಬರು ಹೇಳಿದ್ದನ್ನು ಮತ್ತೊಬ್ಬರು 'ಕೋಟ್' ಮಾಡುವಂತಹ ಅಂಧಾನುಕರಣೆ ಇವತ್ತಿನವರೆಗೂ ಭಯಾನಕವಾಗಿ ಉಳಿದುಕೊಂಡು ಬಂದಿದೆ. ಅದು 'ಸೋ ಕಾಲ್ಡ್ ಸೂಡೋ ಇನ್ಟೆಲೆಕ್ಚುಯಲ್ಸ್, ಸ್ಯೂಡೋ ಲಿಬರಲ್ಸ್, ಸ್ಯೂಡೋ ಲೆಫ್ಟಿಸ್ಟ್ಸ್ ಎಲ್ಲ ಸ್ಯೂಡೊಗಳೇ. ಈ ಢೋಂಗೀ ವ್ಯವಹಾರವನ್ನು ಎಲ್ಲದರಲ್ಲೂ ಸೃಷ್ಟಿ ಮಾಡಿದ್ದಾರೆ. ಈಗ ಅವರಿಗೆ ಚಡಪಡಿಕೆ ಶುರುವಾಗಿದೆ, ಏಕೆಂದರೆ ಇದೆಲ್ಲಾ ಅವರ ಎಪ್ಪತ್ತು ವರ್ಷಗಳ ಆಟ. ಪತ್ರಿಕೆಗಳನ್ನು ಉಪಯೋಗಿಸಿ ಕೊಂಡು, ವಿಶ್ವವಿದ್ಯಾಲಯಗಳಲ್ಲಿ ಸೇರಿಕೊಂಡು, ಶಿಕ್ಷಣ ಉಪಯೋಗಿಸಿಕೊಂಡು ನಡೆಸಿದ ಚಟು ವಟಿಕೆಗಳು. ವಿಜ್ಞಾನಪರಿಷತ್ತು ಎಂದು ಹೆಸರಿಟ್ಟು ಕೊಂಡು ಒಳಗೆ ಸೇರಿ, ತಮ್ಮ ಮನಸ್ಸಿಗೆ



ಗುರು–ಶಿಷ್ಯ ಪರಂಪರೆ

ಕಾಲಗತಿ ಚನ್ನಾಗಿದ್ದರೆ, ಹಾವೂ ಹೂಮಾಲೆಯಾಗಬಲ್ಲದು



ಪರಿಸರ ಶಿಕ್ಷಣ

ಬಂದದ್ದನ್ನೆಲ್ಲಾ ಛಾಪಿಸುವುದು. ಈಗ ಧಾರ್ಮಿಕ ವಿಧಿಗಳಲ್ಲಿಯೂ ಹೀಗೇ ಸೇರಿಕೊಂಡಿದ್ದಾರೆ. ಹಾಗಾಗಿ ಧರ್ಮ, ನೀತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ವಿಶ್ವವಿದ್ಯಾಲಯಗಳನ್ನು ಬಿಟ್ಟಿಲ್ಲ. ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಇಂತಹವರೇ ಬಂದು ಪಟ್ಟಭದ್ರ ಹಿತಾಸಕ್ತಿಗಳಾಗಿ ಕುಳಿತುಬಿಟ್ಟಿದ್ದಾರೆ.

ಈಗ ನಾವು ಭಾರತೀಯತೆಯ ಮಂತ್ರವನ್ನು ವೈಜ್ಞಾನಿಕ ಭಾಷೆಯಲ್ಲಿ ಜನಸಾಮಾನ್ಯರಿಗೆ ಮನಮುಟ್ಟು ವಂತೆ ಹೇಳಬೇಕು. ಅದಕ್ಕಾಗಿ ಈಗ ಪುನಃಪ್ರತಿಷ್ಠೆ ಆಗಬೇಕಾಗಿದೆ. ಅದಕ್ಕೆ ನಾವು ಕೊಟ್ಟಿರುವ ಹೊಸದಾದ ಹೆಸರು 'ಭಾರತೀಯ ಜ್ಞಾನಪರಂಪರೆ'. ಇದು ಜಗನ್ಮಾನಿತ. ಇದು ನಮ್ಮ ಬೆನ್ನನ್ನು ನಾವೇ ತಟ್ಟಿ ಕೊಂಡದ್ದಲ್ಲ. ಜಗತ್ತಿನಲ್ಲಿ ನಿಷ್ಪಕ್ಷಪಾತವಾಗಿ ಚಿಂತನೆ ಮಾಡಿದಂತಹ ವಿಲ್ ಡ್ಯುರಾಂಟ್‌ರಂತಹವರು ಮತ್ತೆ ಹಾಗೆ ಹೇಳಬೇಕೆಂದರೆ ಸ್ವತಃ ಮೆಕಾಲೆ ಪಾರ್ಲಿಮೆಂಟಿನಲ್ಲಿ ಆಡಿದ ಮಾತು. ಅನೇಕರು ಇಲ್ಲಿ ಬಂದು ಅಧ್ಯಯನ ಮಾಡಿದ್ದು ಅಥವಾ ಅಲ್ಲಿಗೇ ಇಲ್ಲಿನವರನ್ನು ಕರೆಸಿಕೊಂಡು ಸಂಶೋಧನೆ ಮಾಡಿದ್ದು, ಅಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಭಾರತಕ್ಕೆ ಪೂರಕವಾದಂತಹ, ಇಲ್ಲಿನ ಸಂಸ್ಕೃತಿಯ ಹಿರಿಮೆ–ಗರಿಮೆಗಳನ್ನು ಕೊಂಡಾಡುವ ಅನೇಕ ಸಾಹಿತ್ಯಗಳು ನಿರ್ಮಾಣವಾಗಿವೆ. ಹಾಗೆ ನೋಡಿದರೆ ಅವರಿಗೆ ಇದರಿಂದ ಆಗಬೇಕಾದುದೇನೂ ಇರಲಿಲ್ಲ.

ಭೌತಶಾಸ್ತ್ರದಲ್ಲಿ ಮೊದಲು 'ಕ್ವಾಂಟಮ್' ಎಂದು ಅಷ್ಟಕ್ಕೇ ನಿಲ್ಲುತ್ತಿದ್ದ ಫಿಸಿಕ್ಸ್ ಈಗ ವೇದಾಂತಕ್ಕೆ ಪ್ರವೇಶಿಸಿದೆ. ವೇದಾಂತದ ಭಾರತದ ಅದ್ವೈತದ ವಾದಕ್ಕೆ 'ಸೈನ್ಸ್ ಆಫ್ ಕಾನ್ಷಿಯಸ್‌ನೆಸ್' ಎಂಬ ಹೆಸರಿನಲ್ಲಿ ಒಂದು ಪೀಠ ಈಗ ಸಿಕ್ಕುತ್ತಿದೆ. ಕಾರಣವೆಂದರೆ ಬಿಯಾಂಡ್ ಕ್ವಾಂಟಮ್, ಬಿಯಾಂಡ್ ಕ್ವಾರ್ಸ್ – ಯೋಚನೆ ಮಾಡುತ್ತಾ ಮಾಡುತ್ತಾ ಅವರು ಗಾಡ್ ಪಾರ್ಟಿಕಲ್ ಎಂದು ಭಾವಿಸಿದ್ದರು. ಆದರೆ ಅದನ್ನು ಮೀರಿದ ಸತ್ಯವನ್ನು ಭಾರತದ ಋಷಿಗಳು ಕಂಡುಕೊಂಡಿದ್ದರು, ಅದಕ್ಕೇ 'ಕಾನ್ಷಿಯುಸ್‌ನೆಸ್' ಎಂದು ಕರೆದರು. ಹೀಗಿದ್ದಾಗಲೂ ನಾವು ನಮ್ಮ ಭಾರತೀಯ ಪರಂಪರೆ ಯನ್ನು ಗೊಡ್ಡು ಸಂಪ್ರದಾಯ, ಅವೈಜ್ಞಾನಿಕ ಎಂದು ಹೇಳುವವರಿಗೆ ಅವರ ಬೌದ್ಧಿಕ ಪ್ರಾಮಾಣಿಕತೆಯನ್ನು ಕುರಿತು ಕರುಣೆ ತೋರಿಸಬಹುದಷ್ಟೇ.

## ಅಧಿಶೀಲ ಶಿಕ್ಷಣ

ಶಿಕ್ಷಣದ ವಿಚಾರಕ್ಕೆ ಬಂದಾಗ ಅದನ್ನು ಭಾರತೀಯಗೊಳಿಸು ವುದು ಎಂದರೇನು? ಮಾದರಿಗಳು ಇಲ್ಲಿಯೇ ಇವೆ. ಅದೇ ಗುರುಕುಲ ಮಾದರಿ. ಆ ಮಾದರಿಗಳನ್ನು ನಾವು ಈ ಕಾಲಕ್ಕೆ, ಈ ಯುಗಕ್ಕೆ ಸೂಕ್ತವೆನಿಸುವಂತೆ, ಅನುಕೂಲ ವಾಗುವಂತೆ ಪರಿಷ್ಕರಿಸಿ, ಆವಿಷ್ಕಾರ ಮಾಡಿ, ಸಂಶೋಧನೆಗೆ ಒಳಪಡಿಸಿ ಪ್ರಯೋಗಕ್ಕೆ ತರಬೇಕು. ಹಾಗೆಯೇ ತರಲು ಸಾಧ್ಯವಿಲ್ಲ. ಯಾವುದೇ ಇಟ್ಟಿಗೆ ಭೂಮಿ



ಕಲಿಕೆಯಲ್ಲಿ ಪ್ರೀತಿ ಮೂಡಿಸುವುದು ಹೀಗೆ

*ಬದುಕು ನಾವು ಎಣಿಸಿದಂತೆ ಅತಿ ಸುಲಭವೂ ಅಲ್ಲ, ಅತಿ ಕಷ್ಟವೂ ಅಲ್ಲ*

ಯಿಂದ ತೆಗೆದುಕೊಂಡಾಗ ಅದನ್ನು ಆ ಕಟ್ಟಡಕ್ಕೆ, ಅ ಅಳತೆಗೆ, ಅಲ್ಲಿನ ವಿನ್ಯಾಸಕ್ಕೆ ಸರಿಹೊಂದುವಂತೆ ಅದರ ಆಕೃತಿಯನ್ನು ಮೊದಲು ಸರಿಪಡಿಸಿಕೊಳ್ಳುತ್ತಾರೆ. ಹಾಗೆಯೇ ಇಲ್ಲಿಯೂ ಸಹ. ಈ ಪಠ್ಯ ಇಟ್ಟುಕೊಂಡು ಭಾರತೀಯತೆಯ ಎಲ್ಲಾ ಆಯಾಮಗಳನ್ನು, ಜ್ಞಾನ, ವಿಜ್ಞಾನ, ಸಾಹಿತ್ಯ ಎಲ್ಲವನ್ನೂ ಕೂಡ ವಿಮರ್ಶೆ ಮಾಡಿ, ಶಿಕ್ಷಣದಲ್ಲಿ ತರಬೇಕು. ಅದನ್ನೇ **'ಅಧಿಶೀಲ ಶಿಕ್ಷಣ'** ವೆನ್ನುವುದು. ಮೊದಲಿನ ಸ್ತರ ಐದು ವರ್ಷ, ನಂತರ ಮೂರು ವರ್ಷ, ಮತ್ತೆ ಮೂರು ವರ್ಷ, ಆಮೇಲೆ ನಾಲ್ಕು ವರ್ಷ. ಇದು ಶಾಲಾಶಿಕ್ಷಣ. ಈ ಶಾಲಾಶಿಕ್ಷಣವನ್ನು ನಾವು ಗುರುಕುಲೀಕರಣ ಮಾಡಬೇಕು. ಅದೇ ಭಾರತೀಕರಣ, ಅದೇ ಸ್ವದೇಶೀಕರಣ. ಹೀಗೆ ಬೇಕಾದಷ್ಟು ಹೆಸರುಗಳಿವೆ. ಭಾವ ಒಂದೇ, ಶಬ್ದ ಬೇರೆ. ಇನ್ನು ಮುಂದಿನದು, ಶಾಲಾಶಿಕ್ಷಣದಲ್ಲಿ ಅದು ಪ್ರಧಾನವಾದುದರಿಂದ ಶೀಲ ಮತ್ತು ರಾಷ್ಟ್ರಭಕ್ತಿಯ ಬಗ್ಗೆ ವೈಜ್ಞಾನಿಕವಾಗಿ ತಿಳುವಳಿಕೆ ಕೊಡಬೇಕು. ದೇಶದ ಹಿರಿಮೆ-ಗರಿಮೆಯ ಬಗ್ಗೆ ಇಂದು ಕರಾರುವಾಕ್ಕಾಗಿ ಸಂಶೋಧನೆಗಳಿಂದ ಪುಸ್ತಕಗಳಲ್ಲಿ ವ್ಯಕ್ತವಾಗಿದೆ. ಅದು ಹರಪ್ಪ-ಮೊಹೆಂಜೊದಾರೊ ಇರಬಹುದು, ಸರಸ್ವತೀ ನದೀ ತೀರದ ಸಂಶೋಧನೆ ಇರಬಹುದು, ಬೇತ್ ದ್ವಾರಿಕಾ ಸಂಶೋಧನೆ ಇರಬಹುದು, ಇವೆಲ್ಲವೂ ಬೆಂಬಲಿಸುತ್ತವೆ. ಹಾಗೆ 5000 ವರ್ಷದ ಅಂದರೆ, ಮಹಾಭಾರತದ ನಂತರದ ಸಂಗತಿಗಳೆಲ್ಲವೂ ಕರಾರುವಾಕ್ಕಾಗಿ ಸಿಕ್ಕುತ್ತವೆ. ಈಗಲೂ ನಾವು ಮತ್ತೆ ಅದೇ ಮೊಗಲರ ಕಥೆ, ತುಗಲಕನ ಕಥೆ, ಅಕ್ಬರನ ಕಥೆ ಹೇಳಿಕೊಂಡು ಕುಳಿತುಕೊಳ್ಳಲು ಸಾಧ್ಯವಿಲ್ಲ. 5000 ವರ್ಷಗಳನ್ನು ಕರಾರುವಾಕ್ಕಾಗಿ ಇತಿಹಾಸದಲ್ಲಿ ತಂದು ಪಾಠ ಹೇಳಬೇಕು. ಹಾಗೆಯೇ ವಿಜ್ಞಾನದ ಎಲ್ಲಾ ಶಾಖೆಗಳಲ್ಲಿ ನಡೆದಿರುವ ಸಂಶೋಧನೆಗಳಿಗೆ ಸಂಬಂಧಿಸಿದ ಆಕರ ಗ್ರಂಥಗಳನ್ನೂ ಸಿದ್ಧಪಡಿಸಿದ್ದಾರೆ. ಇನ್ನು ಮುಂದಿನದು ಅನುವರ್ತತೆ.

ಅಂದರೆ ಸೃಷ್ಟಿಯಲ್ಲಿ ಪ್ರೀತಿಯನ್ನು ಬೆಳೆಸುವುದು. ಇದಕ್ಕೂ ಮೊದಲು ಹೇಗಿತ್ತು ? ಅವರು ಅಧಿಚಿತ್ತ, ಅಧಿಪ್ರಜ್ಞೆ ಸ್ಥಿತಿಗೆ ಬರುವವರೆಗೆ ಅವರಿಗೆ ಗೋಶಾಲೆಯಲ್ಲಿ ಕೆಲಸ ಮಾಡುವುದು, ಭೂಮಿತಾಯಿಯ ಸೇವೆಯನ್ನು ಗಿಡ, ಮರ ನೆಡುವುದರ ಮೂಲಕ ಮಾಡುವುದು, ಅವುಗಳಲ್ಲಿ ಫಲಪುಷ್ಪಗಳು ಮೂಡಿದಾಗ ಆನಂದ ಪಡುವುದು. ಇದು ಸೃಷ್ಟಿಯಲ್ಲಿ ಪ್ರೀತಿ ಬೆಳೆಸುವ ಪರಿ. ಮಕ್ಕಳು ಚೆನ್ನಾಗಿರುವುದನ್ನು ನೋಡುವ, ಕೇಳುವ, ಮಾಡುವ ರೀತಿಯನ್ನು ಕಲಿಸಬೇಕು. ಇದಕ್ಕೆ ತಕ್ಕಂತೆ ಅಪ್ಪ-ಅಮ್ಮನ ವ್ಯವಹಾರವಿಲ್ಲದಿದ್ದರೆ ಅದಕ್ಕೆ 'ಮಾಲ್ ಪೇರೆಂಟಿಂಗ್' ಎನ್ನುತ್ತಾರೆ. ಕೆಟ್ಟ ಮಾತೃತ್ವ, ಪಿತೃತ್ವ ಎಂದು. ಇದು ಇವತ್ತಿನ ದೊಡ್ಡ ದೋಷ. ಇದು ಭಾರತೀಯವೂ ಅಲ್ಲ, ಶಿಕ್ಷಣವೂ ಅಲ್ಲ, ಇದು ಪರಂಪರೆಯೂ ಅಲ್ಲ. ಭಾರತೀಯವಾಗಬೇಕಾದರೆ ಜ್ಞಾನಪ್ರಧಾನವಾಗಿರಬೇಕು. ಕೇವಲ ಪರೀಕ್ಷೆಯಲ್ಲಿ ಉತ್ತೀರ್ಣವಾದರೆ ಸಾಕೆನ್ನುವ ಶಿಕ್ಷಣ ಇರಬಾರದು. ಶಿಕ್ಷಣ ಮಗುವಿನಲ್ಲಿ ಸರ್ವಾಂಗೀಣ ಶುದ್ಧಿಯನ್ನು ಮಾಡಬೇಕು. ಇದಕ್ಕೆ ಯೋಗಿಕ ಆಹಾರ ಅಗತ್ಯ. ಸಾತ್ವಿಕ ಆಹಾರ ನೀಡಬೇಕು. ಚಿಕ್ಕಂದಿನಲ್ಲಿಯೇ ಅಮರಕೋಶದ ಜೊತೆಗೆ ಸಂಸ್ಕೃತದ ಶ್ಲೋಕಗಳನ್ನು, ಕನ್ನಡದ ಸುಭಾಷಿತಗಳನ್ನು ಕಲಿಸಬೇಕು. ಅವುಗಳ ಮೂಲಕವೇ ಶಿಕ್ಷಣ ದೊರೆಯುತ್ತದೆ. ಆ ವಯಸ್ಸಿನಲ್ಲಿ ಮಕ್ಕಳು ಎಷ್ಟು ಭಾಷೆಗಳನ್ನಾದರೂ ಕಲಿಯುತ್ತಾರೆ. ಭಾಷಾತಂತ್ರದಲ್ಲಿ ಕೇವಲ ಕಂಠಸ್ಥ ಮಾಡಿಸುವುದಲ್ಲ, ಹಾಡುಗಳನ್ನೂ ಬಳಸಬಹುದು. ಅಮರಕೋಶದಂತಹ ಶಬ್ದಭಂಡಾರ ಇನ್ನಾವುದೇ ಭಾಷೆಯಲ್ಲಿರಲಾರದು. ಇಡೀ ಅಮರ ಕೋಶವನ್ನು ಕಲಿತ ಮಗುವಿಗೆ ಸಾವಿರಾರು ಶಬ್ದಗಳು, ಸಮಾನ ಪದಗಳು, ವಿರುದ್ಧ ಪದಗಳು ಎಲ್ಲವೂ ತಿಳಿದುಬಿಡುತ್ತವೆ. ಅವರು ಅಧಿಶೀಲದಲ್ಲಿಯೇ ಹನ್ನೆರಡನೇ ವಯಸ್ಸಿನವರೆಗೇ ಎಲ್ಲವನ್ನು ಕಲಿಯುತ್ತಾರೆ. ಮಗ್ಗಿ ಮೂಲಕ ಗಣಿತದ ಕಲಿಕೆಯಾಗುತ್ತದೆ, ಬಾಯಿಪಾಠದ ಮೂಲಕವೇ ಇವನ್ನೆಲ್ಲ ಕಲಿಸಬೇಕು, ಬರವಣಿಗೆಯಲ್ಲಲ್ಲ.

ಇಂದು ಪರ್ಯಾಯ ಶಿಕ್ಷಣ ಎಂಬ ವ್ಯವಸ್ಥೆ ಯನ್ನು ತರಲಾಗಿದೆ. ಅದಲ್ಲದೇ ಹೈಸ್ಕೂಲ್ ಶಿಕ್ಷಣ, ಕಾಲೇಜು ಶಿಕ್ಷಣ ಎಂಬುದು ಮೊದಲಿನಂತೆಯೇ ಇದೆ.

ಇನ್ನು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಓಪನ್ ಎಜುಕೇಷನ್ ಎಂಬ ಸೌಲಭ್ಯವೂ ಇದೆ. ಅವರು ಪರ್ಯಾಯ ಶಿಕ್ಷಣವನ್ನು ಪ್ರತ್ಯೇಕಿಸಿದರು. ಹಾಗೆ ಮಾಡಬಾರದಾಗಿತ್ತು. ಏಕೆಂದರೆ ಪರ್ಯಾಯ, ಗುರುಕುಲ, ಭಾರತೀಯ ಬೋರ್ಡ್ ಇವೆಲ್ಲಾ ಬೇರೆ ಬೇರೆ ಹೆಸರುಗಳನ್ನು ಮಾತ್ರ ಹೊಂದಿವೆ. ಸಿಬಿಎಸ್ಸಿ ಶಾಲೆ, ಯುಜಿಸಿ ಕಾಲೇಜುಗಳಲ್ಲಿ ಏನೂ ಪರಿವರ್ತನೆ ತರದಿದ್ದರೆ ಶಿಕ್ಷಣದಲ್ಲಿ ಏನು ಪರಿಷ್ಕಾರ ಮಾಡಲು ಸಾಧ್ಯ? ಭಾರತೀಯ ಶಿಕ್ಷಣವೂ ಬರುವುದಿಲ್ಲ, ಭಾರತೀಯ ಶಿಕ್ಷಣ ಪರಂಪರೆಯೂ ಬರುವುದಿಲ್ಲ.

ಶಿಕ್ಷಣವನ್ನು ಭಾರತೀಯವಾಗಿ ನೀಡಬೇಕೆಂದರೆ ಶಾಲಾಶಿಕ್ಷಣವನ್ನು ಕುಲಶಿಕ್ಷಣವನ್ನಾಗಿ ಮಾಡಬೇಕು. ಕುಲಶಿಕ್ಷಣವನ್ನು ಕುಲಪತಿ ಶಿಕ್ಷಣವನ್ನಾಗಿ ಮಾಡಬೇಕು. ಅಂದರೆ ಪ್ರತಿಯೊಂದು ಮಗುವೂ ನೇತೃತ್ವ ವಹಿಸುವ ರೀತಿಯಲ್ಲಿ ಶಿಕ್ಷಣ ಪಡೆಯಬೇಕು. ಇಡೀ ಮನೆತನಕ್ಕೆ, ಸಮಾಜಕ್ಕೆ, ರಾಷ್ಟ್ರಕ್ಕೆ ನೇತಾರರಾಗುವ ಅರ್ಹತೆಯನ್ನು ಪಡೆಯಬೇಕು. ಅದರಿಂದ ನಾವು ಇಂದು ಈ ರೀತಿಯ ಶಿಕ್ಷಣ ನೀಡುವ ಶಾಲೆಗಳನ್ನು ರೂಪಿಸಿದರೆ, ಅದು ಭಾರತೀಯವೂ ಆಗುತ್ತದೆ, ಶಿಕ್ಷಣವೂ ಆಗುತ್ತದೆ. ಶಿಕ್ಷಣ ಎನ್ನುವ ಪದ ನಮ್ಮಲ್ಲಿ ಹುಟ್ಟಿರುವುದು ಹೇಗೆಂದರೆ, ಅದು ವ್ಯವಹಾರದ ಶಿಕ್ಷಣ, ಜೀವನದ ಶಿಕ್ಷಣ. ಹಿರಿಯರು ಕಿರಿಯರಿಗೆ ಮೇಲ್ಪಂಕ್ತಿಯಾಗಿ ಇರಬೇಕು. ಬರೀ ವಿದ್ವಾಂಸರಾಗಿ, ಪಂಡಿತರಾಗಿ ಉಳಿಯುವವರು ಶಿಕ್ಷಕರೇ ಅಲ್ಲವೆಂದು ಕಾಳಿದಾಸ ಹೇಳುತ್ತಾನೆ. ನುಡಿದಂತೆ ನಡೆಯುವವನು, ನಡೆದಂತೆ ನುಡಿಯು ವವನು ಮಾತ್ರ ಶಿಕ್ಷಕನೆನಿಸುತ್ತಾನೆಂಬುದು ಮಹಾ ಕವಿಯ ನಿರ್ದೇಶನ. ಆತ್ಮಸಂಸ್ಥಾ ಅಂದರೆ ವ್ಯವಹಾರದಲ್ಲಿರಬೇಕು, ತಾನು ಕಲಿತ ಜ್ಞಾನ ವ್ಯವಹಾರದಲ್ಲಿ ಪ್ರತಿಫಲಿತವಾಗಬೇಕು. ಮಾನವನ ಉತ್ಕ್ರಾಂತಿಗೆ, ವಿಕಾಸಕ್ಕೆ, ಸಹಾಯವಾಗುವ ಶಿಕ್ಷಣವನ್ನು ನಾವು ನಮ್ಮೆಲ್ಲ ಶಿಕ್ಷಣಸಂಕುಲದ ಮೂಲಕ ರೂಪಿಸಿದರೆ ಮಾತ್ರ ಹೊಸಯುಗ ಭೂಮಿಗೆ ಇಳಿದು ಬರುತ್ತದೆ.


**ANIKETHANA SCHOOL OF EDUCATION**

*The spirit of learning*

**MANDYA** (Near Yeliyur Circle, Mysore- Bangalore Highway)

**ANIKETHANA P.U.College**

**ANIKETHANA Higher Primary School**

**ANIKETHANA High School**

CET, JEE & NEET Coaching starts with I PUC classes

Hostel Facility for Boys & Girls

**Admissions Open to: 6th to 10th Std. 1st & 2nd PUC**

**Science : PCMB/PCMCs & Commerce : EBACs**

***Management Scholarship for Merit Students***

**Contact: 7899903375, 7899903381, 7899903389, 7899903378.**

**E-mail: anikethana2013@gmail.com WWW.anikethanaschool.in**

# ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸಾಧು, ಸಂತ ಮತ್ತು ಸಂನ್ಯಾಸಿಗಳ ಪ್ರೇರಣೆ

**– ಸ್ವಾಮಿ ವೀರೇಶಾನಂದ ಸರಸ್ವತೀ**
ಅಧ್ಯಕ್ಷರು,
ರಾಮಕೃಷ್ಣ–ವಿವೇಕಾನಂದ ಆಶ್ರಮ, ತುಮಕೂರು



ಭಾರತವು ಸ್ವತಂತ್ರ ರಾಷ್ಟ್ರವಾಗಿ ಇದೀಗ ನಾವು ಹೆಮ್ಮೆಯಿಂದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಸಂಭ್ರಮದಲ್ಲಿದ್ದೇವೆ. ಸಾವಿರ ವರ್ಷಗಳ ಕಾಲ ದಾಸ್ಯದ ಶೃಂಖಲೆಯಲ್ಲಿದ್ದ ಭಾರತೀಯರು ಪಾರತಂತ್ರ್ಯದ ನಡುವೆಯೂ, ಅವರ ಅಂತರ್ಯದಲ್ಲಿ 'ಗುಪ್ತಗಾಮಿನಿ'ಯಂತೆ ಹರಿದ ಸಂಸ್ಕೃತಿಯ ಸ್ರೋತವು ಮತ್ತೆ ಸ್ವತಂತ್ರ ರಾಷ್ಟ್ರವಾಗಿ ತಲೆ ಎತ್ತಿ ನಿಲ್ಲುವಂತೆ ಮಾಡಿದ ರಾಷ್ಟ್ರೀಯ ಜೀವನಗಾಥೆ ಅದ್ಭುತವಾದದ್ದು. ಪರಕೀಯರಿಂದ ಆಳಲ್ಪಟ್ಟ ಹತ್ತಾರು ರಾಷ್ಟ್ರಗಳು ತಮ್ಮ ಮೂಲನಿವಾಸಿಗಳು ಮತ್ತು ಮೂಲ ಸಂಸ್ಕೃತಿಯು ಮೂಲೆಗುಂಪಾದುದನ್ನು ದಾಖಲಿಸಿವೆ. ಆದರೆ ಭಾರತೀಯರನ್ನು ಆಳಿದ ಪರಕೀಯರು ನಮ್ಮ ಸಂಸ್ಕೃತಿಯನ್ನು ಘಾಸಿಗೊಳಿಸಲಾಗಲಿಲ್ಲ, ನಮ್ಮ ಮೂಲನಿವಾಸಿಗಳು ಹತಾಶರಾಗಲಿಲ್ಲ! ನಿಶ್ಶೇಷರಾಗಲಿಲ್ಲ! ಇದು ನಮ್ಮ ಸಂಸ್ಕೃತಿಯ ಬಲಿಷ್ಠತೆ, ಸಾರ್ವತ್ರಿಕತೆ ಮತ್ತು ಮಾನವ ಕಲ್ಯಾಣಕೇಂದ್ರಿತವಾದುದೆಂದು ಸಾಬೀತು ಪಡಿಸುತ್ತದೆ.



ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಧು–ಸಂತರ ಪ್ರೇರಣೆ ಹೇಗಿತ್ತೆಂಬುದು ಲೇಖನದ ಹೂರಣ. ಆದರೆ, "ಭಾರತದ ಇತಿಹಾಸವನ್ನು ಜಗತ್ತಿನ ಇನ್ನಿತರ ದೇಶಗಳ ಇತಿಹಾಸದ ಅಧ್ಯಯನ ಮಾಡುವ ಧಾಟಿಯಲ್ಲೇ ಮಾಡಬಾರದು" ಎಂಬುದು ಗಣ್ಯ ಇತಿಹಾಸಜ್ಞರ ಅಭಿಮತ.

ಕ್ರಿಸ್ಟೋಫರ್ ಇಷರ್‌ವುಡ್ ಸ್ವಾಮಿ ವಿವೇಕಾನಂದರ ಚಿಂತನೆಗಳಲ್ಲಡಗಿದ್ದ ವಿಶ್ವಮಾನವ ಸಂದೇಶ ಕುರಿತು ಹೀಗೆ ಹೇಳುತ್ತಾನೆ: "ವಿವೇಕಾನಂದರ ದೃಷ್ಟಿಯಲ್ಲಿ ರಾಷ್ಟ್ರೀಯತೆ ಎಂದರೆ ಅದೊಂದು ಸಂಕುಚಿತ ರಾಷ್ಟ್ರೀಯತೆಯಲ್ಲ, ಶ್ರೇಷ್ಠ ಮತ್ತು ಉನ್ನತೀಕರಣಗೊಂಡ ವಿಶಿಷ್ಟ ರೀತಿಯ ಅಂತಾರಾಷ್ಟ್ರೀಯತೆ".

ವಿಶ್ವವಿಖ್ಯಾತ ಇತಿಹಾಸಜ್ಞ ವಿಲ್ ಡ್ಯೂರೆಂಟ್ ಹೇಳುತ್ತಾನೆ: "ಮಾನವನ ಸಾಮರ್ಥ್ಯಗಳನ್ನು ಯೋಗ್ಯ ರೀತಿಯಲ್ಲಿ ಅಭಿವೃದ್ಧಿ ಪಡಿಸಿಕೊಳ್ಳುವ ಬಗೆ ಹೇಗೆಂಬುದರ ಕುರಿತಾಗಿ ಜಗತ್ತಿನ ಇತಿಹಾಸದಲ್ಲಿ ಶ್ರಮಿಸಿದವರು ಅಸಂಖ್ಯಾತರು. ಆದರೆ ಮನುಷ್ಯನ ಮನಸ್ಸಿಗೆ ಉನ್ನತ–ಉದಾತ್ತ ಚಿಂತನೆಗಳನ್ನಿತ್ತು ಅದನ್ನು ಎತ್ತರದ ಸ್ತರಕ್ಕೆ ಕೊಂಡೊಯ್ಯುವುದು ಹಾಗೂ ಅವನ ಚಾರಿತ್ರ್ಯವೃದ್ಧಿಯನ್ನು 'ಕ್ರಾಂತಿ' ಎಂದೂ, ಈ ದಿಶೆಯಲ್ಲಿ ಶ್ರಮಿಸುವ ತತ್ತ್ವಜ್ಞಾನಿಗಳು ಹಾಗೂ ಸಂತರೇ ನಿಜವಾದ 'ಕ್ರಾಂತಿಕಾರಿ'ಗಳೆಂದೂ ಜಗತ್ತು ನಿಸ್ಸಂದೇಹವಾಗಿ ಒಪ್ಪಿಕೊಂಡಿದೆ. ಇಲ್ಲಿ ಭಾರತವನ್ನು ರೂಪಿಸಿದವರು, ಸಂಸ್ಕೃತಿಸಂಪನ್ನವಾಗಿಸಿದವರು ಯಾರೆಂದು ನಮಗೆ ಅರಿವಾಗುತ್ತದೆಯಲ್ಲವೇ?

'ಪ್ರಪಂಚದೊಂದಿಗೆ ತನಗಿರುವ ಸಂಬಂಧವನ್ನು ಮಾನವನು ಅರಿತುಕೊಳ್ಳದಿದ್ದರೆ, ಅವನು ವಾಸಿಸುವ ಸ್ಥಳವೂ ಸೆರೆಮನೆ ಯಾಗುತ್ತದೆ' ಎಂದಿದ್ದಾರೆ ವಿಶ್ವಕವಿ ರವೀಂದ್ರನಾಥ ಟ್ಯಾಗೋರರು. ಇಲ್ಲಿ ಭಾರತೀಯರು 'ವಿಶ್ವಕುಟುಂಬ'ದ ಪರಿಕಲ್ಪನೆಗೆ ಅದೆಷ್ಟು ಒತ್ತು

ನೀಡಿದ್ದರೆಂಬುದು ಅರಿವಾಗುತ್ತದೆ.

'ಸ್ವಾತಂತ್ರ್ಯ' ಎಂಬ ಮಹಾಮೌಲ್ಯವನ್ನು ಅನಾದಿ ಕಾಲದಿಂದಲೂ ಭಾರತವು ವಿಶ್ಲೇಷಿಸುತ್ತಾ ಬಂದ ರೀತಿ ಅಧ್ಯಯನ ಯೋಗ್ಯವಾದದ್ದು. ಮನುಸ್ಮೃತಿ ಹೇಳುತ್ತದೆ:

**ಸರ್ವಂ ಪರವಶಂ ದುಃಖಂ ಸರ್ವಂ ಆತ್ಮವಶಂ ಸುಖಂ।**
**ಏತತ್ಪ್ರೋಕ್ತಂ ಸಮಾನೇನ ಲಕ್ಷಣಂ ಸುಖದುಃಖಯೋಃ॥**

ಪರಾವಲಂಬಿಯಾಗುವುದೇ ದುಃಖ; ಆತ್ಮಾವಲಂಬಿ ಆಗುವುದೇ ಸುಖ. ಇದೇ ಸಂಕ್ಷಿಪ್ತವಾಗಿ ಸುಖ-ದುಃಖಗಳ ಲಕ್ಷಣ.

"ಕಾರ್ಯಸಿದ್ಧಿಗಳಲ್ಲಿ ಶಾಸ್ತ್ರದಿಂದ ಕಾರ್ಯಸಿದ್ಧಿ, ಗುರುವಿನಿಂದ ಕಾರ್ಯಸಿದ್ಧಿ ಮತ್ತು ತನ್ನಿಂದ ಕಾರ್ಯಸಿದ್ಧಿ ಎಂಬ ಮೂರು ವಿಧಗಳಿದ್ದು ಇವೆಲ್ಲವೂ ಪೌರುಷಕ್ಕೆ ಸಂಬಂಧಪಟ್ಟ ವಿಷಯಗಳೇ ಹೊರತು ದೈವಕ್ಕಲ್ಲ" ಎಂದಿದೆ ಯೋಗವಾಸಿಷ್ಠ.

## ರಾಮರಾಜ್ಯ

ತ್ರೇತಾಯುಗದಲ್ಲಿ ಋಷಿಗಳು ಪ್ರತಿಪಾದಿಸಿದ ರಾಮರಾಜ್ಯದ ಪರಿಕಲ್ಪನೆಯು ಮನೋಜ್ಞ, ಋಷಿಗಳು ಪ್ರತಿಪಾದಿಸುವ ರಾಮ ರಾಜ್ಯದ ಅಂಶಗಳೆಂದರೆ,

1. ಚಕ್ರವರ್ತಿಯು ತನ್ನ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ಸತ್ಯ, ಧರ್ಮಗಳನ್ನು ಅನುಷ್ಠಾನ ಗೈಯ್ಯುವ ಆದರ್ಶನಿಷ್ಠನಾಗಿರಬೇಕು.
2. ರಾಜ್ಯದ ಯೋಗಕ್ಷೇಮದ ವಿಷಯದಲ್ಲಿ ಜಾಗೃತ ನಾಗಿರಬೇಕು.
3. ಶೀಲಸಂಪನ್ನರಾದ ವಿವೇಕಿಗಳೇ ಮಂತ್ರಿ, ಸಲಹೆ ಗಾರರಾಗಿರಬೇಕು.
4. ಪ್ರಜೆಗಳ ಸ್ವಭಾವ-ಸಾಮರ್ಥ್ಯಗಳಿಗನುಗುಣವಾಗಿ ಜವಾಬ್ದಾರಿಯನ್ನು ನೀಡಬೇಕು.
5. ಉತ್ತಮ ಸಂಘಟಿತ ಬೇಹುಗಾರಿಕೆಯು ಅವಶ್ಯಕತೆ ಯಿದ್ದು. ಅದು ಕನಿಷ್ಠ ಮೂರು ಹಂತಗಳಲ್ಲಿ ಕಾರ್ಯನಿರ್ವಹಿಸಬೇಕು.
6. ಕಾರ್ಮಿಕರ ಸಂಬಳ ವಿಳಂಬವಾಗಬಾರದು, ಯುದ್ಧ ವಿದ್ಯೆಯಲ್ಲಿ ಪರಿಣಿತರಾದ ವೀರರನ್ನು ಸನ್ಮಾನಿಸಬೇಕು, ಕಾರ್ಯದ ಸ್ತುತ್ಯವರಿತು ಗೌರವಿ ಸಬೇಕು.
7. ದೈವಶ್ರದ್ಧೆ-ಶಾಸ್ತ್ರವಾಕ್ಯಗಳಲ್ಲಿ ನಿಷ್ಠರಿಗೆ ಬೆಂಬಲ-ರಕ್ಷಣೆ ನೀಡಬೇಕು.
8. 'ಆಯ-ವ್ಯಯ'ದ ವಿಷಯದಲ್ಲಿ 'ಆಯ'ವು 'ವ್ಯಯ'ಕ್ಕಿಂತ ಅಧಿಕವಾಗಿರಬೇಕು.
9. ಸಂಪತ್ತಿನ ಉತ್ಪತ್ತಿ ಮತ್ತು ಅದರ ವಿತರಣೆಯಲ್ಲಿ ತೊಡಗಿರುವವರನ್ನು ಎಚ್ಚರಿಕೆಯಿಂದ ಗಮನಿಸು ತ್ತಿರಬೇಕು.
10. ಸಾಮಾಜಿಕ ಹಾಗೂ ನೈತಿಕ ಸಮತೋಲನಕ್ಕೆ ಧಕ್ಕೆ ಆಗದಂತೆ ರಾಜನು ಎಚ್ಚರ ವಹಿಸಲೇಬೇಕು.

## ಮಹಾಭಾರತದ ಕಾಲ:


ಯೋಗಾಚಾರ್ಯ ಶ್ರೀಕೃಷ್ಣನು ಜಗತ್ತನ್ನು ಎಚ್ಚರಿಸಿದ್ದು ಹೀಗೆ:

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್।**
**ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವ ರಿಪುರಾತ್ಮನಃ॥**

"ಮನಸ್ಸಿನಿಂದಲೇ ತನ್ನನ್ನು ಸಂಸಾರ ಸಾಗರದಿಂದ ಉದ್ಧಾರ ಮಾಡಿಕೊಳ್ಳಬೇಕು, ತನ್ನನ್ನು ಕುಗ್ಗಿಸಿ ಕೊಳ್ಳಬಾರದು. ಏಕೆಂದರೆ ಮನಸ್ಸೇ ತನ್ನ ಬಂಧು, ಮನಸ್ಸೇ ತನ್ನ ಶತ್ರು".

## ಬುದ್ಧನು ನುಡಿದಂತೆ:

ಭಗವಾನ್ ಬುದ್ಧನ ಪ್ರಾಣೋತ್ಕ್ರಮಣ ಕಾಲದಲ್ಲಿ, ಪ್ರಿಯಶಿಷ್ಯ ಆನಂದನು, "ಪ್ರಭು, ನಿಮ್ಮ ನಿರ್ಗಮನದ ನಂತರ ನಮಗೆ ದಾರಿ ಯಾವುದು, ದಾರಿ ತೋರು ವವರ್‍ಯಾರು?" ಎಂದು ಪ್ರಶ್ನಿಸಿದಾಗ ಬುದ್ಧ ಹೇಳುತ್ತಾನೆ, "ನಿಮಗೆ ನೀವೇ ಬೆಳಕಾಗಿ".



ಪ್ರಜೆಗಳನ್ನು ಯೋಗ್ಯವಾಗಿ ರೂಪಿಸಿ ಶಕ್ತಸಾಮ್ರಾಜ್ಯ ನಿರ್ಮಾಣಕ್ಕೆ ಒತ್ತುಕೊಟ್ಟ ಚಾಣಕ್ಯನ ಕೊಡುಗೆಯೂ ಅತ್ಯಪಾರ.

ಮಹಾತ್ಮರ ಈ ಎಲ್ಲಾ ಮಾತುಗಳು 'ಸ್ವಾತಂತ್ರ್ಯ' ಎಂಬ ಮಹಾಮೌಲ್ಯದ ಮಹಿಮೆಯನ್ನು ಸ್ಪಷ್ಟಪಡಿಸುತ್ತವೆ.

**ಶ್ರೀ ಶಂಕರಾಚಾರ್ಯರ ನುಡಿಯಂತೆ:**

ಸರ್ವಸಂಗ ಪರಿತ್ಯಾಗಿಯಾದ ಆಚಾರ್ಯ ಶ್ರೀಶಂಕರರು ಮಠಾಧಿಪತಿಗಳಿಗೆ, "ದೇಶದ ಅಭ್ಯುದಯ ಮತ್ತು ವೇದಾಂತಧರ್ಮದ ಪ್ರಚಾರಕ್ಕಾಗಿ ಸಂಚರಿಸಬೇಕು" ಎಂದೂ, ಸಮಾಜದ ಜನರಿಗೆ, "ಸಮಾಜದಲ್ಲಿ ಯಾವುದೇ ವರ್ಣದವರು ದಾರಿ ತಪ್ಪಿದರೂ ಸಮತೋಲನ ತಪ್ಪುತ್ತದೆ, ಮಕ್ಕಳನ್ನು ಧರ್ಮರಕ್ಷಣೆ ಮತ್ತು ದೇಶ ರಕ್ಷಣೆಗೆ ಪ್ರೇರೇಪಿಸಬೇಕು. ಜಗನ್ಮಿಥ್ಯಾ ಎಂದು ಉಪೇಕ್ಷಿಸದೇ ವ್ಯವಹಾರ ಪ್ರಪಂಚದಲ್ಲಿ ಇರುವಷ್ಟು ಕಾಲ ಅದಕ್ಕೆ ತಕ್ಕಂತೆ ವ್ಯವಹರಿಸಬೇಕು" ಎಂದು ತಿಳುವಳಿಕೆ ನೀಡಿದ್ದಾರೆ. "ದುರ್ಬಲಾನ್ ಅಜಿತೇಂದ್ರಿಯಾನ್ ಪ್ರಾಪ್ಯಂ ನಷ್ಟಂ ಯೋಗಂ" – ದುರ್ಬಲರು ಹಾಗೂ ಇಂದ್ರಿಯನಿಗ್ರಹ ಇಲ್ಲದವರ ಪಾಲಿಗೆ ಯೋಗವು ಅರ್ಥಾತ್ ಧರ್ಮವು ನಷ್ಟವಾಗುತ್ತದೆ ಎಂದು ಶ್ರೀಶಂಕರರು ಎಚ್ಚರಿಸುತ್ತಾರೆ.



ಇತಿಹಾಸದ ಮುಂದುವರೆದ ಭಾಗದಲ್ಲಿ ಶ್ರೀವಿದ್ಯಾರಣ್ಯ ಮಹರ್ಷಿಗಳು ಪ್ರಜಾಸಾಮ್ರಾಜ್ಯದ ಉಳಿವು ಹಾಗೂ ಮುನ್ನಡೆಗೆ ಅತ್ಯವಶ್ಯಕವಾದ ಆತ್ಮಗೌರವ–ಆತ್ಮಾವಲಂಬನದ ಆದರ್ಶಗಳನ್ನು ಮನೆಬಾಗಿಲಿಗೆ ತಲುಪಿಸಿದರು.

**ಮುಸ್ಲಿಮರ ಆಳ್ವಿಕೆಯಲ್ಲಿ**

'ವಿಗ್ರಹಾರಾಧಕ'ರಾದ ಸಂನ್ಯಾಸಿಗಳ ಮೇಲೆ ಅಮಾನವೀಯ ದಾಳಿ ನಡೆಯುತ್ತಿದ್ದಾಗ, ಅಕ್ಬರ್ ಚಕ್ರವರ್ತಿಯ ಆಡಳಿತಕಾಲದಲ್ಲಿ ವಾರಣಾಸಿಯಲ್ಲಿ ವಾಸವಾಗಿದ್ದ ಸಂನ್ಯಾಸಿ ಮಧುಸೂದನ ಸರಸ್ವತೀ ಎಂಬ ಸಂತರು ಸಂನ್ಯಾಸಿಗಳ ಮೇಲೆ ನಡೆಯುತ್ತಿದ್ದ ದುಷ್ಕೃತ್ಯಗಳಿಗೆ ಕಡಿವಾಣ ಹಾಕಬೇಕೆಂದು ಮೊರೆಹೋದರು. ಧರ್ಮನಿಷ್ಠ ಅಮಾಯಕ ನಿಃಶಸ್ತ್ರಧಾರಿಗಳ ಮೇಲೆ ನಡೆಯುತ್ತಿರುವ ಹಲ್ಲೆಯನ್ನು ನಿರ್ವಹಿಸುವ ಬಗೆ ಹೇಗೆಂದು ಅಕ್ಬರ್ ತನ್ನ ಮಂತ್ರಿ ಬೀರ್‌ಬಲ್‌ನನ್ನು ಕೇಳಿದಾಗ, "ಬ್ರಾಹ್ಮಣ ಸಂನ್ಯಾಸಿಗಳನ್ನು ರಕ್ಷಿಸಲು ಬ್ರಾಹ್ಮಣೇತರರಿಗೂ ಸಂನ್ಯಾಸದೀಕ್ಷೆಯನ್ನು ನೀಡಿ ಅವರನ್ನು ಶಸ್ತ್ರಧಾರಿಗಳಾಗಿಸಿ" ಎಂದು ಸಲಹೆಯಿತ್ತನಲ್ಲದೆ ಮುಸ್ಲಿಂ ಫಕೀರರಂತೆ ಹಿಂದೂ ಸಂನ್ಯಾಸಿಗಳಿಗೂ ತಮ್ಮ ಶಸ್ತ್ರಗಳನ್ನು ಬಳಸಿದಾಗ ಅವರಿಗೆ ಕಾನೂನು ಕ್ರಮದಿಂದ ವಿನಾಯಿತಿ ನೀಡಿ ಫರ್ಮಾನನ್ನು ಹೊರಡಿಸಿದ. (ಸಂನ್ಯಾಸೀ ಆಂದೋಲನ; ಪುಟ 96. ಲೇಖಕರು– ಬಿ.ಪಿ. ಪ್ರೇಮಕುಮಾರ್)


**ಸ್ವಾತಂತ್ರ್ಯ ಸಂಗ್ರಾಮ**

ರಾಷ್ಟ್ರೋತ್ಥಾನ ಸಾಹಿತ್ಯವು ಪ್ರಕಟಿಸಿದ ಶ್ರೀ ಬಿ.ಪಿ. ಪ್ರೇಮಕುಮಾರ್‌ರವರ 'ಸಂನ್ಯಾಸಿ ಆಂದೋಲನ' ಗ್ರಂಥದಲ್ಲಿ ಮೂಡಿ ಬಂದ ಪ್ರಕಾಶಕರ ನುಡಿಗಳು ಮನೋಜ್ಞ, ಅವರೆನ್ನುತ್ತಾರೆ: ". . . . ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ, ಬ್ರಿಟಿಷರು ಬಂಗಾಳದ ದಿವಾನೀ ಹಕ್ಕನ್ನು ಪಡೆದು ತಮ್ಮ ಆಕ್ರಮಣಕಾರಿ ನೀತಿಯನ್ನು ಪ್ರಕಟಿಸಲು ತೊಡಗಿದ ಪ್ರಾರಂಭದಲ್ಲೇ ಅವರ ವಿರುದ್ಧ ನಾಲ್ಕೈದು ದಶಕಗಳ ನಿರಂತರ ಸಮರವನ್ನು ನಡೆಸಿದವರು ಸಂನ್ಯಾಸಿಗಳು ಮತ್ತು ಫಕೀರರು. ಬ್ರಿಟಿಷರ ದಾಖಲೆಗಳು ಮತ್ತು ಬರಹಗಳಲ್ಲಿ 'ಕಳ್ಳರು', 'ಸುಲಿಗೆಕೋರರು', 'ಕೊಲೆಗಡುಕರು', 'ದರೋಡೆಕೋರರು' ಮುಂತಾಗಿ 'ವರ್ಣಿಸಲ್ಪಟ್ಟಿರುವ ಸಂನ್ಯಾಸಿಗಳ ಈ ಸುದೀರ್ಘ ಹೋರಾಟವೇ ಕ್ರಮೇಣ ಬಂಗಾಳದ ಜನಸಾಮಾನ್ಯರನ್ನೂ ಬ್ರಿಟಿಷರ ವಿರುದ್ಧ ಆಂದೋಲನಗಳಿಗೆ ಸಜ್ಜುಗೊಳಿಸಿದ್ದು. ಗೆರಿಲ್ಲಾ

ಯುದ್ಧತಂತ್ರವನ್ನು ಬಳಸಿಕೊಂಡು, ಭಾರತವನ್ನು ಕಬಳಿಸಲು ಹೊರಟ ಬ್ರಿಟಿಷರ ವೇಗಕ್ಕೆ ತಡೆಯೊಡ್ಡಿದ ಸಂನ್ಯಾಸಿಗಳ ಆ ಅಸೀಮ ಶೌರ್ಯ, ಪರಾಕ್ರಮಗಳ ಎಳೆಯನ್ನೇ ಹಿಡಿದುಕೊಂಡು ಶತಮಾನಗಳ ನಂತರ ಬಂಕಿಮಚಂದ್ರ ಚಟರ್ಜಿಯವರು ರಚಿಸಿದ ಕಾದಂಬರಿ 'ಆನಂದಮಠ'ದಲ್ಲಿದ್ದ 'ವಂದೇಮಾತರಂ' ಗೀತೆ ಆಧುನಿಕ ಭಾರತದ ಕುರುಕ್ಷೇತ್ರದಲ್ಲಿ ಮೊಳಗಿದ ಭಗವದ್ಗೀತೆಯಾಯಿತು. ಸಂನ್ಯಾಸಿಗಳು ಅಂದು ಬಳಸಿದ್ದ ಸಮರತಂತ್ರವನ್ನೇ ಅನುಸರಿಸಿ ಹೊರಟ ಕ್ರಾಂತಿ ಸೇನಾನಿಗಳ ಪಾಲಿಗೆ ರಣಮಂತ್ರವಾಯಿತು. ಅದೊಂದು ರೋಮಾಂಚಕಾರಿ ಇತಿಹಾಸದ ಘಟ್ಟ.

## ವಿವೇಕ ಉತ್ಕ್ರಾಂತಿ

ಗುರುದೇವ ಭಗವಾನ್ ಶ್ರೀರಾಮಕೃಷ್ಣರು, 'ನರೇನ್, ಕಣ್ಣುಮುಚ್ಚಿ ದೇವರನ್ನು ಕಾಣುವುದಕ್ಕಿಂತ ಕಣ್ಣು ತೆರೆದು ದೇವರನ್ನು ಕಾಣು. ಜಗತ್ತಿನ ಹಿತಕ್ಕಾಗಿ ಶ್ರಮಿಸುತ್ತಾ ನಾವು ಆತ್ಮಮುಕ್ತಿ ಗಳಿಸಬೇಕು' ಎಂದು ತಿಳುವಳಿಕೆ ಹೇಳಿದ ಪರಿಣಾಮವೇ ಮುಂದೆ ಸ್ವಾಮಿ ವಿವೇಕಾನಂದರು, ಮಾತೃಭೂಮಿಯ ಉದ್ದಗಲಕ್ಕೂ ಪರಿವ್ರಾಜಕರಾಗಿ ಸಂಚರಿಸಿ ದೇಶಬಂಧುಗಳ ಸ್ಥಿತಿಗತಿಗಳನ್ನರಿತು, ಅವರಿಗೆ ಸ್ವಾತಂತ್ರ್ಯ, ಸ್ವಾಭಿಮಾನ, ರಾಷ್ಟ್ರಭಕ್ತಿಯ ಬಗ್ಗೆ ಬೆಳಕು ಚೆಲ್ಲಿದರು. ಅಲ್ಲದೆ ಭಾರತದ ಬಗ್ಗೆ ಉದಾಸೀನತೆಯಿಂದಿದ್ದ ಪಾಶ್ಚಾತ್ಯ ಜಗತ್ತಿಗೆ ಜೀವನೋದ್ದೇಶದ ಪಾಠ ಹೇಳಿದರು.



ಸ್ವಾಮಿ ವಿವೇಕಾನಂದರ ಕಾರ್ಯ ವೈಖರಿಯಲ್ಲಿ ಎರಡು ಸ್ತರಗಳನ್ನು ಅರಿಯಬಹುದಾಗಿದೆ. ಇದು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮಹತ್ತರ ತಿರುವನ್ನು ನೀಡಿತು. ತನ್ನತನವನ್ನು ಕಳೆದುಕೊಂಡು ಅತ್ಯಂತ ದೀನಸ್ಥಿತಿಯಲ್ಲಿದ್ದ ಭಾರತೀಯರಿಗೆ ಧೈರ್ಯ–ಸ್ಥೈರ್ಯ ನೀಡಿದ ಮಹಾತ್ಮರವರು. ಬಾಲಗಂಗಾಧರ ತಿಲಕರು ಹೇಳುತ್ತಾರೆ:

"Undoubtedly Swami Vivekananda is the father of Modern India. The greatest achievement of Swamiji was in raising India in the world as a spiritual force and as a nation to be respected".

ಮಹರ್ಷಿ ಅರವಿಂದರು, "ಸ್ವಾಮಿ ವಿವೇಕಾನಂದರ ವಿಶ್ವಧರ್ಮಸಮ್ಮೇಳನದಲ್ಲಿನ ಅದ್ಭುತ ಭಾಷಣ ಮತ್ತು ಅವರ ಪರಂಪರೆಯು ಜಗತ್ತಿನಲ್ಲಿ ನೆರವೇರಿಸಿದ ಕಾರ್ಯಚಟುವಟಿಕೆಗಳು, ನೂರು ದುಂಡುಮೇಜಿನ ಪರಿಷತ್ತುಗಳು ಮಂಡಿಸಬಹುದಾದ ಪರಿಣಾಮ ಗಳಿಗಿಂತ ಅಧಿಕವಾಗಿತ್ತು" ಎಂದಿದ್ದಾರೆ.

ಭಾರತರತ್ನ ಸಿ.ರಾಜಗೋಪಾಲಾಚಾರಿ, "ಸ್ವಾಮಿ ವಿವೇಕಾನಂದರು ಭಾರತವನ್ನು ಮತ್ತು ಹಿಂದೂ ಧರ್ಮವನ್ನು ರಕ್ಷಿಸಿದರು. ಅವರು ಬಾರದೆ ಇದ್ದಿದ್ದರೆ ನಮ್ಮ ಧರ್ಮ ಉಳಿಯುತ್ತಿರಲಿಲ್ಲ, ಅಷ್ಟೇ ಅಲ್ಲ ನಮಗೆ ಸ್ವಾತಂತ್ರ್ಯ ಬರುತ್ತಿರಲೂ ಇಲ್ಲ" ಎಂದು ಹೇಳಿದ್ದರು.

ಇಬ್ಬರು ಬಂಗಾಳಿ ದಿಗ್ಗಜರ ಮಾತುಗಳು ಉಲ್ಲೇಖಾರ್ಹ. ವಿಶ್ವಕವಿ ರವೀಂದ್ರರು ಹೇಳುತ್ತಾರೆ: "ನೀವು ಭಾರತವನ್ನು ಸಮಗ್ರವಾಗಿ ಅರಿಯಬೇಕೆಂದಿದ್ದರೆ ಸ್ವಾಮಿ ವಿವೇಕಾನಂದರ ಜೀವನ–ಸಂದೇಶಗಳನ್ನು ಆಮೂಲಾಗ್ರವಾಗಿ ಅಧ್ಯಯನಗೈಯಬೇಕಿದೆ". ಬಂಗಾಳದ ಸಂತಕವಿ ಕಾಜಿ ನಸರುಲ್ ಇಸ್ಲಾಂ ಹೇಳುತ್ತಾರೆ: "ಸ್ವಾಮಿ ವಿವೇಕಾನಂದರೇ, ನೀವು ನವಭಾರತಕ್ಕೆ ನವವೇದವನ್ನು ತಂದಿರಿ. ಮಾನವನಲ್ಲಿ ಅಂತರ್ಗತವಾಗಿರುವ ದೈವತ್ವವನ್ನು ಮಾಳಿಗೆಯ ಮೇಲೆ ನಿಂತು ಸಾರಿ ಜಾತಿಧರ್ಮ ಭೇದಗಳಿಂದ ಬಂದಿದ್ದ

ಕಳಂಕವನ್ನು ತೊಡೆದುಹಾಕಿದಿರಿ".

ಪ್ರಸ್ತಾಪಿತ ಮೇಲಿನ ಮಾತುಗಳಲ್ಲಿ ಸ್ವಾಮಿ ವಿವೇಕಾನಂದರು ಭಾರತೀಯ ಜನಮಾನಸದಲ್ಲಿ ಶಕ್ತಿ ಸಂಚಲನಗೈದದ್ದು, ಮಲಗಿ ನಿದ್ರಿಸುತ್ತಿದ್ದ ಕುಂಡಲಿನೀ ಶಕ್ತಿಯನ್ನು ಜಾಗೃತಗೊಳಿಸಿದ್ದು ಅರಿವಾಗುತ್ತದೆ.

## ಧೀರ ಸಂನ್ಯಾಸಿ ಸ್ವಾಮಿವಿವೇಕಾನಂದ

**ಪಾಶ್ಚಾತ್ಯ ನಾಡಿನಲ್ಲಿ:**

ಹೊರರಾಷ್ಟ್ರಗಳಲ್ಲಿ ತಮ್ಮ ಅತ್ಯದ್ಭುತವಾದ ಉಪ ನ್ಯಾಸಗಳ ಮೂಲಕ ದಾಸ್ಯರಾಷ್ಟ್ರದ ಈ ಸಂನ್ಯಾಸಿಯು ಪಾಶ್ಚಾತ್ಯರ ಮನಸ್ಸನ್ನು ಭವ್ಯ ಸನಾತನ ಧರ್ಮಸಂಸ್ಕೃತಿ ಯೆಡೆಗೆ ಹರಿಯಿಸಿದ್ದು ರೋಮಾಂಚಕಾರಿ ಸಂಗತಿ. ಕಾಲಗತಿಯ ಪ್ರಕಾರ ಅವರ ವಯಸ್ಸು ಸುಮಾರು ಮೂವತ್ತು ವರ್ಷಗಳಾದರೂ ಸಂಸ್ಕೃತಿಯ ದೃಷ್ಟಿಯಲ್ಲಿ ಅವರು ಯುಗ–ಯುಗಗಳಷ್ಟು ಹಿರಿಯರೆನಿಸಿದರು!

ಅಮೆರಿಕಾದ ವಿಶ್ವಧರ್ಮ ಸಮ್ಮೇಳನದಲ್ಲಿ ಧಾರ್ಮಿಕ ವೇದಿಕೆಯಷ್ಟೇ ಅಲ್ಲದೆ ವೈಜ್ಞಾನಿಕ ವೇದಿಕೆಯಲ್ಲೂ ಸ್ವಾಮೀಜಿ ಉಪನ್ಯಾಸ ನೀಡಿದ್ದು ಹೆಗ್ಗಳಿಕೆ. ಸೆಪ್ಟೆಂಬರ್ 11, 1893ರಂದು ಧರ್ಮಸಮ್ಮೇಳನದ ಉದ್ಘಾಟನಾ ಸಭೆಯಲ್ಲಿ ಮಾತನಾಡಿದ ಸ್ವಾಮೀಜಿ ತದನಂತರದ ಮುಂದಿನ ಹದಿನೈದು ದಿನಗಳಲ್ಲಿ 'ನಮ್ಮಲ್ಲೇಕೆ ಒಮ್ಮತವಿಲ್ಲ?', 'ಹಿಂದೂ ಧರ್ಮ(ಲೇಖನ)', 'ಧರ್ಮಕ್ಕಿಲ್ಲ ಭಾರತದಲ್ಲಿ ಬರಗಾಲ', 'ಸಾಂಪ್ರದಾಯಿಕ ಹಿಂದೂ ಧರ್ಮ ಮತ್ತು ವೇದಾಂತ ತತ್ತ್ವ', 'ಭಾರತದ ಆಧುನಿಕ ಧರ್ಮಗಳು', 'ಹಿಂದೂಧರ್ಮದ ತಿರುಳು' ಮತ್ತು 'ಬೌದ್ಧಧರ್ಮಕ್ಕೆ ಬೆಂಬಲವಾಗಿ' ಎಂಬ ವಿಷಯಗಳಾಧಾರಿತ ಉಪನ್ಯಾಸಗಳನ್ನು ನೀಡಿದರು.

ಅಮೆರಿಕಾದ ನ್ಯೂಯಾರ್ಕ್ ಹೆರಾಲ್ಡ್ ಪತ್ರಿಕೆ ಹೀಗೆ ಬರೆದಿತ್ತು: "ನಿಸ್ಸಂದೇಹವಾಗಿಯೂ ಸ್ವಾಮಿ ವಿವೇಕಾನಂದ ರು ಸಮ್ಮೇಳನದ ಅತಿಶ್ರೇಷ್ಠ ವ್ಯಕ್ತಿ. ಅವರ ಮಾತುಗಳನ್ನು ಕೇಳಿದ ಮೇಲೆ, ಇಂತಹ ತಿಳುವಳಿಕಸ್ಥ ದೇಶಕ್ಕೆ ಧರ್ಮ ಪ್ರಚಾರಕರನ್ನು ಕಳಿಸುವುದು ಎಂತಹ ಮೂರ್ಖತನ! ಎಂದೆನಿಸಿತು".

ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ಹೇಳಿದ್ದು: "ಧರ್ಮವು ಮನುಷ್ಯನ ದೌರ್ಬಲ್ಯದಿಂದ ಉದಿಸಿದುದಲ್ಲ ಅಥವಾ ಯಾವುದೋ ಘೋರ ಉಪದ್ರವಕ್ಕೆ ಹೆದರಿ ಅವನು ಮಾಡಿಕೊಂಡದ್ದಲ್ಲ. ಧರ್ಮವು ಪ್ರೇಮದ ವಿಕಸನ, ಬೆಳವಣಿಗೆ. ಸ್ವಾಮೀಜಿಯವರ ಈ ಮಾತು ಗಳನ್ನಾಲಿಸಿದ ಅಮೇರಿಕನ್ನರು, "ನಿಜವಾದ ಹಿಂದೂ ಧರ್ಮದ ಇಂತಹ ಅಧಿಕೃತ ಪ್ರತಿನಿಧಿಯೊಬ್ಬ ಅಮೇರಿಕಾ ದ ಚಿಂತನಶೀಲ ಜನರಿಗೆ ಹಿಂದೆಂದೂ ಲಭ್ಯವಾಗಿರಲಿಲ್ಲ! ಅವರನ್ನು ಕಳಿಸಿಕೊಟ್ಟ ಭಾರತಕ್ಕೆ ಅಮೇರಿಕಾವು ಅತ್ಯಂತ ಕೃತಜ್ಞವಾಗಿದೆ" ಎಂದು ಉದ್ಗರಿಸಿದರು.

ಊಹಿಸಲಸಾಧ್ಯವಾದ ಯಶಸ್ಸನ್ನು ಅಮೇರಿಕಾದಲ್ಲಿ ಕಂಡ ಸ್ವಾಮಿ ವಿವೇಕಾನಂದರು ಪತ್ರ ಮುಖೇನ ಭಾರತೀಯರನ್ನು, "ಅಮೇರಿಕಾದ ಪ್ರತಿಷ್ಠಿತ ಪತ್ರಿಕೆಗಳು ನನ್ನನ್ನು ಕುರಿತು ಶ್ಲಾಘಿಸುತ್ತಿರುವುದನ್ನು ಕಂಡು ನಿಮಗೆ ಮಹದಾನಂದವೆನಿಸಿರಬಹುದು. ಆದರೆ ನೆನಪಿಡಿ! ನನಗೆ ಬಂದ ಕಷ್ಟಗಳು ಇನ್ಯಾವುದೇ ಹಿಂದೂ ವ್ಯಕ್ತಿಗಾದರೂ ಬಂದಿದ್ದರೆ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ! ಭಾರತೀಯರೇ, ನೀವು ಬಾವಿಯ ಕಪ್ಪೆಗಳಾಗಿದ್ದೀರಿ; ಸುತ್ತಮುತ್ತಲಿನ ಪ್ರಪಂಚದಲ್ಲಿ ಏನಾಗುತ್ತಿದೆಯೆಂಬ ಅರಿವೇ ನಿಮಗಿಲ್ಲ", ಎಂದಿದ್ದಾರೆ.

ಸ್ವಾಮಿ ವಿವೇಕಾನಂದರು ಪ್ರಾಪಂಚಿಕ ಸುಖ ಲೋಲುಪತೆಗಳಲ್ಲಿ ಮುಳುಗಿಹೋಗಿದ್ದ ಪಾಶ್ಚಾತ್ಯರಿಗೂ ಜೀವನಾದರ್ಶದ ಪಾಠ ಹೇಳಿದರು. ತಮ್ಮ ಮಾತುಗಳಿಗೆ ಪಾಶ್ಚಾತ್ಯರೂ ತಲೆದೂಗುವಂತೆ ಮಾಡಿದರು. ಅವರುಗಳ ಮನಸ್ಸಿನಲ್ಲಿದ್ದ "'ಭಾರತವೆಂಬ ಗುಲಾಮಿರಾಷ್ಟ್ರ'ದ ಪರಿಕಲ್ಪನೆ ತಿದ್ದುಪಡಿಯಾಗಿ ಭಾರತದ ಬಗ್ಗೆ ಗೌರವಾದರಗಳು ಮೂಡುವಂತೆ ಆಯಿತು. ಪಾಶ್ಚಾತ್ಯರ ಹೃನ್ಮನಗಳಲ್ಲಿ ಪೂಜ್ಯತೆ ಗಳಿಸಿದ ಸ್ವಾಮಿ ವಿವೇಕಾನಂದ ರನ್ನು, ಅವರ ಮಾತು ಗಳನ್ನು ಭಾರತೀಯರು 'ಶಕ್ತಿ ಸಂಜೀವಿನಿ' ಎಂದೆಣಿಸಿ ಕಾರ್ಯ ಪ್ರವೃತ್ತರಾದರು.

ಸ್ವಾಮಿ ವಿವೇಕಾನಂದರ ಆಗಮನದಿಂದ

ಭಾರತೀಯರು ಸೂತಕದ ಛಾಯೆಯಿಂದ ಮೈಕೊಡವಿ ಮೇಲೆದ್ದರು. ಸ್ವಾತಂತ್ರ್ಯವನ್ನು ಗಳಿಸುವ ಪಥದಲ್ಲಿ ಕಾರ್ಯೋನ್ಮುಖರಾದರು. ಸ್ವಾತಂತ್ರ್ಯ ಹೋರಾಟವನ್ನು ಯೋಗ್ಯ ರೀತಿಯಲ್ಲಿ ಯೋಜಿಸುವ, ಸ್ವಾತಂತ್ರ್ಯ ಗಳಿಸುವ ಮತ್ತು ಗಳಿಸಿದ ಸ್ವಾತಂತ್ರ್ಯವನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸುವ ಕುರಿತಾಗಿ ಸ್ವಾಮೀಜಿ ಎಚ್ಚರಿಸಿದರು.

ಸ್ವಾಮಿ ವಿವೇಕಾನಂದರ ಹಿತೋಕ್ತಿಗಳು ಕೇವಲ ರಾಜಕೀಯ ಸ್ವಾತಂತ್ರ್ಯ ಗಳಿಕೆಗೆ ಸೀಮಿತವಾಗಿರಲಿಲ್ಲ. ಭಾರತದ ಉಳಿವು ಇಡೀ ಜಗತ್ತಿನ ಉಳಿವಿನ ಅನಿವಾರ್ಯವೆಂದರಿತಿದ್ದ ಸ್ವಾಮೀಜಿ ಭಾರತೀಯರಿಗೆ ಹೇಳುತ್ತಾರೆ: "ಉಪನಿಷತ್ತುಗಳಿಗೆ ಹಿಂದಿರುಗಿ. ಶಕ್ತಿ, ನಿರ್ಭಯತೆ ಮತ್ತು ಮುಕ್ತಿ – ಇವುಗಳ ಚಿರಂತನ ಸ್ರೋತ ಉಪನಿಷತ್ತುಗಳಲ್ಲಿವೆ. ಅವುಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡುವುದರಿಂದ ಬೌದ್ಧಿಕ, ಮಾನಸಿಕ, ಭೌತಿಕ, ಸಾಮಾಜಿಕ, ಆರ್ಥಿಕ, ರಾಜಕೀಯಗಳಷ್ಟೇ ಅಲ್ಲದೆ ಜೀವನವನ್ನು ಆದರ್ಶದ ಉಚ್ಛ್ರಾಯ ಸ್ಥಿತಿಗೆ ಒಯ್ಯಲು ಸಾಧ್ಯ" ಎಂದು ತಿಳಿವಳಿಕೆ ಇತ್ತರು.

ಸ್ವಾತಂತ್ರ್ಯವೆಂಬುದು ಜಗತ್ತಿನಾದ್ಯಂತ ವೈವಿಧ್ಯ ಮಯವಾಗಿ ವಿಶ್ಲೇಷಿಸಲ್ಪಟ್ಟಿದೆ. ಆದರೆ ಭಾರತವು 'ಅಜ್ಞಾನದಿಂದ ನಿವೃತ್ತಿ' ಎಂಬ ಆದರ್ಶದಿಂದ ಮುಂದುವರೆದು 'ತ್ಯಾಗ ಮಾತ್ರದಿಂದ ಅಮೃತತ್ವ ಪ್ರಾಪ್ತಿ' ಎಂದು ಸಾರಿದೆ. 'ದೌರ್ಬಲ್ಯವೇ ಮರಣ' ಎಂಬ ಸಂದೇಶ ಒಂದೆಡೆಯಾದರೆ 'ಶಕ್ತಿಶಾಲಿಯೂ, ಪೌರುಷವಂತನೂ ಆದ ದುಷ್ಟನನ್ನು ಗೌರವಿಸೋಣ, ಆದರೆ ಹೇಡಿಯನ್ನಲ್ಲ' ಎಂಬ ಸಂದೇಶ ಮತ್ತೊಂದೆಡೆ. 'ಶಕ್ತಿವಂತನಾಗು, ಸಶಕ್ತನಾಗು, ಸರ್ವಶಕ್ತನಾಗು' ಎಂಬುದು ನಾಣ್ಯದ ಒಂದು ಸಂದೇಶಮೂಲವಾದರೆ, "ಯಾರು ಇತರರಿಗಾಗಿ ಬದುಕುತ್ತಾರೆಯೋ ಅವರದ್ದೇ ಜೀವನ, ಉಳಿದವರು ಬದುಕಿದ್ದೂ ಸತ್ತಂತೆ!" ಎಂಬುದು ವಿವೇಕವಾಣಿಯ ನಾಣ್ಯದ ಮತ್ತೊಂದು ಮುಖ.


ಪಾಶ್ಚಾತ್ಯ ಜಗತ್ತಿನಲ್ಲಿ ಭೌತಿಕ, ಮಾನಸಿಕ ಮತ್ತು ದೈಹಿಕ ವ್ಯಕ್ತಿತ್ವಗಳ ಅಭಿವೃದ್ಧಿಯೇ ಸುಖಜೀವನದ ಸೂತ್ರ! ಆದರೆ 'ಇತರರನ್ನು ಗೆದ್ದವನು ಶಕ್ತಿಶಾಲಿ; ತನ್ನನ್ನೇ ಗೆದ್ದವನು ಸರ್ವಶಕ್ತ' ಎಂಬುದು ಭಾರತೀಯ ಮಹಾನ್ ಆದರ್ಶ. 'ನಾಗರಿಕತೆಯನ್ನು ಕಟ್ಟಲು ಶತಮಾನ ಬೇಕು, ಕೆಡವಲು ಒಂದು ಘಳಿಗೆ ಸಾಕು! ಆದರೆ ಸಂಸ್ಕೃತಿ ಯೆಂಬುದನ್ನು ಉಳಿಸಿ ಬೆಳೆಸುವುದು ಅದೆಷ್ಟು ಕಷ್ಟ ಅಲ್ಲವೇ?'

ಇತಿಹಾಸಜ್ಞ ವಿಲ್ ಡ್ಯೂರೆಂಟ್ ಹೇಳುವಂತೆ, "ತತ್ತ್ವಜ್ಞಾನಿಗಳು ಹಾಗೂ ಸಂತರೇ ನಿಜವಾದ ಕ್ರಾಂತಿಕಾರಿಗಳು!"

ಭಾರತವನ್ನು ಕಟ್ಟಿಬೆಳೆಸಿದ ಸಂತ ಮಹಾತ್ಮರು ವಿಶೇಷವಾಗಿ ಗಮನಿಸಿದ್ದು ಲೌಕಿಕ ಔನ್ನತ್ಯವನ್ನಷ್ಟೇ ಅಲ್ಲ, ಆಧ್ಯಾತ್ಮದ ಔಚಿತ್ಯವನ್ನೂ ಕೂಡ.

ಪಾಶ್ಚಾತ್ಯರಿಂದು ಉದ್ಗರಿಸುತ್ತಿದ್ದಾರೆ: "ಜಗತ್ತಿನೆಲ್ಲೆಡೆ ಬಡತನವಿದೆ. ಆದರೆ ಭಾರತದಲ್ಲಿನ ಬಡತನವು ವಿಶೇಷವಾದದ್ದು! ಭಾರತವು ಬಡತನದ ವಿಷಯದಲ್ಲಿ ಶ್ರೀಮಂತವಾದದ್ದು. ಆದರೆ ಭಾರತೀಯರು ತಮ್ಮ ಶ್ರೀಮಂತಿಕೆಯನ್ನು ಹಣದಿಂದಷ್ಟೇ ಅಳೆಯುವುದಿಲ್ಲ!"

ಜೀವನವೆಂದರೆ ಅಲ್ಪಸತ್ಯದಿಂದ ಪೂರ್ಣಸತ್ಯ ದೆಡೆಗಿನ ಪಯಣ. 'ಬೇಕುಬೇಕು ಎಂಬುದರಿಂದ ಮುಕ್ತಗೊಂಡು ಸಾಕುಸಾಕು' ಎಂದು ಆನಂದಿಸುವ ಸಾಧನಾ ಪಯಣ. ಆದರೆ ಇಲ್ಲಿ 'ಸರಳತೆ' ಎಂದರೆ ದಾರಿದ್ರ್ಯವಲ್ಲ! 'ವಿಧೇಯತೆ' ಎಂದರೆ ಗುಲಾಮಗಿರಿ ಅಲ್ಲ! ಇದುವೇ ಸ್ವಾತಂತ್ರ್ಯ, ಬದುಕಿನ ಪಥಕ್ರಮಣ.




ವಿವೇಕ ಮತ್ತು ಆತ್ಮವಿಶ್ವಾಸ ಒಂದೇ ನಾಣ್ಯದ ಎರಡು ಮುಖಗಳು

# CONTRIBUTION OF SANSKRIT TO SCIENCE IN INDIA

- Dr. Y.S. Gayathri



Samskritam – this language is the gift of nature to the mankind. The word *Samskritam* it self is a scientific word. It consists of two words सम्यक् कृतम् which means which has been processed; which has been beautified. Sanskrit is a beautiful language , processd in a proper manner is the meaning of the word संस्कृतम्. It encompasses all the fields of knowledge. There is no subject on this earth, untouched by Sanskrit. A study reveals that almost all the languages of the world contain at least 10-20% of Sanskrit words.

A true knowledge seeker should opt to learn Sanskrit. An individual has a number of benefits from learning this language. Self management is very easy ; indicating that Sanskrit includes managemental studies. He can present himself in a very good manner; His vocabulary will be increased; Grammar makes him perfect in the correct usage of language; His intellect will be sharpened by the study of Logic. The vast world of Sanskrit literature makes him generous; Subhashitas guide him on the proper path of life and avoids him by taking the wrong route. If one wants to have the History of any discipline, whether it is Science, Arts, Commerce, Social Science, Jurisprudence, Music, Dance, Engineering, Astronomy or any other branch of knowledge, he has to go surrender to Sanskrit language.


All the scriptures, Vedas and Upanishads, Ramayana and Mahabharata, the poetics, drama and dramaturgy, various Philosophical schools and their principles, innumerable number of texts pertaining to various domains are not to be known without this language.

In Vedic and Upanishadic period विशेषं ज्ञानं विज्ञानं means विज्ञान is a special knowledge. But now we have taken the meaning as Science as on today.

Let us take the different areas of science in Sanskrit one by one now.

**Veads**

Vedas are rich in Scientific knowledge. In Rig Vedic period only our ancestors had the knowledge of helio centric model of earth. They were very clear about this. मित्रो दधार




*It is very easy to defeat someone, but very difficult to win someone.-Abdul Kalam*

पृथिवीम् उत द्याम् । The Sun is the support of the earth. *(R.V.3/59/1)*

The followers of the sage Atri excelled in the knowledge of eclipse.

यं वै सूर्यं स्वर्भानुः तमसाविद्ध्य्दासुरः ।
अत्रय्स्तमन्वविन्दन् न ह्यन्ये अश्क्नुवन् ॥

*(R.V.5/40/1)*

They were knowing that the moon reflects the light of the sun.

सूर्यरश्मिश्चन्द्रमा गन्धर्वः ।

*( T.S.3/4/7/9)*

पञ्चारे चक्रे परिवर्तमाने तस्मिन्नातस्थुर्भुवनानि विश्वा ।
तस्य नाख्शस्तप्यते सनादेव न शीर्यते सनाभिः ॥

Sun moves in an orbit in which itself is moving. Earth and other bodies move around the sun due to force of attraction, because sun is heavier than them. (RV 1/164/13)

सविता यन्त्रैः अरम्णात् अस्कम्भते सविता द्यामुदृंहत् ।
अश्वमिवाधुक्षद्धनिमन्तरिक्षमतूते बद्धं सविता समुद्रम् ॥

"The sun has tied Earth and other planets through attraction and moves them around itself as if a trainer moves newly trained horses around itself holding their reins."

How best can you explain the gravitational force and objects falling into earth and not the other way round? *(RV 10/149/1)*

Thus we can find some of the concepts of Physics and Astronomy in Rig Veda, a Sanskrit Work.

The protection of cattle and animals especially cow, is mentioned in Yajurveda.

*(Y.V. 13/47-49)*

इमं मा हिंसीर्द्विपादं पशून् सहस्राक्षो मेधाय चीयमानः ।
मयुं पशुं मेघमग्ने जुषस्व तेन चिन्वान्स्तन्वो निषीद ।
मयुं ते शुगृच्छतु यं द्विष्मस्तं ते शुगृच्छतु ।

These mantras say that no one should ill treat the animals; instead he should take proper care of them; should make use of them for the interest of the large number and please all the living beings; The cruel wild animals troubling the cattle and men should be killed or they should be arrested.

The men should not kill animals like horses and others. He should never kill the wild animals that are helpful to the human beings. The eco system will be imbalanced by killing them. Those animals need to be protected and only the harmful animals to be killed.

The king should not kill the animals like oxen helping the former and cows which give milk and milk products for the well-being of the mankind. Those who kill these helpful animals should be punished severely.

These are the laws laid by Vedas to protect the environment.

It is well known that Samaveda is the origin of Music.

Atharva Veda has the reference to electrical and atomic energy in 20 th Kanda, which is famous as Indragni Mantra.

**Mathematics**

Mathematics is a subject which is embedded in all walks of life. Indians have made great contributions in this field.

A Rig Vedic Seer by name Medhatithi has

given the number परार्धम् = $10^{12}$. Which is being praised globally.

The number system was well developed. Taittiriya Samhita contains numbers upto $10^{19}$which is named as loka.

A Buddhist work Lalithavistara grantha has the numbers each greater than 100 times the previous, has a large number as $10^{341}$.

Shulbasutra Baudhayana gives the rules of Pythagoras theorem, prior to him.

दीर्घचतुरस्रस्याक्ष्ण्या रज्जुः पार्श्वमानी तिर्यङ्मनी च यत्
पृथग्भूते कुरुतः तदुभयं करोति ।

The same rule was restated by the mathematicians of the later period thus – In a right angled triangle the sum of the squares on the other two sides is equal to the square on the hypotenuse.

*(Baudhayana Sulba Sutra 1/12 )*

Shulbasutras deal with the fire altars for various sacrifices. Different altars had to be constructed for different sacrifices. So it was mandatory for the people of that period to have the proper knowledge of geometrical figures and their area and transformation of one shape to another etc. The use of algebra in geometry, the geometrical representation of algebraic terms prove their high profile in this domain.

Aryabhata I of V century CE is the first to give the formula for the area of a triangle; the accurate value for π and accurate values for sine tables; and solution for indeterminate equations.

Ganitasaarasangraha of Mahaveeracharya introduces LCM for fractions for the first time. expressing a number as the sum of many fractions with numerator as one,

Eg - $1 = \frac{1}{2} + \frac{1}{3} + \frac{1}{3^2} + \ldots\ldots + \frac{1}{3^{n-2}} + \frac{1}{2.3^{n-2}}$

a special kind of multiplication namely malagunana, in which the place value of the digits in the number remain the same counted either by right or by left are some of the special features of this work.


i) Eg. - $139 \times 109 = 15151$

ii) $12345679 \times 9 = 111,111,111$

Siddhantashiromani of Bhaskara II is a mile stone in the history of Mathematics.

Lilavati is a part of it containing Arithmetic algebra and geometry. He poses the problems by describing the natural beauty so that a student is interested in solving them. His dealing with equations is simply superb.

He has solved the indeterminate equation 61 x2 + 1 = y2 completely by chakravala method. The same problem was given by Fermat to Frenicle as a challenging problem in 17th century CE. But Bhaskara II has solved it




*Education is not filling the mind with a lot of facts. Perfecting the instrument and getting complete mastery of my own mind*

completely 500 years prior to him. This highlights the excellency of Indian mathematical knowledge.


Puranic literature too gives a lot of Scientific information. Agnipurana gives a detailed description of Pratima nirmana. All the puranas have the factors of time from truti to manvantara. Bhagavata purana gives the space and time concept. Garbhopanishat is a part of this scripture, where the development of a human embryo from the day of conception to the day of delivery is explained in detail. It almost coincides with the modern science. The thought process of our ancestors is really amazing and beyond our words.

Encyclopedia like Manasollasa and Shivatattva ratnakara take us to the shore of the ocean of knowledge.

गजशास्त्र, अश्वशास्त्र, and others reveal the detailed study of the life style of these animals.

Dalvana was a specialist in the study of venomous snakes. He tells about 13 variety of snakes. Rig Veda consists of a list of names of more than 50 different species of birds.

Charaka and Sushruta have classified plants and animals on the basis of their characteristics.




We can not move forward without mentioning Ayurveda, a medicinal system, serving the mankind since 5000 years. Charaka and Sushruta are the specialists here. Panchakarma chikitsa of Ayurveda has become more popular now.

The brevity of Panini in conveying the concepts through sutras, has made Sanskrit as the best computer friendly language.

In Chemistry, metallurgy was the most well known concept. They were experts in extracting the ores and purifying them. A lot of study on Mercury has been carried out in this branch of Science.

Smriti literature, the code of law forms the foundation for judicial system in our country. Manusmriti, Yajnyavaalkya Smriti and Narada Smriti are considered to be the significant works. They deal with the duties of each individual in a society and lay rules to run it smoothly. Narada smriti gives the forensic laws.

As the subject is very vast we can have just some glimpses of different branches of knowledge. All the texts pertaining to this area are in Sanskrit language alone.

The learning of Sanskrit, study different disciplines in this language give a holistic optimistic approach towards life.

आ नो भद्राः क्रतवो यन्तु विश्वतः Let the noble thoughts come to us from every where – says Rig Veda.

# ಸ್ವಾತಂತ್ರ್ಯಹೋರಾಟದಲ್ಲಿ ಕ್ರಾಂತಿಕಾರಿಗಳು

**– ಚಕ್ರವರ್ತಿ ಸೂಲಿಬೆಲೆ**
ವಾಗ್ಮಿ, ಚಿಂತಕ, ಅಂಕಣಕಾರರು



ಭಾರತಕ್ಕೆ ಸ್ವಾತಂತ್ರ್ಯ ಬಂದು ಈಗ 75 ವರ್ಷ. ಈ ಏಳೂವರೆ ದಶಕಗಳಲ್ಲಿ ನಾವು ಸಾಧಿಸಿದ ಪ್ರಗತಿಯನ್ನು ಸ್ವಾತಂತ್ರ್ಯ ಹೋರಾಟ ಕಾಲದ ಕನಸುಗಳಿಗೆ ಹೋಲಿಸಿಕೊಂಡರೆ ನಗಣ್ಯವೇ. ಆರೂವರೆ ಲಕ್ಷಕ್ಕೂ ಹೆಚ್ಚು ಜನರ ಬಲಿದಾನ ಈ ನಾಡಿಗಾಗಿ ನಡೆದಿರುವುದು ಸಾಮಾನ್ಯವಾದ ಸಂಗತಿಯಲ್ಲ. ಭಾರತವೆಂದರೆ ಹೇಡಿಗಳ, ಮುಖಹೇಡಿಗಳ ನಾಡು ಎಂದು ಹೇಳುತ್ತಿದ್ದವರಿಗೆಲ್ಲ ನಮ್ಮ ಸ್ವಾತಂತ್ರ್ಯ ಹೋರಾಟದ ಕಥನವೇ ಒಂದು ಸ್ಫೂರ್ತಿದಾಯಕ ಉತ್ತರ. ಭಾರತದ ಈ ಹೋರಾಟದಲ್ಲಿ ಹೆಣ್ಣು–ಗಂಡಿನ ಭೇದವಿರಲಿಲ್ಲ, ಕಿರಿಯ–ಹಿರಿಯ ಎಂಬ ವ್ಯತ್ಯಾಸವಿರಲಿಲ್ಲ, ಶ್ರದ್ಧೆಯಿಂದ ಕದನಕ್ಕಿಳಿದವರು ಜಾತಿಯನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ, ಕೊನೆಗೆ ಪ್ರಾಂತ್ಯಗಳ ಗಡಿರೇಖೆಗಳು ಹೋರಾಟದ ಸಾಹಸಕ್ಕೆ ಅಡ್ಡ ಬರಲಿಲ್ಲ. ಪಂಜಾಬಿನಲ್ಲಿ ಲಾಲಾ ಲಜಪತರಾಯರು, ಮಹಾರಾಷ್ಟ್ರದಲ್ಲಿ ಬಾಲಗಂಗಾಧರ ತಿಲಕರು, ಬಂಗಾಳ 'ದಲ್ಲಿ ಬಿಪಿನ್ ಚಂದ್ರಪಾಲರು ಊದಿದ ರಣಕಹಳೆ ನಿಧಾನವಾಗಿ ಅಲೆ–ಅಲೆಯಾಗಿಯೇ ದೇಶವನ್ನು ವ್ಯಾಪಿಸಿಕೊಂಡಿತು. ತಮ್ಮ ಅಧಿಕಾರಾವಧಿಯ 200 ವರ್ಷಗಳಲ್ಲಿ ಬ್ರಿಟಿಷರು ಕನಿಷ್ಠ ನಾಲ್ಕುನೂರು ಸಣ್ಣ, ದೊಡ್ಡ ದಂಗೆಗಳನ್ನು ನೋಡಿದ್ದಾರೆ. ಅದನ್ನು ಮಟ್ಟಹಾಕುವಲ್ಲಿ ಹೈರಾಣಾಗಿ ಬಿಟ್ಟಿದ್ದಾರೆ. ಅಂದರೆ ಯಾವೊಂದು ದಿನವೂ ಬ್ರಿಟಿಷರು ನೆಮ್ಮದಿಯಿಂದಿದ್ದ ಕಾಲಘಟ್ಟವೇ ಇಲ್ಲ. ಮೊದಲ ಮತ್ತು ಎರಡನೇ ವಿಶ್ವಯುದ್ಧಗಳ ನಂತರ ವಂತೂ ಅವರಿಗೆ ಜಾಗತಿಕ ಒತ್ತಡಗಳು ಉಂಟಾಗಿದ್ದವು. ಅದರಲ್ಲೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರು ಭಾರತದ ವಸ್ತುಸ್ಥಿತಿಯನ್ನು ಜಗತ್ತಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದರು. ಸುಭಾಷರ ಪ್ರಯತ್ನದಿಂದ ಇಂಡಿಯನ್ ನ್ಯಾಷನಲ್ ಆರ್ಮಿ ಬ್ರಿಟಿಷರ ಮೇಲೆ ದಾಳಿಗೈದು ಅವರನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದ್ದಲ್ಲದೇ ಜಗತ್ತಿನ ಅನುಕಂಪ ಗಳಿಸುವಲ್ಲೂ ಯಶಸ್ವಿಯಾಯಿತು.




ವಾಸುದೇವ ಬಲವಂತ ಫಡ್ಕೆ

1857ರ ಸಂಗ್ರಾಮದ ನಂತರ ವಾಸುದೇವ ಬಲವಂತ ಫಡ್ಕೆ ಬ್ರಿಟಿಷರನ್ನು ಧೈರ್ಯದಿಂದ ಎದುರಿಸಿದ ರೀತಿ ಬ್ರಿಟಿಷರಿಗೆ ಎಚ್ಚರಿಕೆಯ ಗಂಟೆಯೇ ಆಗಿತ್ತು. ಆದ್ಯ ಕ್ರಾಂತಿಕಾರಿ ಎಂದು ಗುರುತಿಸಲ್ಪಟ್ಟ ವಾಸುದೇವ ಬಲವಂತ ಫಡ್ಕೆ ವ್ಯವಸ್ಥೆಯ ವಿರುದ್ಧ ಸಿಡಿದುನಿಂತ. ತನ್ನ ತಾಯಿಯ ಶವವನ್ನು ನೋಡಲು ಅನುಮತಿ ಕೊಡಲು ಹಿರಿಯ ಅಧಿಕಾರಿಗಳು ನಿರಾಕರಿಸಿದಾಗ ರಾಜೀನಾಮೆ ಇತ್ತು ಹೊರಬಂದ ಫಡ್ಕೆ ತಾಯಿ ಭಾರತಿಯ ಗೌರವ, ರಕ್ಷಣೆಗಾಗಿ ಪಡೆಕಟ್ಟುವ ಸಂಕಲ್ಪ ಮಾಡಿದ. ಆತ ಕಾಡಿನ ರಾಮೋಶಿಗಳ ಪಡೆಯನ್ನು ಕಟ್ಟಿದ. ಪುಣೆಗೆ ನುಗ್ಗಿ ಬ್ರಿಟಿಷರ ವಿರುದ್ಧ ತೊಡೆತಟ್ಟಿದ.

ಆತನ ಅಬ್ಬರಕ್ಕೆ ಬೆದರಿದ ಬ್ರಿಟಿಷ್ ಅಧಿಕಾರಿ ರಿಚರ್ಡ್ ಟೆಂಪಲ್ ಫಡ್ಕೆಯ ಸುಳಿವು ಕೊಟ್ಟವರಿಗೆ ಬಹುಮಾನವನ್ನು ಘೋಷಿಸಿದ. ಆದರೆ ಜಗ್ಗುವ ಜಾಯಮಾನವಲ್ಲ ಅವನದ್ದು. ಆತ ಮತ್ತಷ್ಟು ಜೋರಾಗಿಯೇ ಚಟುವಟಿಕೆ ಮಾಡಲಾರಂಭಿಸಿದ. ಮೋಸದಿಂದ ಫಡ್ಕೆ




ಲಾಲಾ ಲಜಪತ್ ರಾಯ್

ಯನ್ನು ಬಂಧಿಸಿ ನೇಣಿಗೇರಿಸಲಾಯಿತು. ಮಹಾರಾಷ್ಟ್ರದಲ್ಲಿ ದುಷ್ಟ ಅಧಿಕಾರಿ ರ್ಯಾಂಡ್ ಅಟ್ಟಹಾಸ ನಡೆಸುತ್ತಿದ್ದ ಕಾಲವದು. ಪ್ಲೇಗ್‌ನಿಂದ ತೊಂದರೆಗೊಳಗಾಗಿದ್ದ ಜನರಿಗೆ ಆತ ರಾಕ್ಷಸನಂತೆ ಕಂಡುಬಂದ. ಪ್ಲೇಗ್ ನಿರ್ಮೂಲನೆಗಾಗಿ ಆತ ಹೋರಾಡಬೇಕಿತ್ತು. ಆದರೆ ಈ ಸಂದರ್ಭವನ್ನು ಬಳಸಿಕೊಂಡು ಜನರನ್ನೇ ನಿರ್ಮೂಲನೆ ಮಾಡಲು ಹೊರಟ. ಇದಕ್ಕೆ ಪ್ರತಿಕ್ರಿಯೆ ನೀಡಬೇಕೆಂದೇ ಚಾಪೇಕರ್ ಸಹೋದರರು ಸಿದ್ಧರಾಗಿಬಿಟ್ಟರು. ದುಷ್ಟ ರ್ಯಾಂಡ್‌ನನ್ನು ಕೊಂದು ಬಿಸಾಡಿದ ಚಾಪೇಕರ್ ಸಹೋದರರು ಮುಂದೆ ಮಹಾರಾಷ್ಟ್ರದ ಭಗೂರಿನಲ್ಲಿನ ಸಾವರ್ಕರ್ ಸಹೋದರರಿಗೆ ಪ್ರೇರಣೆಯಾಗಿ ನಿಂತರು.

ಬ್ರಿಟಿಷರನ್ನು ದೇಶಬಿಟ್ಟು ಓಡಿಸಲು ತಾವು ಮಾಡಬೇಕಾಗಿರುವ ಚಟುವಟಿಕೆಗಳ ಕುರಿತಂತೆ ಅವರಿಗೆ ಸ್ಪಷ್ಟ ಪರಿಕಲ್ಪನೆಯಿತ್ತು. ಬಾಲ್ಯದಲ್ಲಿಯೇ ಸಹಮಿತ್ರರನ್ನು ಕೂಡಿ ಕೊಂಡು ಮಿತ್ರಮೇಳವೆಂಬ ಸಂಘಟನೆ ಯನ್ನು ಹುಟ್ಟುಹಾಕಿದ ಸಾವರ್ಕರ್ ಕಾಲೇಜಿಗೆ ಬರುವಾಗ ಅಭಿನವಭಾರತ ಎಂಬ ಸಂಘಟನೆಯ ನೇತಾರರಾಗಿದ್ದರು. ಕ್ರಾಂತಿಕಾರಿಗಳನ್ನು ತರಬೇತುಗೊಳಿಸುವ ಅವರ ಪ್ರಯತ್ನ ಯಶಸ್ಸು ಕಂಡಿತ್ತು. ಸಾವರ್ಕರ್‌ರಲ್ಲದೇ ಇವರಂತಹ ಅನೇಕ ಉತ್ಸಾಹಿ ತರುಣರಿಗೆ ತಿಲಕರೇ ಮಾರ್ಗದರ್ಶನ. ಎಲ್ಲರೂ ಬ್ರಿಟಿಷರೊಂದಿಗೆ ಭಾರತದಲ್ಲಿದ್ದೇ ಕಾದಾಡಲು ಆಲೋಚಿಸುತ್ತಿದ್ದಾಗ ಸಾವರ್ಕರ್ ಲಂಡನ್ನಿಗೇ ಹೋಗಿ ಕಾದಾಡುವ ಸಂಕಲ್ಪ ಮಾಡಿದರು. ವಿದ್ಯಾರ್ಥಿವೇತನದೊಂದಿಗೆ ಲಂಡನ್ ಪ್ರವೇಶಿಸಿದ ಸಾವರ್ಕರ್ ಕ್ರಾಂತಿಕಾರಿ ಮ್ಯಾಟ್ಸಿನಿ ಮತ್ತು ಗ್ಯಾರಿಬಾಲ್ಡಿಯವರ ಕುರಿತಂತೆ ಕೃತಿ ರಚಿಸಿ ಭಾರತೀಯ ತರುಣರಿಗೆ ಪ್ರೇರಣೆ ಕೊಡುವ ಪ್ರಯತ್ನ ಮಾಡಿದರು. ಇಷ್ಟೂ ಸಾಲದೆಂಬಂತೆ ಲಂಡನ್ನಿನ ಲೈಬ್ರರಿಗಳಲ್ಲಿ ಸಾಕಷ್ಟು ಸಮಯ ಕಳೆದು, 1857ರ ಸ್ವಾತಂತ್ರ್ಯಸಂಗ್ರಾಮದ ನೈಜ ಇತಿಹಾಸವನ್ನು ಬಯಲಿಗೆಳೆಯುವ ಪ್ರಯತ್ನ ಮಾಡಿದ್ದೂ ಅವರೇ. ಅಲ್ಲಿಯವರೆಗೂ 'ಸಿಪಾಯಿ ದಂಗೆ' ಎಂದು ಕರೆಯಲ್ಪಡುತ್ತಿದ್ದ ಈ ಹೋರಾಟ ಸಾವರ್ಕರರ ಕೃತಿಯ ನಂತರ 'ಪ್ರಥಮ ಸ್ವಾತಂತ್ರ್ಯಸಂಗ್ರಾಮ' ಎಂದು ಹೆಸರಾಯಿತು. ಅವರ ಉಪಟಳವನ್ನು ತಡೆಯದೇ ಹೇಗಾದರೂ ಅವರನ್ನು ಬಂಧಿಸಬೇಕೆಂದು ಬ್ರಿಟಿಷರು



ಮಂಗಲಪಾಂಡೆ



ಚಂದ್ರಶೇಖರ ಆಜಾದ್



ರಾಮಪ್ರಸಾದ್ ಬಿಸ್ಮಿಲ್



ಅಶ್ಫಾಖುಲ್ಲಾ ಖಾನ್



ರಾಜಗುರು – ಭಗತ್‌ಸಿಂಗ್ – ಸುಖದೇವರು

ಯೋಜನೆ ಹಾಕಿ ಕುಳಿತರು. 1905ರಲ್ಲಿ ಅವರು ಭಾರತದಲ್ಲಿ ಮಾಡಿದ ಒಂದು ಭಾಷಣ ಪ್ರಭುತ್ವ ವಿರೋಧಿಯಾಗಿತ್ತು ಎಂಬ ಆರೋಪ ಹೊರಿಸಲಾಯಿತು. ಅಂದರೆ ಒಂದು ಭಾಷಣದ ನಾಲ್ಕು ಸಾಲುಗಳಿಗಾಗಿ ಆರು ವರ್ಷಗಳ ನಂತರ ಸಾವರ್ಕರ್‌ರನ್ನು ಬಂಧಿಸಲಾಯಿತು. ನ್ಯಾಯಾಲಯ ಸಾವರ್ಕರ್‌ರಿಗೆ ಅಂಡಮಾನಿನ ಕಾಲಾಪಾನಿಯಲ್ಲಿ ಐವತ್ತು ವರ್ಷಗಳ ಎರಡು ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಅಂದಿನ ದಿನಗಳಲ್ಲಿ ಅಂಡಮಾನ್ ಎಂದರೆ ಭಯದ ವಾತಾವರಣವನ್ನು ಹುಟ್ಟುಹಾಕುತ್ತಿದ್ದ ಕ್ರೂರ ಜೈಲುಗಳಲ್ಲೊಂದು. ಸಾವರ್ಕರ್‌ರನ್ನು ಹಿಂಡಿ ಹಿಪ್ಪೆಯಾಗಿಸುವ ಪ್ರಯತ್ನವಾಗಿಯೇ ಈ ಶಿಕ್ಷೆ ನೀಡಲಾಗಿತ್ತು. ಸೋತು ಬಸವಳಿಯುವುದಿರಲಿ ಸಾವರ್ಕರ್ ಅಂಡಮಾನಿನಲ್ಲೂ ತಮ್ಮ ಕ್ರಾಂತಿಯ ಛಾಪು ಮೂಡಿಸಿದರು. ಅವರ ಈ ಎಲ್ಲಾ ಹೋರಾಟಗಳನ್ನು ಜನರು ಗಮನಿಸದೇ ಹೋಗಲಿಲ್ಲ. ಅವರ ಬಿಡುಗಡೆಗೆ ಹಿಂದೆಂದಿಗಿಂತಲೂ ಹೆಚ್ಚಿನ ಒತ್ತಾಯ ಕೇಳಿಬಂತು. ಕೊನೆಗೂ ಹನ್ನೊಂದು ವರ್ಷಗಳ ಶಿಕ್ಷೆಯ ನಂತರ ಬ್ರಿಟಿಷ್ ಸರ್ಕಾರ ಅನೇಕ ಚೌಕಟ್ಟುಗಳನ್ನು ಹಾಕಿ ಅವರನ್ನು ಬಿಡುಗಡೆ ಮಾಡಲೇ ಬೇಕಾಗಿ ಬಂದಿತು. ಮರಳಿ ಬಂದ ಸಾವರ್ಕರ್ ಹಿಂದೂಧರ್ಮದಲ್ಲಿದ್ದ ದೋಷಗಳ ನಿವಾರಣೆಗೆ ತಮ್ಮನ್ನು ತಾವು ತೊಡಗಿಸಿಕೊಂಡರು. ಶುದ್ಧಿ ಚಳವಳಿಯನ್ನು ಆರಂಭಿಸಿದರು. ಮಂದಿರಗಳಲ್ಲಿ ದಲಿತರ ಪ್ರವೇಶಕ್ಕೆ ನಿಷೇಧ ಇರುವುದನ್ನು ಖಂಡಿಸಿ ಪಂಡಿತರೊಡನೆ ವಾದ ಮಾಡುತ್ತಾ ಮಹಾರ್ ಜಾತಿಯವರಿಗೂ ದೇವ ಸ್ಥಾನ ಪ್ರವೇಶ ಮಾಡಿಸಲು ತಾವೇ ಮುಂದೆ ನಿಂತರು. ಸ್ವಾತಂತ್ರ್ಯದ ಕದನದಲ್ಲಿ ಭಾರತೀಯರಿಂದ 'ವೀರ' ಎಂಬ ಗೌರವ ಪಡೆದವರು ಅವ ರೊಬ್ಬರೇ ಎಂಬುದನ್ನು ಮರೆಯು ವಂತಿಲ್ಲ.

ಒಂದೆಡೆ ಸಾವರ್ಕರ್ ವಿದೇಶದಲ್ಲಿ ಹೋರಾಟ ನಡೆಸುತ್ತಿದ್ದರೆ ಮತ್ತೊಂದೆಡೆ ಬಂಗಾಳದಲ್ಲಿ ದೊಡ್ಡ ಕ್ರಾಂತಿಕಾರ್ಯಕ್ಕೆ ಮುನ್ನುಡಿ ಬರೆಯಲಾಗುತ್ತಿತ್ತು.



ಬಿಪಿನ್ ಚಂದ್ರ ಪಾಲ್

ಸಮರ್ಥವಾದ ಯೋಜನೆ, ತಕ್ಕ ಪರಿಶ್ರಮ ಇದ್ದರೆ, ಯಶಸ್ಸು ಖಚಿತ

ಬಂಗಾಳದ ವಿಭಜನೆಯನ್ನು ಮುಂದಿಟ್ಟುಕೊಂಡು ಅಕ್ಕ ನಿವೇದಿತಾ ತರುಣರನ್ನು ಕ್ರಾಂತಿಕಾರ್ಯಕ್ಕೆ ಪ್ರೇರೇಪಿಸುತ್ತಿದ್ದರು. ಪಂಜಾಬಿನಲ್ಲಿ ಲಾಲಾ ಲಜಪತ್‌ರಾಯರು, ಬಂಗಾಳದಲ್ಲಿ ಬಿಪಿನ್ ಚಂದ್ರಪಾಲರು, ಮಹಾರಾಷ್ಟ್ರದಲ್ಲಿ ಬಾಲಗಂಗಾಧರ ತಿಲಕರು ಸೇರಿಕೊಂಡು ಭಾರತದಲ್ಲಿ ಬ್ರಿಟಿಷರ ಕುರಿತಂತೆ ಸದಾ ಅಸಂತೋಷವಿರುವಂತೆ ನೋಡಿಕೊಂಡರು. ಒಮ್ಮೆ ಹೊತ್ತಿದ ಕ್ರಾಂತಿಯ ಜ್ವಾಲೆ ಸದಾ ಉರಿಯುವಂತೆ ನೋಡಿಕೊಳ್ಳುವಲ್ಲಿ ಇವರೆಲ್ಲರ ಪಾತ್ರ ಬಲು ಮಹತ್ತ್ವದ್ದು. ಇದರ ನಡುವೆಯೇ ಕ್ರಾಂತಿಕಾರ್ಯಕ್ಕೊಂದು ರಭಸ ದೊರೆತಿತ್ತು. ಕೇವಲ ಬೇಡಿಕೆಗಳಿಂದ ಬ್ರಿಟಿಷರ ಮನ ಕರಗಲಾರದು, ಬಾಂಬುಗಳ ಬಳಕೆಯಾಗಲೇಬೇಕು ಎಂದು ಅನೇಕರು ನಿಶ್ಚಯಿಸಿದರು. ಇದರ ಆಧಾರದ ಮೇಲೆ ಹುಟ್ಟಿಕೊಂಡಿದ್ದೇ ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿ. ರಾಮಪ್ರಸಾದ್ ಬಿಸ್ಮಿಲ್, ರಾಜೇಂದ್ರ ಲಾಹಿರಿ, ರೋಶನ್ ಸಿಂಗ್, ಚಂದ್ರಶೇಖರ್ ಆಜಾದ್, ಅಶ್ಫಾಖುಲ್ಲಾಖಾನ್ ಮೊದಲಾದವರು ಕಟ್ಟಿದ ಬಲಿಷ್ಠ ಸಂಸ್ಥೆ ಅದು.

ಈ ಕ್ರಾಂತಿಕಾರಿಗಳು ಕಾಕೋರಿಯ ರೈಲಿನ ಮೂಲಕ ಹಾದುಹೋಗುತ್ತಿದ್ದ ಖಜಾನೆ ಲೂಟಿಗೆಂದು ಸಂಕಲ್ಪಿಸಿದರು. ಅದರಿಂದ ದೊರೆತ ಹಣದಿಂದ ಕ್ರಾಂತಿಕಾರ್ಯಕ್ಕೆ ಶಸ್ತ್ರಾಸ್ತ್ರವನ್ನು ಸಂಗ್ರಹಿಸಿಕೊಳ್ಳುವ ಉದ್ದೇಶ ಅವರದಾಗಿತ್ತು. ಕಷ್ಟಪಟ್ಟು ಸಂಗ್ರಹಿತ ತೆರಿಗೆಯನ್ನೇನೋ ಲೂಟಿ ಮಾಡಲಾಯಿತು. ಆದರೆ ಇಷ್ಟು ದಿನ ಸುಳಿವೇ ಸಿಗದಂತೆ ಕೆಲಸ ಮಾಡುತ್ತಿದ್ದ ಕ್ರಾಂತಿಕಾರಿಗಳು ಸುತ್ತಮುತ್ತಲಿನ ಪ್ರದೇಶದಲ್ಲಿ ಅಡಗಿದ್ದಾರೆಯೆಂಬುದು ಸರ್ಕಾರಕ್ಕೆ ಸ್ಪಷ್ಟವಾಗಿಹೋಯಿತು. ಇದರೊಟ್ಟಿಗೆ ಶುರುವಾದ ಬಂಧನಗಳ ಪರ್ವದಲ್ಲಿ ಅನೇಕ ಕ್ರಾಂತಿಕಾರಿಗಳು ಸಿಕ್ಕಿಬಿದ್ದರು. ಅಶ್ಫಾಖ್, ಬಿಸ್ಮಿಲ್ ಸೇರಿದಂತೆ ನಾಲ್ವರಿಗೆ ನೇಣು ಶಿಕ್ಷೆಯಾಯಿತು. ಎಂದಿನಂತೆ ಆಜಾದ್ ತಪ್ಪಿಸಿಕೊಂಡರು. ಮುಂದೆ ಇದೇ ಆಜಾದ್ ಮತ್ತು ಭಗತ್‌ಸಿಂಗರು ಸೇರಿ ಹಿಂದೂಸ್ತಾನ್ ಸೋಷಿಯಲಿಸ್ಟಿಕ್ ರಿಪಬ್ಲಿಕನ್ ಆರ್ಮಿಯನ್ನು ನಿರ್ಮಿಸಿ ಕ್ರಾಂತಿ ಜ್ಯೋತಿ ಆರದಂತೆ ನೋಡಿಕೊಂಡರು.

ಚಂದ್ರಶೇಖರ್ ಆಜಾದ್ ಮಧ್ಯ ಪ್ರದೇಶದ ಭಾವ್ರಾ ಎಂಬ ಹಳ್ಳಿಯಲ್ಲಿ ಹುಟ್ಟಿದ ಸಾಮಾನ್ಯ ವ್ಯಕ್ತಿ. ತನ್ನ ರಾಷ್ಟ್ರಭಕ್ತಿಯ ಕಾರಣದಿಂದಲೇ ಇಂದು ಜನಮಾನಸದಲ್ಲಿ ಅಜರಾಮರವಾಗಿ ಉಳಿದವ. ಕಾಕೋರಿ ಕಾಂಡವಿರಬಹುದು, ಸ್ಯಾಂಡರ್ಸ್‌ನ ಹತ್ಯೆಯೇ ಇರಬಹುದು ಆಜಾದನ ಪಾತ್ರ ಕಡಿಮೆಯದ್ದಲ್ಲ. ಆತ ಚುರುಕುಮತಿಯ ಸಂಘಟಕ. ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿ ನಾಪತ್ತೆಯಾಗಬಲ್ಲ ಚಾಕಚಕ್ಯತೆ ಉಳ್ಳವ. ಹೀಗಾಗಿಯೇ ಸುದೀರ್ಘ ಕಾಲ ಪೊಲೀಸರ ಕೈಗೆ ಸಿಗದೇ ತಪ್ಪಿಸಿಕೊಂಡ. ಹಿಂದೂಸ್ತಾನ್ ಸೋಷಿಯಲಿಸ್ಟಿಕ್ ರಿಪಬ್ಲಿಕನ್ ಆರ್ಮಿಯ ಬಹುತೇಕ ಕ್ರಾಂತಿ ಕಾರಿಗಳು ಸಿಕ್ಕಿಬಿದ್ದಿದ್ದರು. ಜೊತೆಗೇ ಇದ್ದ ವೀರಭದ್ರ ತಿವಾರಿ ಮಾಡಿದ ಮೋಸದಿಂದ ಪ್ರಯಾಗದ ಆಲ್ಫ್ರೆಡ್ ಪಾರ್ಕ್‌ನಲ್ಲಿದ್ದ ಆಜಾದನ ಸುಳಿವು ಬ್ರಿಟಿಷರಿಗೆ ಸಿಕ್ಕಿ ಬಿಟ್ಟಿತ್ತು. ಈತನನ್ನು ಹಿಡಿಯಲೋಸುಗ ಅವರು ಹಿಂದೆ ಮಾಡಿದ ಪ್ರಯತ್ನ ಒಂದೆರಡಲ್ಲ. ಈಗ ಅನಾಯಾಸವಾಗಿ ಆಜಾದ್ ಸಿಕ್ಕಿಬೀಳುತ್ತಿದ್ದಾನೆಂದರೆ ಬಿಡುವು ದುಂಟೇನು? ಒಂದು ಹುಲಿಯನ್ನು ಐವತ್ತಕ್ಕೂ ಹೆಚ್ಚು ಪೊಲೀಸರು ಸುತ್ತುವರೆದರು. ಆಜಾದ್ ಅಷ್ಟೂ ಜನರೊಡನೆ ಬಡಿದಾಡುತ್ತ ಒಂದಿಬ್ಬರನ್ನು ಯಮ ಪುರಿಗೂ ಕಳಿಸಿದ. ಕೊನೆಗೆ ತನ್ನ ಬಂದೂಕಿನಲ್ಲಿ ಕೊನೆಯ ಗುಂಡು ಉಳಿದಿದೆ ಎಂದು ಅರಿವಾದೊಡನೆ ಮಾತೃಭೂಮಿಗೆ ನಮಿಸುತ್ತಾ ತನ್ನ ಹಣೆಗೇ ಗುರಿಯಿಟ್ಟು ಕೊಂಡು ಪ್ರಾಣತ್ಯಾಗ ಮಾಡಿದ. ವೀರನೊಬ್ಬನ ಅಂತ್ಯದಿಂದ ತಾಯಿ ಭಾರತಿ ಒಮ್ಮೆ ಕಂಪಿಸಿದಳು.

ಆಜಾದ್ ಈ ರೀತಿ ಪ್ರಾಣಾರ್ಪಣೆ ಮಾಡುವ ವೇಳೆಗೆ ಭಗತ್‌ಸಿಂಗ್, ರಾಜಗುರು, ಸುಖದೇವರು ನೇಣುಗಂಬಕ್ಕೆ ಹತ್ತಿರವಿದ್ದರು. ಭಗತ್ ಕಾಲೇಜಿನಲ್ಲಿರುವಾಗಲೇ ಅನೇಕ ಕ್ರಾಂತಿಕಾರಿಗಳ ಬದುಕನ್ನು ಓದಿ ಪ್ರಭಾವಿತನಾಗಿದ್ದ. ತನ್ನ ಗುರುಗಳಾದ ವಿದ್ಯಾಲಂಕಾರರು ರಾಮ್‌ಪ್ರಸಾದ್ ಬಿಸ್ಮಿಲ್‌ನ ಪರಿಚಯ ಮಾಡಿಸಿದ ನಂತರ ಆತ ಹಿಂದೂಸ್ತಾನ್ ರಿಪಬ್ಲಿಕನ್ ಆರ್ಮಿಗೆ ಸೇರಿಕೊಂಡ. ಚಂದ್ರಶೇಖರ್ ಆಜಾದ್‌ರ ನೇತೃತ್ವದಲ್ಲಿ ಕ್ರಾಂತಿಕಾರ್ಯದ ವಿಸ್ತಾರಕ್ಕೆ ಹೆಗಲುಕೊಟ್ಟ. ಕ್ರಾಂತಿಕಾರಿಗಳಿಗೆ ತಾವು

ಮಾಡುತ್ತಿರುವ ಹೋರಾಟದ ಅರಿವನ್ನು ಸಮರ್ಥವಾಗಿ ಜನತೆಗೆ ಮುಟ್ಟಿಸುವ ಜರೂರತ್ತಿತ್ತು. ಹೀಗಾಗಿಯೇ ಕಿವುಡ ಬ್ರಿಟಿಷ್ ಸರ್ಕಾರಕ್ಕೆ ಕೇಳಿಸುವಂತೆ ಮಾಡಲು ಅಸೆಂಬ್ಲಿಯಲ್ಲಿ ಬಾಂಬ್ ಸ್ಫೋಟಿಸಬೇಕೆಂದು ಕ್ರಾಂತಿಸೇನೆಯವರು ನಿಶ್ಚಯಿಸಿದರು. ಈ ಬಾಂಬ್ ಸ್ಫೋಟದ ಮೂಲಕ ಯಾರನ್ನೂ ಕೊಲ್ಲದೇ, ಬಂಧನಕ್ಕೊಳಗಾಗಿ ನ್ಯಾಯಾಲಯದಲ್ಲಿ ತಮ್ಮ ಉದ್ದೇಶವನ್ನು ಜನರಿಗೆ ತಿಳಿಯುವಂತೆ ಉಚ್ಚಕಂಠದಲ್ಲಿ ಹೇಳಬೇಕೆಂದು ಎಲ್ಲರೂ ನಿಶ್ಚಯಿಸಿದರು. ಸಹಜವಾಗಿಯೇ ಈ ಕಾರ್ಯಕ್ಕೆ ಆಯ್ಕೆಯಾದದ್ದು ಭಗತ್‌ಸಿಂಗ್. ಅವನೊಂದಿಗೆ ಭಟುಕೇಶ್ವರದತ್ತ. ಅಸೆಂಬ್ಲಿಯಲ್ಲಿ ಬಾಂಬ್‌ಸ್ಫೋಟವಾಗುವಂತೆ ಮಾಡಿ ಬಂಧನಕ್ಕೂ ಒಳಗಾದ ಭಗತ್ ತನ್ನ ವಿಶೇಷ ವ್ಯಕ್ತಿತ್ವದಿಂದಲೇ ಜನಮಾನಸ ಗೆದ್ದ. ದುರದೃಷ್ಟವಶಾತ್ ಬಂಧಿತನೊಬ್ಬ ಸ್ಯಾಂಡರ್ಸ್ ಹತ್ಯೆಯಲ್ಲೂ ತಮ್ಮ ಪಾತ್ರವಿದೆ ಎಂದು ಹೇಳಿದಮೇಲೆ ಇವರೆಲ್ಲರ ವಿರುದ್ಧವೂ ಮೊಕದ್ದಮೆ ನಡೆಯಿತು. ಭಗತ್, ರಾಜಗುರು, ಸುಖದೇವರಿಗೆ ನೇಣುಶಿಕ್ಷೆಯೂ ಆಯಿತು.

1857ರ ಸಂಗ್ರಾಮದ ನಂತರ ಆಂಗ್ಲರು ಭಯಭೀತರಾಗಿಯೇ ಇದ್ದರು. ತಮ್ಮ ಮೂಗಿನಡಿಯಲ್ಲೇ ನಡೆದ ಆ ಹೋರಾಟದ ನಂತರ ಭಾರತೀಯರು ಜಾಗೃತರಾಗಿ ಯಾವಾಗ ಬೇಕಿದ್ದರೂ ತಮ್ಮನ್ನು ಹೊಡೆದೋಡಿಸಬಹುದೆಂಬ ಭೀತಿ ಅವರನ್ನು ಕಾಡುತ್ತಲೇ ಇತ್ತು. ಹೀಗಾಗಿಯೇ ಈ ಒಟ್ಟಾರೆ ಆಕ್ರೋಶವನ್ನು ತಣ್ಣಗಾಗಿಸಲು ಅವರು ಒಡೆದು ಆಳುವ ನೀತಿಯನ್ನು ಉಪಯೋಗಿಸಲೂ ಹಿಂಜರಿಯಲಿಲ್ಲ. ಜಾತಿ-ಜಾತಿಗಳ ಹೆಸರಿನಲ್ಲಿ ಹಿಂದೂ ಸಮಾಜವನ್ನು ಒಡೆದರು. ಮುಸಲ್ಮಾನರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟಿದರು. ಭಾರತವನ್ನು ಬಡ, ಕೃಪಣ, ದರಿದ್ರ ನಾಡೆಂದು ಜಗತ್ತಿನ ಮುಂದೆ ಬಿಂಬಿಸುವ ಪ್ರಯತ್ನ ಮಾಡಿದರು. ಇಷ್ಟಾದರೂ ಅವರ ವಿರುದ್ಧದ ಆಕ್ರೋಶ ತಣ್ಣಗಾಗುವುದಿರಲಿ ಅದು ದಿನಗಳೆದಂತೆ ಹೆಚ್ಚುತ್ತಲೇ ಸಾಗಿತು. ಬಹುಶಃ ಇಡೀ ರಾಷ್ಟ್ರದಲ್ಲಿ ಒಂದು ದಿನವೂ ಬ್ರಿಟಿಷರು ನೆಮ್ಮದಿಯಿಂದ ಕಾಲಕಳೆದ ಸಂದರ್ಭ ಇರಲಿಕ್ಕಿಲ್ಲ. ಎಲ್ಲಾದರೊಂದು ಕಡೆ ನಿರಂತರವಾಗಿ ಬ್ರಿಟಿಷ್ ವಿರೋಧೀ ಕದನಗಳು ನಡೆದೇ ಇರುತ್ತಿದ್ದವು!



ಬ್ರಿಟಿಷರ ಅಹಂಕಾರಕ್ಕೆ ಕೊನೆಯ ಕಪಾಳಮೋಕ್ಷ ಕೊಟ್ಟವರು ನೇತಾಜಿ ಸುಭಾಷ್‌ಚಂದ್ರ ಬೋಸರೇ. ಒರಿಸ್ಸಾದ ಕಟಕ್‌ನಲ್ಲಿ ಹುಟ್ಟಿದ ಸುಭಾಷ್‌ಚಂದ್ರ ಬೋಸರು ಅಧ್ಯಯನ ಮಾಡುವಾಗಲೇ ಪ್ರಖರ ರಾಷ್ಟ್ರಭಕ್ತರು. ಸುಭಾಷರ ಮನಸ್ಸು ಕ್ರಾಂತಿಕಾರ್ಯದತ್ತ ತಿರುಗುತ್ತಿರುವುದನ್ನು ಗಮನಿಸಿದ ಅವರ ತಂದೆ ಐಸಿಎಸ್ ಪರೀಕ್ಷೆ ಬರೆಯುವ ಉಪಾಯವನ್ನು ಮುಂದಿಟ್ಟರು. ಭಾರತಕ್ಕೆ ಮರಳಿದೊಡನೆ ತಾವು ಬ್ರಿಟಿಷ್ ನೌಕರಿ ಮಾಡುವುದಿಲ್ಲವೆಂಬ ಮಾತನ್ನು ಪುನರುಚ್ಚರಿಸಿ ನೇರ ಕಾಂಗ್ರೆಸ್ಸಿನ ಸಂಪರ್ಕಕ್ಕೆ ಬಂದರು. ಮಹಾತ್ಮಾ ಗಾಂಧೀಜಿಯವರ ಮಾತು ಅವರಿಗೆ ಸಾಕೆನಿಸಲಿಲ್ಲ. ಸ್ವಾತಂತ್ರ್ಯದ ವಿಚಾರವಾಗಿ ಮಹಾತ್ಮಾ ಗಾಂಧೀಜಿಯವರ ಬಳಿ ಸ್ಪಷ್ಟ ನೀಲನಕಾಶೆ ಇಲ್ಲದಿರುವುದನ್ನು ಅರಿತ ಸುಭಾಷರು ಚಿತ್ತರಂಜನ್‌ದಾಸರ ಬಳಿ ನಡೆದರು. ಅವರ ವಕ್ತೃತ್ವ, ಕೃತಿಶೀಲತೆಗಳಿಂದ ಪ್ರಭಾವಿತರೂ ಆದರು. ಕೆಲವೇ ದಿನಗಳಲ್ಲಿ ಸುಭಾಷರು ಕಾಂಗ್ರೆಸ್‌ಗೆ ರಾಜೀನಾಮೆಯಿತ್ತು, ತಮ್ಮದೇ ಮಾದರಿಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡುವ ಸಂಕಲ್ಪ ಮಾಡಿದರು. ಕೆಲವೇ ದಿನಗಳಲ್ಲಿ ಬಂಧನಕ್ಕೊಳಗಾಗಿ ಆರೋಗ್ಯ ಹದಗೆಟ್ಟು ಗೃಹಬಂಧನದೊಳಗಿರಬೇಕಾಗಿ ಬಂದಿತು. ಸೂಕ್ತ ಸಮಯಕ್ಕೆ ಕಾಯುತ್ತಿದ್ದ ಸುಭಾಷರು ಒಂದು ದಿನ ಕಾವಲಿನ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಮನೆಯಿಂದ ಪರಾರಿಯಾಗಿ ಬಿಟ್ಟರು. ಜಪಾನಿಗೆ ಬಂದ ಸುಭಾಷರು ರಾಸ್‌ಬಿಹಾರಿ ಬೋಸ್ ಕಟ್ಟಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯನ್ನು ತಮ್ಮ ತೆಕ್ಕೆಗೆ ಹಾಕಿಕೊಂಡು ಬ್ರಿಟಿಷರ ಪರವಾಗಿ ಯುದ್ಧ ಮಾಡಿದ್ದ ಭಾರತೀಯ ಖೈದಿಗಳನ್ನು

*Man needs difficulties in life because they are necessary to enjoy the success - Abdul Kalam*

ಸೇನೆಗೆ ಸೇರಿಸಿಕೊಳ್ಳುವಲ್ಲಿ ಅಪಾರ ಪ್ರೇರಣೆ ನೀಡಿದರು. ಸುಭಾಷರ ಪ್ರಖರ ವ್ಯಕ್ತಿತ್ವಕ್ಕೆ ಬೆರಗಾಗಿ ತಮ್ಮನ್ನು ತಾವು ರಾಷ್ಟ್ರಕಾರ್ಯಕ್ಕೆ ಸಮರ್ಪಿಸಿಕೊಂಡು ಸೈನಿಕರಾದವರು ಹಲವರು. 1943ರ ಅಕ್ಟೋಬರ್ ತಿಂಗಳಲ್ಲಿ ಆಜಾದ್ ಹಿಂದ್ ಸರ್ಕಾರವನ್ನೇ ರಚಿಸಿದರು. ಮುಂದೆ ಇಂಡಿಯನ್ ನ್ಯಾಷನಲ್ ಆರ್ಮಿ ಭಾರತ–ಬರ್ಮಾ ಗಡಿಯನ್ನು ಮುಟ್ಟಿ ರಂಗೂನಿನ ಮುತ್ತಿಗೆಗೆ ಸಿದ್ಧವಾಯಿತು. ಮಣಿಪುರ ಸಂಸ್ಥಾನ ಪ್ರವೇಶಿಸಿ ಇಂಫಾಲ್‌ನಲ್ಲಿ ಭಾರತದ ಧ್ವಜವನ್ನು ಹಾರಾಡಿಸಿದ ಕೀರ್ತಿ ಅದರದ್ದು. ದಿಲ್ಲಿ ಚಲೋ ಎಂಬ ಘೋಷಣೆಯೊಂದಿಗೆ ಹೊರಟ ಸೇನೆ ಎಷ್ಟೇ ಪರಾಕ್ರಮವನ್ನು ಮೆರೆದರೂ ಅದೃಷ್ಟ ಕೈಕೊಟ್ಟಿತು. ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಅಮೇರಿಕಾ ಬಾಂಬ್ ಹಾಕುವುದರೊಂದಿಗೆ ಜಪಾನಿನ ಹೋರಾಟ ಅಂತ್ಯಗೊಂಡಿತು. ಸಹಜವಾಗಿಯೇ ನಮ್ಮ ಸೇನೆಗೆ ಸಿಗಬೇಕಿದ್ದ ಸಹಾಯಗಳೂ ಇಲ್ಲವಾದವು. ಮುಸಲಧಾರೆಯಾಗಿ ಸುರಿಯುತ್ತಿದ್ದ ಮಳೆ ಸೈನ್ಯವನ್ನು ಕಂಗೆಡಿಸಿತ್ತು. ಇಷ್ಟಾದರೂ ಹೋರಾಟ ಮುಂದುವರೆದಿತ್ತು. ಕೊನೆಗೂ ಬ್ರಿಟಿಷರಿಗೆ ಇಂಡಿಯನ್ ನ್ಯಾಷನಲ್ ಆರ್ಮಿ ಕೈವಶವಾಗುವ ಹೊತ್ತಿನಲ್ಲಿ ತೈಪೆಯ ವಿಮಾನ ಅಪಘಾತದಲ್ಲಿ ಸುಭಾಷರು ತೀರಿಕೊಂಡರು.

ಸ್ವಾತಂತ್ರ್ಯ ಬಂದು ಎಪ್ಪತ್ತೈದು ವರ್ಷಗಳು ತುಂಬುತ್ತಿವೆ. ಈ ಹೊತ್ತಿನಲ್ಲಿ ನಾವು ಹಿಂದೆಂದಿಗಿಂತಲೂ ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಬೇಕು. ನಮಗರಿವಿಲ್ಲದಂತೆಯೇ ರಕ್ತದ ಕಣಕಣದೊಳಗೆ ದಾಸ್ಯ ಬುದ್ಧಿ ಸೇರಿಕೊಂಡುಬಿಟ್ಟಿದೆ. ಒಂದೊಮ್ಮೆ ಮೊಘಲರ ದಾಸರಾಗಿದ್ದವರು, ಬ್ರಿಟಿಷರ ದಾಸ್ಯಕ್ಕೆ ಸಿದ್ಧರಾದರು. ಮತ್ತೀಗ ಪಶ್ಚಿಮದ ದಾಸತ್ವಕ್ಕೆ ನಾವು ತಯಾರಾಗಿ ಬಿಟ್ಟಿದ್ದೇವೆ. ಭಾರತ ಮತ್ತೆ ಸೆಟೆದು ನಿಲ್ಲಬೇಕೆಂದರೆ ದೇಶಭಕ್ತಿಯ ಮಧುಪಾನ ಮಾಡಿಸಬೇಕಿದೆ. ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಬಲ್ಲ ಒಂದು ಪೀಳಿಗೆಯಿದ್ದರೂ ಸಾಕು ನವಭಾರತದ ನಿರ್ಮಾಣ ನಿಸ್ಸಂಶಯ.



# TOWARDS TEACHING AUTHENTIC HISTORY OF INDIA

- **Dr. Rajaram Hegde**
*Historian,*
*Honnebaga, Sirsi,*
*Uttara Kannada District*



There are serious debates going on for last few decades about teaching authentic history of India to the Indian children in schools. School textbooks have become topics of controversy and contestation for camps led by different political ideologies and views. Especially, it is interesting to note here that such controversies mainly arise in connection with the history lessons. No other subject either in social sciences or natural sciences seems to attract such disputes. Of course, this cannot be a co-incidence. There are reasons and logical arguments to support such disputes. Disputes arise about the historical truths or facts and every contesting camp tries to support its claims with one or the other historical evidence. Such a problem does not seem to exist in the case of other subjects of school education. Therefore, it is evident that this is a problem specific to the subject called history. Why Indian history should generate such an unending debate? Answer can be searched in two broad areas: 1) The problems generated by the nature of the discipline called history in general. 2) The problems generated by the way Indian history writing is put into practice.

1. So far as the first point is concerned the root of the term history is derived from the ancient Greek word 'historia' means inquiry. In other words it is basically a search for truth. But, we often forget that emphasis is on the search, not the truth. As a result we believe in the common-sense that history is a true account of one's past. When we talk of true events, we believe that it is absolute truth which can never be falsified. There is a general impression among the educated that an authentic history should only consist of such truths. The way history is taught and learnt in our school and college educations encourages the children to believe that what-ever they learn in history is exactly what happened in the past. But such notions are not tenable within historical research. Though history writing is basically an inquiry about the authentic past, it never claims that it can guarantee the absolute truth about the past. Especially the notion of historical truth has undergone fundamental changes in last century. Historians have realized that historical truth is a proposal which can be falsified; therefore there is no such thing like final truth in



*The known is :but only a figment of tne unknown*

history. Historian adopts scientific methodologies for his inquiry and arrives at a coherent conclusion. Thus as the word and the practice in the West exemplify, it remained always a historian's craft or quest.

If such is the case, what would be the nature of historical truth? Can it guarantee an authentic picture of past? Historian, who is supposed to reconstruct the past is neither the direct witness to the past events unless he is writing about the events of his own experience, nor is he free from personal biases. Historians base on the sources of evidence. They subject the evidence to scrutiny, cull out factual information and conduct logical reasoning to arrive at an authentic conclusion. Where there is no evidence there is no history. Thus what we call authentic history is neither a complete or absolute past nor is eternal truth. It is founded on a historian's view and his methodology. Notwithstanding this limitation, generally accepted scientific conclusions are possible in history writing and such conclusions stand for the authentic past. However, such an authentic past is always open for any future scrutiny; possibility of its falsification is always open. It is common in historical research that new sources come to light, new evidences or counter evidences crop up, better interpretations and explanations are presented, old conclusions contested, falsified and new ones proposed. Any person who swears in the name of authentic history ought to know this peculiar nature of history. History is not a self evident truth. Historical inquiries are always debatable. The debates in history are a sign of a healthy development of this discipline and blind beliefs on historical truths are death nails to this discipline.

Therefore those who swear on authentic history should know that history is a scientific quest wherein it is a rule that our accepted conclusions are subjected to be challenged, modified or falsified. But, we hardly see such awareness about historical truth. On the contrary, what we witness is that the people who demand for authentic history of India resist to accept the truths inconvenient to their political and ideological programme. They think history is a tool for their propaganda. This attitude has proved to be the greatest hindrance for search of truth in historical research. Bias and Interests of individuals and groups have been projected in the name of historical conclusions and the interested groups try to include such conclusions in school texts. Due to such learning by the leftist and progressive intellectuals in the recent past scientific quest in the Indian history writing had a great set back. As a result the children are imbued with prejudice about our nation, certain castes, religious groups and issues. Such wrongs cannot be rectified by writing an equally biased history from the opposite camp. What we witness today is that those who contest such a history, especially from the point of view of Hindutva, try to push equally dubious facts and interpretations without discriminating between traditional stories and the historical account. If we really want to write authentic history and want to stand with our claim, we should understand the true nature of the discipline and difference between stories and history. Wrongs can be set right only if we create awareness among educated people about the true nature and limitations of the Historical knowledge

itself.

2. The second problem is in a way specific to writing Indian history. Indian history writing as it exists at present is a colonial contribution. When the British established the colonial government at Calcutta for the first time, they felt the need to know the authentic Indian past for their administrative purposes. Therefore they initiated history writing project. European scholars involved in this intellectual task were called Orientalists i.e. specialists on the study of oriental culture. They viewed and tried to make sense of the Indian past through their own cultural lenses. Indian culture looked inferior, immature and immoral to their yardsticks. Europeans on the eve of writing colonial history had believed that they are the most progressive and matured civilization in the world. Cultures like India represented the childhood of human civilization. Though this attitude was a subjective experience and totally unfounded by any standards of scientific investigation, fact remains that such an impression was the fabric that was put into the creation of Indian history by these scholars. Thus, the scholars who began writing Indian history laid its foundations on Western biases about Indian culture and failed to adhere to the standards of the discipline.

Indian history as a colonial legacy creates a negative attitude about Indian society and culture in general. Any student who reads Indian history is informed that Hinduism is a degenerated religion, full of immoral, inhuman, unjust and superstitious social and cultural practices of caste and gender inequality. It informs that these practices are supported by ancient texts like Veda, Bhagavadgita and Dharmashastras therefore our tradition upholds immoral and inhuman doctrines. Brahmanical priests of ancient period have invented such immoral practices for their selfish ends and interpolated such doctrines in our scriptures. The higher castes have invented and guarded our social system to exploit dalits and women. Whatever religious practices existing in India are all superstitions and tools of exploitation of lower castes and women, therefore we have to eradicate these practices in order to come out of this exploitative structure. It is a fact that today such a history has become the commonsense of educated Indians about their own culture and society.

Let us not deny the fact that exploitation, discrimination, caste and gender atrocity exist in Indian society. But this is a general truth about any society under the sun, in the past, present and may be in future also. And there are efforts and struggles in India as well as in all societies to come out of such unjust, and exploitative practices. However, the history of no other country in the world teaches its children that its culture and society is founded on immoral and inhuman principles and one should get rid of his cultural roots. Why is it that educated Indians think this kind of history truly represents their past? It is because they have blindly accepted the Western interpretations without proper scrutiny. Of course, during the nationalist era the negative comments about the Indian culture were questioned and strengths and contributions of the Indian culture were highlighted, but the basic lacunas of Indian cultural history are accepted as fact and they are continued to be taught in schools till today. During the past 75 years of inde-

pendence, there was increasingly a great resistance to teach the nationalist views of history which provide positive picture of Indian past and efforts were made to enforce negative images of India time and again in the name of authentic history.

Today we realize that the image of India provided by its colonial history is founded neither on empirical evidence nor on logical reasoning. It does not match the experience of common Indian or the information provided by the historical sources. It does not look authentic by any standards of the scientific description. Not only that, such a history has generated irresoluble problems in Indian life and damaged the very fabric of coexistence of diverse cultures. It has damaged the national integrity and made way for the manipulations of groups of vested interests. Therefore, it is high time that we realize these damages and rewrite history on the basis of scientific methodology and teach it to our children. The challenge today to those who aspire for authentic history of India is not only to remove such negative and harmful images of India but more than that to replace it with coherently argued facts about India's past not with stories or speculations. Conclusions should be based on historical evidence and logical reasoning, not on political agenda or ideological prejudice.

Teaching authentic history in schools requires aforementioned prerequisites. The goal of history education should not be to encourage blind beliefs but it should enkindle critical reasoning power and wisdom in the children to make them intelligent and responsible citizens of our nation.



# ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೆಲವು ಕೊಡುಗೆಗಳು

– ನಂ. ನಾಗಲಕ್ಷ್ಮಿ
ಲೇಖಕರು



ಭಾರತದ ಸ್ವಾತಂತ್ರ್ಯ ಹೋರಾಟ ಹಲವು ಆಯಾಮಗಳಲ್ಲಿ, ಹಲವು ಹಂತಗಳಲ್ಲಿ ನಡೆದಿರುವಂತಹುದು. ಪರಕೀಯರ ಆಡಳಿತದಿಂದ ದೇಶವನ್ನು ಮುಕ್ತಗೊಳಿಸಲು ಬಾಪೂಜಿಯವರಂತೂ ಅನೇಕ ಬಗೆಗಳಲ್ಲಿ ಚಳುವಳಿಗಳನ್ನು ರೂಪಿಸಿದ್ದರು. ಅಹಿಂಸೆಗೆ ಅವರು ಆದ್ಯತೆ ಕೊಡುತ್ತಿದ್ದುದರಿಂದ ಅದಕ್ಕೆ ಹೊಂದುವ ರೀತಿಯಲ್ಲಿಯೇ ಅವರ ಯೋಜನೆಗಳಿದ್ದುವು. ಅವುಗಳಲ್ಲಿ ಅಸಹಕಾರ ಚಳುವಳಿ, ಉಪ್ಪಿನಸತ್ಯಾಗ್ರಹ, ಧ್ವಜಸತ್ಯಾಗ್ರಹ, ವಿದೇಶೀ ವಸ್ತ್ರಗಳ ಬಹಿಷ್ಕಾರ ಮುಂತಾದುವೆಲ್ಲ ಇದ್ದುವು. ಅಸಹಕಾರ ಚಳುವಳಿಯಂತೂ ದೇಶದಾದ್ಯಂತ ನಡೆದ ಮೊಟ್ಟಮೊದಲ ಅಹಿಂಸಾತ್ಮಕ ಹೋರಾಟವಾಗಿದ್ದು 1920ರಲ್ಲಿ ಇದು ನಡೆಯಿತು. ಈ ಎಲ್ಲ ಚಳುವಳಿಗಳು ಶಾಂತಿಯುತವಾಗಿರುತ್ತಿದ್ದುವಲ್ಲದೆ, ಜನರಲ್ಲಿ ರಾಷ್ಟ್ರೀಯತೆಯ ಭಾವದೊಂದಿಗೆ ತಾವೆಲ್ಲರೂ ಒಂದಾಗ ಬೇಕೆಂಬ ಅರಿವನ್ನೂ ಮೂಡಿಸುತ್ತಿದ್ದುವು.

ಧ್ವಜಸತ್ಯಾಗ್ರಹ ಹೀಗೆ ಜನರಲ್ಲಿ ದೇಶದ ಬಗ್ಗೆ ಅಭಿಮಾನವನ್ನು, ಗೌರವವನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ದೇಶದೆಲ್ಲೆಡೆ ನಡೆದ ಈ ಚಳುವಳಿಯಲ್ಲಿ ಕರ್ನಾಟಕವೂ ಪಾಲ್ಗೊಂಡಿತ್ತು. ಮಂಡ್ಯ ಜಿಲ್ಲೆಯ ಒಂದು ಸಣ್ಣ ಊರಾದ ಶಿವಪುರದ ಧ್ವಜಸತ್ಯಾಗ್ರಹ ಇಂತಹ ಒಂದು ಮಹತ್ವದ ಘಟನೆಯನ್ನು ಇತಿಹಾಸದ ಪುಟಗಳಲ್ಲಿ ದಾಖಲಿಸಿತ್ತು.

**ಸತ್ಯಾಗ್ರಹಸೌಧ–ಶಿವಪುರ**

ಪ್ರತಿಯೊಂದು ದೇಶದ ರಾಷ್ಟ್ರೀಯ ಲಾಂಛನಗಳಲ್ಲಿ ರಾಷ್ಟ್ರಧ್ವಜಕ್ಕೆ ಮಹತ್ತ್ವದ ಸ್ಥಾನವಿರುತ್ತದೆ. ಜೊತೆಗೆ ಅಲ್ಲಿನ ಪ್ರತಿಯೊಬ್ಬ ಪ್ರಜೆಗೆ ಆ ಧ್ವಜಾರೋಹಣ ಮಾಡುವ, ಅದನ್ನು ಗೌರವಿಸುವ ಕರ್ತವ್ಯವಿರುತ್ತದೆ. ಅದು ಅವನ\ಅವಳ ಜನ್ಮಸಿದ್ಧ ಹಕ್ಕಾಗಿರುತ್ತದೆ. ಅದನ್ನು ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಆದರೆ ಬ್ರಿಟಿಷರು ಈ ಮೂಲಭೂತ ಹಕ್ಕಿಗೇ ಭಂಗ ತಂದಿದ್ದರು. 1923ರಲ್ಲಿ ಬ್ರಿಟಿಷರ ಈ ಕಾನೂನನ್ನು ಪ್ರತಿಭಟಿಸುತ್ತ, ಭಾರತದ ಧ್ವಜವನ್ನು ಹಾರಿಸುವ ಚಳುವಳಿಯನ್ನು ಮೊದಲಿಗೆ ನಾಗಪುರ ಮತ್ತು ಜಬ್ಬಲ್ಪುರದಲ್ಲಿ ಆರಂಭಿಸಲಾಯಿತಾದರೂ ದೇಶದ ಹಲವು ಕಡೆಗಳಲ್ಲಿಯೂ ಈ ಧ್ವಜಸತ್ಯಾಗ್ರಹವನ್ನು ನಡೆಸಲಾಯಿತು. ಕರ್ನಾಟಕದ ಶಿವಪುರ ಕೂಡ ಇಂತಹ ಚಳುವಳಿಗೆ ವೇದಿಕೆಯಾಯಿತು. ಅಷ್ಟೇ ಅಲ್ಲ, ಅದು ಕರ್ನಾಟಕದ ಮಹತ್ತ್ವದ ಸತ್ಯಾಗ್ರಹಗಳಲ್ಲಿ ಒಂದಾದುದರ ಜೊತೆಗೆ ಮೈಸೂರು ಸಂಸ್ಥಾನದ



ಸ್ವಾತಂತ್ರ್ಯಹೋರಾಟದಲ್ಲಿ ಹೆಚ್ಚಿನ ಪರಿಣಾಮವನ್ನು ಬೀರಿತ್ತು.

ಅದು ಕರ್ನಾಟಕದ ಚಿಕ್ಕಗ್ರಾಮವಾದ ಶಿವಪುರದತ್ತ ದೇಶವೇ ಒಮ್ಮೆ ತಿರುಗಿ ನೋಡಿದ ಸಮಯ. ಅದೇ ಶಿವಪುರದ ಧ್ವಜ ಸತ್ಯಾಗ್ರಹದ ಕಾಲ. 1938ರಲ್ಲಿ ಅಸ್ತಿತ್ವಕ್ಕೆ ಬಂದ ಮೈಸೂರು ಕಾಂಗ್ರೆಸ್ ತನ್ನ ಮೊದಲ ಅಧಿವೇಶನವನ್ನು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ನಡೆಸಬೇಕೆಂದು ನಿರ್ಧರಿಸಿತು. ಆಗ ದೇಶಾದ್ಯಂತ ಸ್ವಾತಂತ್ರ್ಯದ ಕಿಚ್ಚು ಹೊತ್ತಿತ್ತು. ಮೈಸೂರಿನಲ್ಲಿಯೂ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸಿದ್ಧತೆ ಆರಂಭವಾಗಿತ್ತು. ಆದರೆ ಸ್ವದೇಶೀ ಪ್ರೇಮವನ್ನು ಜಾಗೃತಗೊಳಿಸುವ ಯಾವುದೇ ಚಟುವಟಿಕೆಗೆ ಆಳುವ ಸರ್ಕಾರ ಪ್ರತಿಬಂಧಕಾಜ್ಞೆಯನ್ನು ವಿಧಿಸಿತ್ತು. ಆದರೇನು? ಜನರ ಉತ್ಸಾಹ ಅದರಿಂದ ಕುಂದಿರಲಿಲ್ಲ. ಚಳುವಳಿಯಲ್ಲಿ ತೊಡಗಿದ್ದ ಅನೇಕ ಮುಖಂಡರನ್ನು ಬಂಧಿಸಿದ್ದುದರಿಂದ ಜನ ರೊಚ್ಚಿಗೆದ್ದಿದ್ದರು. ಮೈಸೂರಿನ ಹೊರಗೇ ಧ್ವಜಸತ್ಯಾಗ್ರಹ ನಡೆಸಲು ನಿರ್ಧರಿಸಿತು. ಅದರಂತೆ ಮದ್ದೂರಿನ ಶಿವಪುರದಲ್ಲಿ ಆ ಕಾರ್ಯವನ್ನು ಮಾಡಲು ತೀರ್ಮಾನವಾಗಿತ್ತು.

ಮೈಸೂರು–ಬೆಂಗಳೂರು ರಸ್ತೆಯ ಪಕ್ಕದಲ್ಲಿದ್ದ ತಿರುಮಲೇಗೌಡರ ಜಮೀನಿನಲ್ಲಿ ಅಧಿವೇಶನ ನಡೆಸಿ ರಾಷ್ಟ್ರಧ್ವಜ ಹಾರಿಸುವ ತೀರ್ಮಾನವನ್ನು ಕೈಗೊಂಡರು. ಅವರದೇ ಮನೆಯನ್ನು ಕಚೇರಿಯನ್ನಾಗಿ ಬಳಸಿಕೊಳ್ಳಬೇಕೆಂದೂ ನಿರ್ಧಾರವಾಯಿತು. ಅಧಿವೇಶನದ ಅಧ್ಯಕ್ಷರಾಗಿ ಟಿ. ಸಿದ್ದಲಿಂಗಯ್ಯನವರು, ಉಪಾಧ್ಯಕ್ಷರಾಗಿ ಸಾಹುಕಾರ್ ಚೆನ್ನಯ್ಯನವರು, ಕೊಪ್ಪದ (ಸಮೀಪದ ಹಳ್ಳಿ) ಜೋಗೀಗೌಡ ಕಾರ್ಯದರ್ಶಿಯಾದರು. ಎಮ್.ಎನ್.ಜೋಯಿಸ್, ಹೆಚ್.ಕೆ. ವೀರಣ್ಣಗೌಡ, ವೆಂಕಟಗಿರಿಗೌಡ, ಪಿ. ಲಿಂಗೇಗೌಡ, ಹೆಚ್.ಸಿ. ದಾಸಪ್ಪ, ಯಶೋಧರಮ್ಮ ದಾಸಪ್ಪ, ಶ್ರೀನಿವಾಸ ಅಯ್ಯಂಗಾರ್, ಪಿ. ತಮ್ಮಯ್ಯ, ಇಂಡವಾಳು ಹೊನ್ನಯ್ಯ ಮುಂತಾದವರು ಸದಸ್ಯರಾಗಿದ್ದ ರಾಷ್ಟ್ರಕೂಟ ಸಮಿತಿಗೆ ಬೆಳಗಾವಿ, ಧಾರವಾಡ, ಉತ್ತರ ಕನ್ನಡ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಯ ನಾಯಕರು ಮಾರ್ಗದರ್ಶಕರಾಗಿ ಶ್ರಮಿಸಿದರು. ಎಲ್ಲರೂ ಕಾರ್ಯಕ್ರಮಕ್ಕೆ ಬಹಳ ಮೊದಲೇ ಶಿವಪುರಕ್ಕೆ ಆಗಮಿಸಿದ್ದರು. ಅದು ಮೂರು ದಿನಗಳ ಅಧಿವೇಶನ. ಜಿಲ್ಲೆಯ ಪ್ರತಿ ಮನೆಯಿಂದ ಅಕ್ಕಿ, ಬೇಳೆ, ಬೆಲ್ಲ, ಹಾಲು, ಮೊಸರು, ಬಾಳೆಹಣ್ಣು, ತೆಂಗಿನಕಾಯಿ, ಬಾಳೆಎಲೆ ಹೀಗೆ ಸುಮಾರು ಹತ್ತು ಸಾವಿರ ಮಂದಿಗೆ ಮೂರು ದಿನಗಳ ವರೆಗೆ ಅಗತ್ಯವಾದ ಎಲ್ಲ ಪದಾರ್ಥಗಳ ವ್ಯವಸ್ಥೆಯಾಗಿತ್ತು. ಇಲ್ಲಿ ಜಾತಿಭೇದವಿರಲಿಲ್ಲ. ರಾಜ್ಯಾದ್ಯಂತ ಬಂದಿದ್ದ ನಾಯಕರು, ಸಾರ್ವಜನಿಕರು ಸಾಮೂಹಿಕ ಭೋಜನದಲ್ಲಿ ಪಾಲ್ಗೊಳ್ಳುತ್ತಿದ್ದರು. ಮೆರವಣಿಗೆಯಲ್ಲಿ ಅಧ್ಯಕ್ಷರನ್ನು ಕರೆತಂದು ಇನ್ನೇನು ಧ್ವಜಾರೋಹಣವಾಗಬೇಕೆನ್ನುವಷ್ಟರಲ್ಲಿ ಸರ್ಕಾರ ನಿಷೇಧಾಜ್ಞೆಯನ್ನು ಘೋಷಿಸಿತ್ತು. ಜನರೆಲ್ಲ ದಂಗೆ ಎದ್ದರು. ಧ್ವಜಾರೋಹಣವಾಗುವವರೆಗೆ ಕದಲುವುದಿಲ್ಲವೆಂದು ಧರಣಿ ಕುಳಿತರು. ನಾಯಕರೆಲ್ಲ ಒಬ್ಬರ ಹಿಂದೆ ಒಬ್ಬರಂತೆ ಧ್ವಜ ಹಿಡಿದು ನಡೆಯುತ್ತಿದ್ದಂತೆ ಸಾವಿರಾರು ಜನ ಹಿಂಬಾಲಿಸುತ್ತಿದ್ದರು. ಎಲ್ಲರಿಗಿಂತ ಮುಂದಿನ ನಾಯಕರನ್ನು ಪ್ರಥಮ ಸೇನಾನಿಯೆಂದು ಘೋಷಿಸಲಾಗುತ್ತಿತ್ತು. ಅವರ ಬಂಧನವಾಗುತ್ತಿದ್ದಂತೆ ಕೂಡಲೇ ಅವರ ಕೈಯಲ್ಲಿದ್ದ ಧ್ವಜವು ಅವರ ಹಿಂದಿನವರ ಕೈಗೆ ವರ್ಗಾವಣೆ ಆಗುತ್ತಿತ್ತು. ಅದು ಕೆಳಗೆ ಬೀಳಲು ಆಸ್ಪದ ಕೊಡುತ್ತಿರಲಿಲ್ಲ.

ಹೀಗೆ ಮೂರು ದಿನಗಳ ಕಾಲ ಏಪ್ರಿಲ್ ಒಂಭತ್ತರಿಂದ ನಡೆದ ಈ ಕಾರ್ಯಕ್ರಮದಲ್ಲಿ ಅನೇಕ ನಾಯಕರು ಧ್ವಜಾರೋಹಣ ಮಾಡಿ ಬಂಧಿತರಾದರು. ಎಲ್ಲಿಯೂ ಹಿಂಸೆಯ ಘಟನೆ ಅಥವಾ ಪ್ರಚೋದನಾತ್ಮಕ ಭಾಷಣವಾಗಲಿಲ್ಲ. ಆದರೆ ಜನರಲ್ಲಿ ದೇಶಪ್ರೇಮವನ್ನು ತುಂಬುವಲ್ಲಿ ಯಶಸ್ವಿಯಾಗಿತ್ತು. ಅಹಿಂಸಾತ್ಮಕ ಚಳುವಳಿಗೆ ಹೀಗೆ ಶಿವಪುರದ ಧ್ವಜಸತ್ಯಾಗ್ರಹ ಒಂದು ಮಾದರಿಯಾಯಿತು. ಕರ್ನಾಟಕದ ಚಳುವಳಿಗಳಲ್ಲಿ ಒಂದು ಪ್ರಮುಖ ಮೈಲುಗಲ್ಲೆನಿಸಿಕೊಂಡಿತು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪುರ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿತ್ತು.

## ವಿದುರಾಶ್ವತ್ಥದ ಧ್ವಜಸತ್ಯಾಗ್ರಹ



ಪಂಜಾಬ್‌ನಲ್ಲಿ ನಡೆದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಒಂದು ಕಹಿ ಅಧ್ಯಾಯ. ಶತಮಾನದ ನರಬೇಟೆಯೆಂದೇ ಅದನ್ನು ಪರಿಗಣಿಸಲಾಗಿದೆ. ಅಂತಹುದೇ ಕಹಿ ಅಧ್ಯಾಯಕ್ಕೆ ಕರ್ನಾಟಕದ ವಿದುರಾಶ್ವತ್ಥವೂ ಸಾಕ್ಷಿಯಾಯಿತು. ಹಾಗಾಗಿ ಈ ಘಟನೆಯನ್ನು 'ಕರ್ನಾಟಕದ ಜಲಿಯನ್ ವಾಲಾಬಾಗ್ ಹತ್ಯಾಕಾಂಡ' ಎಂದೇ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಹೆಸರಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಪುಟ್ಟ ಗ್ರಾಮ ವಿದುರಾಶ್ವತ್ಥ. ಇದು ಪುರಾತನ ಅಶ್ವತ್ಥನಾರಾಯಣ ಸ್ವಾಮಿಯ ದೇವಾಲಯ ಮತ್ತು ಸುಬ್ರಹ್ಮಣ್ಯಸ್ವಾಮಿಯ ಸನ್ನಿಧಾನವಿರುವ ಪುಣ್ಯಕ್ಷೇತ್ರವೆನಿಸಿದೆ. ಗೌರಿಬಿದನೂರಿಗೆ ಏಳು ಕಿ.ಮೀ. ದೂರದಲ್ಲಿ ನಾಗಸಂದ್ರವೆಂಬ ಸ್ಥಳವಿದೆ. ಇದು ಅನೇಕ ಸ್ವಾತಂತ್ರ್ಯ ಹೋರಾಟ ಗಾರರ, ಸಮಾಜಸೇವಕರ ನೆಲೆವೀಡು. ಇಲ್ಲಿರುವ ಭಾರತಮಾತಾ ದೇವಸ್ಥಾನದಲ್ಲಿ ಪ್ರತಿ ವರ್ಷ ಆಗಸ್ಟ್ 15ರಂದು ವಿಶೇಷ ಪೂಜೆ, ಉತ್ಸವ ನಡೆಯುತ್ತದೆ. ಮನರಂಜನೆಯ ಕಾರ್ಯಕ್ರಮಗಳೂ ನಡೆಯುತ್ತವೆ. ಅದಕ್ಕೆ ಮೂರು ಕಿ.ಮೀ. ದೂರದಲ್ಲಿ ವಿದುರಾಶ್ವತ್ಥ ಕ್ಷೇತ್ರವಿದೆ. ಮಹಾಭಾರತದಲ್ಲಿ ಬರುವ ಮಹಾಜ್ಞಾನಿ ವಿದುರನು ಇಲ್ಲಿ ಬಂದು ಒಂದು ಅಶ್ವತ್ಥ ಗಿಡವನ್ನು ನೆಟ್ಟು ಬೆಳೆಸಿದನೆಂದು ಪ್ರತೀತಿಯಿದೆ. ದೇವಸ್ಥಾನದ ಎರಡೂ ಬದಿಗಳಲ್ಲಿ ಸಾವಿರಾರು ನಾಗಪ್ಪನ ಶಿಲಾಮೂರ್ತಿಗಳು ತುಂಬಿವೆ.

### ಕರ್ನಾಟಕದ ಜಲಿಯನ್ ವಾಲಾಬಾಗ್-ವಿದುರಾಶ್ವತ್ಥ

ಅದು ದೇಶದ ಎಲ್ಲ ಕಡೆಗಳಲ್ಲಿ ಸ್ವಾತಂತ್ರ್ಯಪ್ರೇಮದ ಅಲೆ ಹರಡಿ ಜನರು ಗಾಂಧೀಜಿಯವರು ನಡೆಸುತ್ತಿದ್ದ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಕಾಲ. ಧ್ವಜಸತ್ಯಾಗ್ರಹ ಕೂಡ ಅವುಗಳಲ್ಲಿ ಒಂದಾಗಿತ್ತು. ಇತರ ಸ್ಥಳಗಳಂತೆ ಅನೇಕ ಸ್ವಾತಂತ್ರ್ಯ ಹೋರಾಟಗಾರರ ಜನ್ಮಭೂಮಿಯಾಗಿದ್ದ ಗೌರಿಬಿದನೂರು ಕೂಡ ಇದಕ್ಕೆ ಸ್ಪಂದಿಸಿತ್ತು. ಅಲ್ಲಿನ ಹಿರಿಯ ನಾಯಕರು ವಿದುರಾಶ್ವತ್ಥದಲ್ಲಿಯೇ ಆ ಕಾರ್ಯಕ್ರಮವನ್ನು ನಡೆಸಲು ನಿಶ್ಚಯಿಸಿದ್ದರು. ಆಗತಾನೇ ಶಿವಪುರದಲ್ಲಿ ನಡೆದ ಸತ್ಯಾಗ್ರಹ ಅದಕ್ಕೆ ಹೆಚ್ಚಿನ ಪ್ರೇರಣೆ ನೀಡಿತ್ತು.

ಅದೇ ಸಮಯದಲ್ಲಿ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಒಂದು ಜಾತ್ರೆ ನಡೆದಿತ್ತು. ಸಹಜವಾಗಿಯೇ ಬಹಳ ಮಂದಿ ಸೇರುವ ಸಂದರ್ಭವಾದುದರಿಂದ ಕಾಂಗ್ರೆಸ್ ಕಾರ್ಯಕರ್ತರು ಅಲ್ಲಿ ಪ್ರಚಾರ ಕಾರ್ಯವನ್ನೂ ಕೈಗೊಳ್ಳಬೇಕೆಂದು ನಿರ್ಧರಿಸಿದರು. 1938 ಏಪ್ರಿಲ್ 25ರಂದು ಧ್ವಜಸತ್ಯಾಗ್ರಹ ಮಾಡಲು ನಿಗದಿಯಾಯಿತು. ಆದರೆ ಇದರ ಸುಳಿವು ತಿಳಿಯುತ್ತಿದ್ದಂತೆಯೇ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರು ತಾಲ್ಲೂಕಿನಾದ್ಯಂತ 144ನೇ ಸೆಕ್ಷನ್ ವಿಧಿಸಿ ಸಭೆ ಸಮಾರಂಭ ನಡೆಸದಿರಲು ಸೂಚಿಸಿದರು. ಆದರೂ ಭಾಷಣ ಮಾಡಲು ಕಾಂಗ್ರೆಸ್ ನಾಯಕರು ಬರುತ್ತಿದ್ದಂತೆ ಜನರೂ ಸೇರತೊಡಗಿದರು. ಅಲ್ಲಿ ಧ್ವಜಾರೋಹಣವೂ, ಕಾಂಗ್ರೆಸ್ಸಿನ ಎಲ್ಲ ಕಾರ್ಯಕ್ರಮಗಳೂ, ಭಾಷಣವೂ ಸೇರಿದಂತೆ ಸರ್ಕಾರದ ಆಜ್ಞೆಗೆ ವಿರುದ್ಧವಾಗಿಯೇ

ನಡೆದುವು. ಕೂಡಲೇ ಅನೇಕ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಲಾಯಿತು. ಪರಿಣಾಮವಾಗಿ ಜನ ರೊಚ್ಚಿಗೆದ್ದರು. ಪರಿಸ್ಥಿತಿ ಉಗ್ರರೂಪ ತಾಳಿತು. ಜನರನ್ನು ನಿಯಂತ್ರಿಸಲು ಸಾಧ್ಯವಾಗದೆ ಪೊಲೀಸರು ಅವರ ಮೇಲೆ ಲಾಠಿ ಛಾರ್ಜ್ ಮಾಡಿದರು, ಗುಂಡಿನ ಮಳೆಯನ್ನೂ ಕರೆದರು. ಪರಿಣಾಮ ಅಪಾರ ಸಂಖ್ಯೆಯಲ್ಲಿ ಜನರು ಗಾಯಗೊಂಡರು, ಸುಮಾರು ಮೂವತ್ತೈದು ಮಂದಿ ಮರಣ ಹೊಂದಿದರೆಂದು ಸುದ್ದಿಯಾಯಿತು. ಗೌರಮ್ಮ ನೆಂಬ ಗರ್ಭಿಣಿ ಸತ್ತ ಸುದ್ದಿಯಂತೂ ಜನರನ್ನು ರೋಷತಪ್ತರಾಗುವಂತೆ ಮಾಡಿತ್ತು. ಯಾವುದೇ ಹಿಂಸಾಕಾರ್ಯದಲ್ಲಿ ತೊಡಗದೆ ಶಾಂತಿಯುತವಾಗಿ ನಡೆಸುತ್ತಿದ್ದ ತಮ್ಮ ಚಳುವಳಿಗೆ ಸರ್ಕಾರವು ಪ್ರತಿಕ್ರಿಯಿಸಿದ ರೀತಿ ಜನರನ್ನು ಕೆರಳಿಸಿತ್ತು. ರಾಜ್ಯಾದ್ಯಂತ ಪ್ರತಿಭಟನೆಯ ಕಾವು ಹರಡಿತು.

ಜಲಿಯನ್ ವಾಲಾಬಾಗ್ ರೀತಿಯಲ್ಲಿ ನಡೆದ ಹತ್ಯಾಕಾಂಡ ಇಡೀ ದೇಶದ ಗಮನವನ್ನು ಸಳೆದಿತ್ತು. ಗಾಂಧೀಜಿಯವರು ಇದನ್ನು ಟೀಕಿಸುತ್ತ ಬಹಿರಂಗ ವಿಚಾರಣೆಯಾಗಬೇಕೆಂದು ಸರ್ಕಾರವನ್ನು ಆಗ್ರಹ ಪಡಿಸಿದರು. ಆದರೆ ಸರ್ಕಾರ ನಡೆಸಿದ ವಿಚಾರಣೆಯ ಫಲಿತಾಂಶದಲ್ಲಿ ಕಾಂಗ್ರೆಸ್ಸನ್ನೇ ಟೀಕಿಸಲಾಗಿತ್ತು. ಅದನ್ನು ಜನತೆ ತೀವ್ರವಾಗಿ ಖಂಡಿಸಿತು. ಆಗ ಜನರ ರೋಷದ ಕಿಚ್ಚನ್ನು ಆರಿಸಲು, ಕಾಂಗ್ರೆಸ್ ನಾಯಕರ ಕೋಪವನ್ನು ಶಮನ ಮಾಡಲು ಗಾಂಧೀಜಿಯ ನೆರವನ್ನೇ ಕೋರಲಾಯಿತು. 1938ರ ಮೇ ಆರರಿಂದ ಒಂಬತ್ತರವರೆಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಜ್ಯಕ್ಕೆ ಭೇಟಿ ನೀಡಿ, ಸರ್ಕಾರದ ಅಧಿಕಾರಿಗಳು ಮತ್ತು ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿದರು. ಒಂದು ಒಪ್ಪಂದವಾಗಿ ಅದನ್ನು ಪಟೇಲ್–ಮಿರ್ಜಾ ಒಪ್ಪಂದವೆಂದೇ ಕರೆಯಲಾಯಿತು. ಒಟ್ಟಿನಲ್ಲಿ ವಿದುರಾಶ್ವತ್ಥದ ದುರಂತದ ಘಟನೆ ಸ್ವಾತಂತ್ರ್ಯ ಸಾಧನೆಯ ಮಹಾಕಾರ್ಯದಲ್ಲಿ ಜನರಲ್ಲಿ ಶೌರ್ಯ ಮತ್ತು ದೃಢಸಂಕಲ್ಪ ಶಕ್ತಿಯನ್ನು ಗಳಿಸಿಕೊಟ್ಟಿತ್ತು. ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿಯೂ ಇದು ಒಂದು ಮಹತ್ತ್ವದ ಘಟನೆಯಾಯಿತು. ಒಂದು ರೀತಿಯಲ್ಲಿ ಸರ್ಕಾರ ಕಾಂಗ್ರೆಸ್ ವಿರುದ್ಧ ಕೈಗೊಂಡ ಕ್ರಮಗಳೆಲ್ಲವೂ ಅದನ್ನೇ ಮತ್ತಷ್ಟು ಪ್ರಬಲವಾಗಿ ಬೆಳೆಸಲು ಕಾರಣವಾದುವು. ಇಂದಿಗೂ 'ವಿದುರಾಶ್ವತ್ಥ'ದ ಹೆಸರು ಕೇಳಿದೊಡನೆ ಬ್ರಿಟಿಷರ ದೌರ್ಜನ್ಯ ಅದೆಷ್ಟು ಕ್ರೂರವಾಗಿ ಅಮಾಯಕರ ಮೇಲೆಯೂ ನಡೆಯುತ್ತಿತ್ತೆಂಬುದನ್ನು ಸ್ಮರಣೆಗೆ ತಂದು ಕೋಪದಿಂದ ಪ್ರತಿಯೊಬ್ಬ ಭಾರತೀಯನ ರಕ್ತ ಕುದಿಯುವಂತಾಗುತ್ತದೆ.

## ಈಸೂರಿನ ಸತ್ಯಾಗ್ರಹ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಕುಮುದ್ವತಿ ನದಿಯ ಬಲದಂಡೆಯ ಮೇಲಿರುವ ಗ್ರಾಮವೇ ಈಸೂರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಶಿವಮೊಗ್ಗ ಜಿಲ್ಲೆಗೆ ಮಾತ್ರವಲ್ಲ, ಇಡೀ ಕರ್ನಾಟಕಕ್ಕೇ ಹೆಸರು ತಂದ ಊರು ಈಸೂರು. ಅದು ಮಹಾತ್ಮ ಗಾಂಧೀಜಿಯವರ 'ಭಾರತ ಬಿಟ್ಟು ತೊಲಗಿ' ಘೋಷಣೆಯನ್ನು ಬೆಂಬಲಿಸಲು ದೇಶದೆಲ್ಲೆಡೆ ಜನರು ಸಜ್ಜಾಗಿದ್ದ ಕಾಲ. ಬ್ರಿಟಿಷ್ ಸರ್ಕಾರ 1942 ಆಗಸ್ಟ್ ಒಂಭತ್ತರಂದು ಚಳುವಳಿಯ ನಾಯಕರನ್ನೆಲ್ಲ ಬಂಧಿಸಿತ್ತು. ಚಳುವಳಿ ಶಾಂತಿಯುತವಾಗಿಯೇ ನಡೆಸುತ್ತಿದ್ದರೂ ಸರ್ಕಾರ ಅದನ್ನು ಅಪರಾಧವೆಂದೇ ಪರಿಗಣಿಸುತ್ತಿತ್ತು. ಈಸೂರಿನ ಜನತೆಯೂ ಸಹ ತಮ್ಮ ನಾಯಕರ ಕರೆಗೆ ಓಗೊಟ್ಟು ತಾಳ್ಮೆಯಿಂದಲೇ ಚಳುವಳಿಯನ್ನು ನಡೆಸುತ್ತಿತ್ತು. ಯುವಕರೆಲ್ಲರೂ ಗಾಂಧಿಟೋಪಿ ಧರಿಸಿ, ರಾಷ್ಟ್ರಧ್ವಜ ಹಿಡಿದು ಸಭೆಗಳನ್ನು ನಡೆಸುತ್ತಿದ್ದರು. 150ರಿಂದ 200 ಮಂದಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಸರ್ಕಾರಕ್ಕೆ ತೆರಿಗೆ ಕೊಡದಿರುವಂತೆ ಹೇಳುತ್ತ, ಪ್ರತಿಭಟಿಸಿದ ಅಧಿಕಾರಿಗಳನ್ನು ಅಲಕ್ಷಿಸುತ್ತ, ಸರ್ಕಾರಿ ಅಧಿಕಾರಿಗಳಿಗೆ, ಶಾಲೆಗೆ, ಕಚೇರಿಗಳಿಗೆ ಧಿಕ್ಕಾರ ಕೂಗುತ್ತ ನಡೆದಿದ್ದರು. 1942 ಸೆಪ್ಟೆಂಬರ್ 25ರಂದು ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿ ಈಸೂರನ್ನು 'ಸ್ವತಂತ್ರ ಹಳ್ಳಿ' ಎಂದು ಘೋಷಿಸಿದರು. ಅಷ್ಟೇ ಅಲ್ಲ, ತಮ್ಮದೇ ಆದ ಸರ್ಕಾರವನ್ನು ರಚಿಸಿಕೊಂಡು ಗ್ರಾಮದ ಆಡಳಿತ ನಡೆಸತೊಡಗಿದರು. ಅದೇ ತಿಂಗಳ




28ರಂದು ಆ ತಾಲ್ಲೂಕಿನ ಅಮಲ್ದಾರರು, ಪೊಲೀಸ್ ಅಧಿಕಾರಿ ಮತ್ತು ಕೆಲವು ಪೊಲೀಸರೊಂದಿಗೆ ಗ್ರಾಮಕ್ಕೆ ಹೋದರು. ಅಲ್ಲಿನ ಜನರು ಗ್ರಾಮ ಪ್ರವೇಶಿಸಬೇಕಾದರೆ ಗಾಂಧೀಟೋಪಿ ಹಾಕಬೇಕೆಂಬ ಷರತ್ತು ವಿಧಿಸಿ, ಅವರು ಒಪ್ಪದಿದ್ದಾಗ ಬಲವಂತವಾಗಿ ಅಧಿಕಾರಿಗಳಿಗೇ ಟೋಪಿ ಹಾಕಿ ಅವರಿಂದ 'ಸ್ವತಂತ್ರ ಗ್ರಾಮಕ್ಕೆ ಜೈ' ಎನ್ನುವ ಘೋಷಣೆ ಹಾಕಿಸಿದ್ದು ಹೋರಾಟ ತೀವ್ರವಾಗಲು ಕಾರಣವಾಯಿತು. ಜನರಿಂದ ಹೀಗೆ ಪ್ರತಿಭಟನೆ ಬಂದಾಗ ಅಧಿಕಾರಿಗಳು ಕೋಪಗೊಂಡರು. ನಿರಾಯುಧರಾದ ಜನರ ಮೇಲೆ ಮೊದಲು ಲಾಠಿಯಿಂದ ಹೊಡೆದು ನಂತರ ಗುಂಡು ಹಾರಿಸತೊಡಗಿದರು. ಇದರಿಂದ ಜನರೂ ಉದ್ರಿಕ್ತರಾಗಿ ಪ್ರತಿಭಟನೆ ಮತ್ತಷ್ಟು ಹೆಚ್ಚಿತು. ಬ್ರಿಟಿಷ್ ಅಧಿಕಾರಿಗಳ ಲಾಠಿ ಏಟಿನ, ಬೂಟುಗಾಲಿನ ಒದೆತಗಳಿಗೆ ಅಂಜದೆ ಅವರ ದೌರ್ಜನ್ಯವನ್ನು ಎದೆ ಸೆಟೆಸಿ ನಿಂತು ಎದುರಿಸಿದರು. ಗಲಭೆಯಲ್ಲಿ ಅಮಲ್ದಾರ ಚನ್ನಕೃಷ್ಣಪ್ಪ ಮತ್ತು ಪೊಲೀಸ್ ಅಧಿಕಾರಿ ಕೆಂಚೇಗೌಡ ಎಂಬುವರು ಸತ್ತರು. ಸರ್ಕಾರಕ್ಕೆ ಈ ಸುದ್ದಿ ತಿಳಿದು ಹೆಚ್ಚಿನ ಪೊಲೀಸ್ ದಳದೊಂದಿಗೆ ಸೈನ್ಯವನ್ನೇ ಕಳುಹಿಸಿ ಇಡೀ ಹಳ್ಳಿಯನ್ನೇ ಲೂಟಿ ಮಾಡಿಸಿತು. ಹೆಂಗಸರು, ಮಕ್ಕಳು, ವೃದ್ಧರು ಎನ್ನದೆ ಸಿಕ್ಕಸಿಕ್ಕವರನ್ನೆಲ್ಲ ಚಿತ್ರಹಿಂಸೆ ಮಾಡಲಾಯಿತು. ಊರು ರಣರಂಗವಾಯಿತು. ಸರ್ಕಾರದ ವಿರುದ್ಧ ಬಂಡಾಯವೆದ್ದವರೆಂದು 50 ಮಂದಿಯ ಮೇಲೆ ಆರೋಪ ಹೊರೆಸಿ 41 ಮಂದಿಯನ್ನು ಬಂಧಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಯಿತು. ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು 1943 ಜನವರಿ ಒಂಭತ್ತರಂದು ನೀಡಿದ ತೀರ್ಪಿನ ಪ್ರಕಾರ ಮರಣದಂಡನೆಯನ್ನು ಗುರಪ್ಪ, ಮಲ್ಲಪ್ಪ, ಸೂರ್ಯನಾರಾಯಣಾಚಾರಿ, ಬಿ.ಹಾಲಪ್ಪ ಮತ್ತು ಜಿ.ಶಂಕರಪ್ಪ ಇವರಿಗೆ ಮರಣದಂಡನೆಯನ್ನೂ ಹಾಲಮ್ಮ ಮತ್ತು ಪಾರ್ವತಮ್ಮನಿಗೆ ಜೀವಾವಧಿ ಗಡೀಪಾರು ಶಿಕ್ಷೆಯನ್ನೂ ವಿಧಿಸಿದರು. ಉಳಿದವರಿಗೆ ನಾನಾ ರೀತಿಯ ವಿವಿಧ ಕಾಲದ ಕಾರಾಗೃಹ ಶಿಕ್ಷೆಯನ್ನು ವಿಧಿಸಲಾಯಿತು.

**'ಏಸೂರು ಕೊಟ್ಟರೂ ಈಸೂರು ಬಿಡೆವು'**

1943 ಮಾರ್ಚಿ ತಿಂಗಳ 8ರಂದು ಗುರಪ್ಪ ಮತ್ತು ಮಲ್ಲಪ್ಪ ಇಬ್ಬರನ್ನೂ ಗಲ್ಲಿಗೇರಿಸಲಾಯಿತು. ಮಾರನೆಯ ದಿನವೇ ಸೂರ್ಯನಾರಾಯಣಾಚಾರಿ ಮತ್ತು ಹಾಲಪ್ಪನನ್ನೂ ಹತ್ತನೇ ತಾರೀಖಿನಂದು ಶಂಕರಪ್ಪನನ್ನೂ ಅಂದಿನ ಸರ್ಕಾರ ಗಲ್ಲಿಗೇರಿಸಿಯೇ ಬಿಟ್ಟು ತನ್ನ ಸೇಡನ್ನು ತೀರಿಸಿಕೊಂಡಿತ್ತು. ಪಾರ್ವತಮ್ಮ ಮತ್ತು ಹಾಲಮ್ಮ ಹಾಗು ಸಿದ್ದಮ್ಮ ಇವರನ್ನು 1947 ಅಕ್ಟೋಬರ್ 21 ರಂದು ಬಿಡುಗಡೆ ಮಾಡಲಾಯಿತು. 'ಸ್ವತಂತ್ರಹಳ್ಳಿ' ಎಂದು ಘೋಷಿಸಿ ದೇಶದ ಸ್ವಾತಂತ್ರ್ಯಹೋರಾಟದ ಕಹಳೆಯನ್ನು ಕೂಗಿ ತಮ್ಮ ಪ್ರಾಣವನ್ನು ಅರ್ಪಿಸಿ ಈಸೂರಿನ ಕಲಿಗಳು ಹುತಾತ್ಮರಾದರು. **'ಏಸೂರು ಕೊಟ್ಟರೂ ಈಸೂರು ಬಿಡೆವು'** ಎಂಬ ಘೋಷಣೆ ಅಲ್ಲಿನ ಜನರಲ್ಲಿ ಹೋರಾಟದ ಕೆಚ್ಚನ್ನು ತುಂಬುತ್ತಿತ್ತು. ಒಂದು ಸಣ್ಣ ಗ್ರಾಮವಾದರೂ 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತೆ ಈ ಪುಟ್ಟ ಗ್ರಾಮ ಕರ್ನಾಟಕದ ಕಲಿಗಳ ಶೌರ್ಯ, ಪರಾಕ್ರಮಗಳಿಗೆ, ಸ್ವಾಭಿಮಾನಕ್ಕೆ ಪ್ರತೀಕವಾಗಿ ಇತಿಹಾಸದ ಪುಟಗಳಲ್ಲಿ ತನ್ನ ಹಿರಿಮೆ–ಗರಿಮೆಗಳೊಂದಿಗೆ ದಾಖಲಾಗಿದೆ. ಗಲ್ಲಿಗೇರಿದ ಐವರ ಚಿತಾಭಸ್ಮವನ್ನು ಶಿಕಾರಿಪುರ ತಾಲ್ಲೂಕು

ಕೇಂದ್ರದಿಂದ 10 ಕಿ.ಮೀ. ದೂರದಲ್ಲಿರುವ ಈಸೂರಿಗೆ ತಂದು ಒಂದೇ ಸ್ಥಳದಲ್ಲಿ ಇಟ್ಟು ಅದರ ಮೇಲೆ ಸ್ಮಾರಕ ನಿರ್ಮಿಸಲಾಗಿದೆ. ಗ್ರಾಮದ ಎಲ್ಲರೂ ಸೇರಿ ಪ್ರತಿವರ್ಷ ಜನವರಿಯಲ್ಲಿ ಹುತಾತ್ಮರ ಸ್ಮರಣೆ, ಸ್ವಾತಂತ್ರ್ಯೋತ್ಸವದ ಸಂಭ್ರಮವನ್ನು ಆಚರಿಸುತ್ತಾರೆ.

ಕರ್ನಾಟಕದ ಅನೇಕ ಸ್ಥಳಗಳು ಸ್ವಾತಂತ್ರ್ಯ ಹೋರಾಟದ ವೀರಗಾಥೆಗಳನ್ನು ಹೇಳುತ್ತವೆ. ನಮ್ಮ ಕರ್ನಾಟಕ ಹಲವು ವೀರ ಪುರುಷರಿಗೆ, ಮಹಿಳೆಯರಿಗೆ ಜನ್ಮ ನೀಡಿದೆ. ಆ ಸಮಯದಲ್ಲಿ ಚಿತ್ರದುರ್ಗ, ಬೆಳಗಾವಿ, ಧಾರವಾಡ, ಮಂಗಳೂರು ಮತ್ತು ಮೈಸೂರು ಅತ್ಯಂತ ಕ್ರಿಯಾಶೀಲ ಜಿಲ್ಲೆಗಳೆನಿಸಿದ್ದುವು. ಕಾರ್ನಾಡ್ ಸದಾಶಿವರಾವ್, ಕಮಲಾದೇವಿ ಚಟ್ಟೋಪಾಧ್ಯಾಯ, ಗಂಗಾಧರರಾವ್ ದೇಶಪಾಂಡೆ, ಚೆನ್ನಪ್ಪ ವಾಲಿ – ಹೀಗೆ ನಾಡಿನ ಹಲವು ಕಡೆಗಳಲ್ಲಿ ಪರಕೀಯರ ವಿರುದ್ಧ ಸಿಡಿದೆದ್ದು ನಿಂತ ವೀರರ ಪರಾಕ್ರಮದ ಸಂಗತಿಗಳು ನಡೆದಿವೆ. ಮೇಲೆ ಪ್ರಸ್ತಾಪಿಸಿದ ಮೂರು ಘಟನೆಗಳು ಅಂತಹ ಸ್ಮರಣೀಯ ಉದಾಹರಣೆಗಳು. ಇಂತಹವು ಇನ್ನೂ ಅದೆಷ್ಟೋ ಇರುವುದು ಕನ್ನಡಿಗರ ದೇಶ ಪ್ರೇಮವನ್ನು ಪ್ರತಿನಿಧಿಸುತ್ತವೆ. ದೇಶಪ್ರೇಮಕ್ಕೆ, ಸ್ವಾಭಿಮಾನಕ್ಕೆ, ಕಲಿತನಕ್ಕೆ, ತ್ಯಾಗಕ್ಕೆ ಕನ್ನಡಿಗರು ಎಂದಿಗೂ ಹಿಂಜರಿದಿರಲಿಲ್ಲ. ಇದು ನಿನ್ನೆ, ಮೊನ್ನೆಯ ಜನರ ಸ್ವಭಾವವಲ್ಲ, ಕ್ರಿ.ಶ. 16ನೇ ಶತಮಾನದಲ್ಲಿದ್ದ ನಂಜುಂಡಕವಿಯೆಂಬುವನು ತನ್ನ 'ರಾಮನಾಥ ಚರಿತ' ಕಾವ್ಯದಲ್ಲಿ ಕನ್ನಡಿಗರ ಸ್ವಭಾವವನ್ನು ವಿವರಿಸಿರುವುದನ್ನು ಇಲ್ಲಿ ಹೆಮ್ಮೆಯಿಂದ ಸ್ಮರಿಸಬಹುದು.

**ವೀರರಲ್ಲದೆ ಹಂದೆಗಳು ವಿತರಣ ಗುಣ**

**ಶೂರರಲ್ಲದೆ ಲೋಭಿಗಳು ।**

**ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿ**

**ಕಾರಿಗಳಿಲ್ಲಾ ನೆಲದೊಳು ॥**



# स्वतन्त्रता आन्दोलन में वैज्ञानिकों का योगदान



- सीताराम व्यास
सेवानिवृत्त एसोसियेट प्रोफेसर,
रोहतक (हरियाणा)

भारत के 19 वीं शताब्दी के पुनर्जागरण के काल खण्ड में हमारे महान् वैज्ञानिकों ने विश्व के सम्मुख अपनी प्रतिभा द्वारा सत्य को पूर्ण आभा के साथ प्रगट किया। स्वतन्त्रता के अमृत महोत्सव पर महान् वैज्ञानिकों की स्वातन्त्र्य-चेतना पर विचार करते हुए उनके बहुमूल्य योगदान पर विचार करना नितान्त आवश्यक है। यह भी जानने की आवश्यकता है कि स्वतन्त्रता आन्दोलन के संघर्ष में भारतीय वैज्ञानिकों की भूमिका को भी भुलाया नहीं जा सकता। हमारे देश के वैज्ञानिकों ने स्वतन्त्रता आन्दोलन के समय स्वाभिमान और स्वावलम्बन के भाव का जागरण किया। इनके प्रयासों से पराभूत मानसिकता से ग्रस्त भारतीय समाज में विश्वास और आत्मगौरव का भाव उत्पन्न हुआ। हमारे देश में स्वाभिमान जगाने हेतु प्रख्यात वैज्ञानिक आचार्य प्रफुल्लचन्द्रराय का मद्रास में हिन्दू रसायन शास्त्र पर सन् 1918 में एक भाषण विचारणीय है जिसमें उन्होंने अपने देश के अवदान के बारे में गौरव बोध का आह्वान किया था। उनके शब्द थे “we are not ashamed of our ancient contributions to the science of chemistry. I am equally Proud of and not ashamed for all the branches of science that grew in ancient India”.



आचार्य प्रफुल्लचन्द्रराय

19 वीं शताब्दी के उत्तरार्द्ध तथा बीसवीं शताब्दी के काल खंड में महान् प्रतिभाशाली वैज्ञानिकों का आविर्भाव हुआ। आचार्य प्रफुल्लचन्द्रराय, प्रो. जगदीशचन्द्र बसु, सी. वी. रामन, सत्येन्द्रनाथ बोस, श्रीनिवास रामानुजम्, डा.मेघनाथ साहा, डा.बीरबल साहनी, डा.शान्तिस्वरूप भटनागर जैसे मूर्धन्य प्रतिभा सम्पन्न वैज्ञानिक हुए।



प्रो.जगदीशचन्द्र बसु

प्रो. जगदीश चन्द्र बसु भौतिकी में विद्युत तरंगों' तथा बनस्पति शास्त्र में 'पौधों के जीवन' की खोज करनेवाले प्रथम वैज्ञानिक थे। डॉ.वसु ने अध्यात्म और विज्ञान का सुन्दर समन्वय किया। डॉ.वासु ने विश्व को दिखलाया कि जड़-चेतन मे एक ही ब्रह्म का बास है। हमारे वैज्ञानिक आधुनिक ऋषि थे। डॉ. बसु ने अपने अन्वेषण को 'बहुजन हिताय बहुजन सुखाय' का लक्ष्य लेकर ही कार्य किया। प्रो. जगदीशचन्द्र बसु ने अपनी खोजों को पेन्टेट नहीं कराया। उनकी मान्यता थी कि मेरी खोज समाज की सम्पत्ति है, उस पर किसी का एकाधिकार उचित नहीं है। पश्चिम के चिंतन में वैज्ञानिक खोज व्यक्तिगत निजी सम्पत्ति मानी जाती रही है। डॉ.बोस के विचार उनके ऋषित्व का श्रेष्ठ उदाहरण है। स्वामी विवेकानन्द की मानस पुत्री निवेदिता तथा श्रीमती ओली कल ने डॉ.बसु की ओर से जबरदस्ती खोजों पर पेटेन्ट कराया


श्रीनिवास रामानुजम्

पर बसु ने उसका प्रयोग नहीं किया। जब डा.बसु की प्रेसीडेन्सी कालेज, कलकत्ता में भैतिकी के प्रोफेसर पद पर नियुक्ति हुई तब उनका वेतनमान अग्रेज प्राध्यापकों के समान नहीं था। अग्रेज लोग रंग-भेद करते थे। डा. बसु इतने स्वाभिमानी थे कि लगभग दो वर्ष तक वेतन नहीं लिया। आखिर अग्रेज सरकार को झुकना पड़ा। इस घटना से बंगाल के जन-मानस में स्वाभिमान और स्वतन्त्रता प्राप्ति की प्रबल इच्छा जाग्रत हो उठी।

ऐसे ही आधुनिक गणितज्ञों में श्रीनिवास रामानुजम् का नाम अत्यंत आदर से लिया जाता है। यूरोप ने भारत की प्रतिभा का लोहा माना। श्रीनिवास रामानुजम् ने विद्यार्थी काल मे पाश्चात्य गणितज्ञ लोनी द्वारा लिखित 'ट्रिग्नोमेट्री' के ग्रन्थों को आत्मसात किया और उनमें आवश्यक संशोधन भी किया। इस प्रकार गणित में उनकी प्रतिभा बेजोड़ थी। उस समय उनकी प्रसिद्धि से प्रत्येक भारतवासी अपने आपको गौरवान्वित समझने लगा।

श्री रामानुजम् की प्रतिभा के विश्व प्रसिद्ध गणितज्ञ प्रो. हार्डी भी कायल थे। श्री निवास रामानुजम् ने दुनिया को दिखाया कि प्राचीन भारत की गणित क्षेत्र में परम्परा अविच्छिन्न और निरतंर है। उनकी स्मरण शक्ति एवं संख्या का गणन असाधारण था। स्वर्ण बंगभूमि ने 2 अगस्त 1861 को महान् वैज्ञानिक संत आचार्य प्रफुल्लचन्द्र राय को जन्म दिया। डॉ. राय प्रखर वैज्ञानिक, समाज सेवी, स्वतन्त्रता सेनानी, स्वदेशी के प्रणेता, देशभक्त, आदर्श शिक्षक, सच्चे वैरागी थे। वे तत्कालीन भारत के प्रेरणा पुंज थे और आज भी हैं। वे एक संस्था थे। डॉ. पी.सी.राय जब विदेश में थे तब वहाँ प्रचलित था कि भारतीय रसायन विज्ञान को इतना ही जानते हैं कि जितना अंग्रेजों ने सिखाया है। डॉ.राय ने इस तथ्य न किया। उन्होंने अपने अन्वेषण एवं शोध परक लेखों द्वारा प्रमाणित किया कि भारत रसायन विज्ञान में यूरोप से आगे था। डॉ. राय ने 'रसेन्द्र संग्रह' पर शोध परक लेख लिखकर फ्रान्सीसी वैज्ञानिक बर्थेलोट को भेजा। बर्थेलोट ने लेख की प्रशंसा करते हुए उसे प्रकाशित कराया। डॉ. राय को पत्र लिखकर आग्रह किया कि हिन्दू रसायन विज्ञान के नाम से पुस्तक लिखें। 15 वर्षों के कठिन परिश्रम के अनुसंधान आधारित पुस्तक 'ए हिस्ट्री ऑफ हिन्दू केमिस्ट्री फ्रॉम दी अर्लियर टाइम्स टू दी सिक्सटीन्थ सेन्चुरी' सन् 1902 में प्रकाशित हुई। डॉ. राय ने पश्चिम के लोगों को बताया कि जब यूरोप के लोगों ने कपड़ा पहनना नहीं सीखा पशुओं की खाल लपेटे जंगलों में घूमा करते थे, तब भारत के लोग विभिन्न प्रकार के रसायनों का उत्पादन किया करते थे। हम लोगों को गर्व करना चाहिये और अनुसंधान क्षेत्र में आगे बढते रहना चाहिऐ।

डॉ. प्रफुल्लचन्द्र राय बचपन से दयालु हृदय के थे। समाज के सुख दुःख मे आगे बढ़कर सहायता करना, उनके स्वभाव में था। आपदा आने पर प्रयोगशाला छोड़कर जन सेवा को निकल पड़ते थे। 1922 का अकाल तथा 1923 में उत्तरी बंगाल में आई भयंकर बाढ़ के समय लोग बेघर हो गये और भूख से मरने लगे। ऐसे समय आचार्य पी.सी. राय ने बंगाल सहायता समिति का गठन करके 25 लाख रूपये एकत्रित कर आवश्यक सहायता पहुँचाई। बाबू सुभाषचन्द्र बोस ने उनके नेतृत्व में समाज सेवा में प्रवेश किया। डॉ. पी.सी.राय निस्पृह, निस्वार्थ समाज सेवक थे। डॉ. राय स्वभाषा के पक्षधर थे। उनका मत था कि विज्ञान की शिक्षा मातृभाषा में दी जानी चाहिऐ। बालक मातृभाषा से विज्ञान को शीघ्रआत्मसात कर सकता है। उन दिनों भारतीय भाषाओं में विज्ञान की पुस्तकें उपलब्ध नहीं थी। इस कमी को दूर करने के लिये वे स्वयं विज्ञान की पुस्तकें बंगाली में लिखने लगे। उनके शिष्यों में विश्व के

विख्यात वैज्ञानिक सत्येन्द्रनाथ बोस, मेघनाथ साहा आदि ने उनका अनुसरण कर मातृभाषा के अध्ययन पर जोर दिया। डॉ. राय का मानना था कि स्वभाषा बाल मन में देशभक्ति के पुष्प को पल्लवित करती है। अंग्रेजी दासता के समय स्वभाषा के आन्दोलन ने राष्ट्र भाव को पुष्ट किया। इस आन्दोलन मे आचार्य प्रफुल्लचन्द्र राय का महत्त्वपूर्ण योगदान था। भारत के सांस्कृतिक आन्दोलन के अग्रदूत स्वामी दयानन्द के स्वराज, स्वदेशी स्वभाषा उद्घोष को चरितार्थ कराने वाले डॉ. पी.सी.राय थे। डॉ. राय स्वदेशी उद्योग के समर्थक थे। उनका मानना था कि भारत को रासायनिक पदार्थों तथा औषधि को विदेशों से न मंगाकर देश में उत्पादन करना चाहिये। देश में उत्पादित औषधि बहुत कम कीमत पर सभी को उपलब्ध हो सकती है। देश में उद्योगों का स्वदेशीकरण करने से स्वावलम्बी भारत का निर्माण होगा। उनको कष्ट होता था कि मामूली दवाई विदेशों से मंहगी आयात होती थी और विदेशी व्यापारी जेबें भरकर भारत के धन को बाहर ले जाते हैं। डॉ. पी.सी.राय ने कुछ रसायन अपने घर पर बनाये, उनका रसायन चल निकला। डॉ. राय 'दी बंगाल केमिकल एण्ड फार्मास्यूटिकल वर्क्स' नाम से दवाई का उद्योग लगाने में सफल रहे। उन्होंने युवकों को प्रेरणा दी कि अंग्रेजों की नौकरी छोड़कर लघु उद्योग लगाओ। डॉ. पी.सी. राय ने सौदपुर में तेजाब का कारखाना, कलकत्ता पोट्री वर्क्स नाम से चीनी मिटटी के वर्तन बनाने का कारखाना, बंगाल एनेमल वर्क्स नाम से ताम्र चीनी का वर्तन बनाने का कारखाना आदि खुलवाने में महत्त्वपूर्ण भूमिका निभाई। डॉ. राय का कहना था कि 'विज्ञान प्रतीक्षा कर सकता पर स्वराज नहीं।' ऐसे कर्मयोगी डॉ. राय के चिन्तन में देश भक्ति, अध्यात्म और विज्ञान की त्रिवेणी का संगम दिखायी पड़ता है।

डॉ. राय भारत की ऋषि परम्परा के प्रतिनिधि थे। वे समर्पित देशभक्त थे। इनके प्रयासों से अपना देश पराभूत मानसिकता छोड़कर तकनीकी विकास में आगे बढ़ रहा है। अब मोहजाल छोड़ना होगा कि पश्चिम की तकनीकी से देश का विकास होगा। हमारे प्रतिभाशाली युवा वैज्ञानिक समझ गये कि दूसरे के सहारे कोई महान् नहीं बनता। प्रख्यात वैज्ञानिक सी.वी. रामन ने 1949 में प्रयाग के विज्ञान महाविद्यालय में दीक्षांत भाषण में विद्यार्थियों को संबोधित किया था। उन्होंने कहा था कि 'Boys when we import we not only pay for your ignorance but we also pay for our incompetence'.

आज वर्तमान भारत के युवा वैज्ञानिक डॉ. सी.वी. रामन के भाषण से प्रेरणा लेकर विज्ञान का स्वदेशीकरण कर रहे हैं। पराधीनता के काल में हमारे वैज्ञानिकों के किये गये कार्यों को इक्कीसवीं सदी का भारत मूर्तरूप दे रहा है। जहाँगीर होमी. जे. भाभा ने परमाणु विज्ञान की नींव डाली। भारत ने पोकरण में अणु विस्फोट का सफल प्रयोग करके विश्व को आश्चर्य चकित कर दिया। अब हम अन्तरिक्ष विज्ञान के क्षेत्र में अग्रणी देशों में आते हैं। पूर्व राष्ट्रपति ए.पी.जे. अब्दुल कलाम ने प्रक्षेपास्त्रों की श्रृंखला (नाग, आकाश, त्रिशूल, अग्नि-1-2) के द्वारा देश को अभेद्य कवच प्रदान किया। स्वातन्त्र्य- चेतना से आप्लावित हमारे सभी वैज्ञानिक निश्चय ही अब भी हमारी प्रेरणा का स्रोत हैं। उनकी दृष्टि की व्यापकता ने भारतीय जन-मानस को गहराई से प्रभावित किया। हमारे महान् वैज्ञानिकों ने केवल विज्ञान के क्षेत्र में ही अपना अद्वितीय योगदान नहीं दिया, अपितु दासत्व-बोध से मुक्ति के लिए जन-जन को प्रेरित किया। भाव, भाषा, विचार, भक्ति और साहित्य जब तक परतन्त्र रहेंगे तब तक कोई भी राष्ट्र उन्नति करके सर्वांगीण प्रगति और समृद्धि को प्राप्त नहीं कर सकता। इसीलिए हमारे सभी वैज्ञानिकों की दृष्टि का केन्द्र-बिन्दु था राष्ट्र का प्रत्येक कण, प्रत्येक जन, और प्रत्येक मन दासता के बोध और बोझ से मुक्त हो।

# ಸ್ವಾತಂತ್ರ್ಯ ಹೋರಾಟದಲ್ಲಿ ವರ್ಣಚಿತ್ರಕಾರರ ಪಾತ್ರ

– ಡಾ॥ ಲೋಕೇಶ್.ಟಿ.ಎನ್
ಶಿಕ್ಷಣ ವಿಭಾಗ ಮುಖ್ಯಸ್ಥರು
ಎನ್.ಎಂ.ಕೆ.ಆರ್.ವಿ. ಮಹಿಳಾ ಕಾಲೇಜು,
ಜಯನಗರ,



ಭಾರತದ ಸ್ವಾತಂತ್ರ್ಯ ಹೋರಾಟ ಅನನ್ಯ ಹಾಗೂ ಬಹುಮುಖವಾದದ್ದು. ದಾಸ್ಯದ ಸಂಕೋಲೆಯಿಂದ ತಾಯಿ ಭಾರತಿಯನ್ನು ಮುಕ್ತಗೊಳಿಸಲು ಸಮಾಜದ ಎಲ್ಲಾ ಸ್ತರಗಳ ಶ್ರೀಸಾಮಾನ್ಯನ ತ್ಯಾಗ ಮತ್ತು ಬಲಿದಾನಗಳು ಸದಾ ಸ್ಮರಣೀಯ ಹಾಗೂ ಪ್ರಸಕ್ತ ತಲೆಮಾರಿನ ಜನಾಂಗಕ್ಕೆ ಪ್ರೇರಣಾದಾಯಿ. ಸಮಾಜಕ್ಕಾಗಿ, ದೇಶಕ್ಕಾಗಿ ಬದುಕನ್ನು ಕಟ್ಟಿಕೊಳ್ಳುವ ಮನಸ್ಥಿತಿಯನ್ನು ಸದ್ಯದ ಜನಾಂಗದಲ್ಲಿ ಬೆಳೆಸುವ ನಿಟ್ಟಿನಲ್ಲಿ ಎಲ್ಲಾ ಹೋರಾಟಗಾರರ ಆತ್ಮಾರ್ಪಣೆ ನಮಗೆಲ್ಲ ನಿರಂತರ ದಾರಿದೀಪವಾಗಿದೆ.

ನಮಗೆಲ್ಲ ತಿಳಿದಿರುವಂತೆ ಭಾರತದ ಸ್ವಾತಂತ್ರ್ಯಕ್ಕಾಗಿ ಕ್ರಾಂತಿಕಾರಿಗಳು, ಮಂದಗಾಮಿಗಳು, ರೈತರು, ವಿದ್ಯಾರ್ಥಿಗಳು, ವಿಜ್ಞಾನಿಗಳು, ಸಾಹಿತಿಗಳು, ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು ಶ್ರಮವಹಿಸಿದ್ದಾರೆ. ಇವರೊಂದಿಗೆ ಸ್ವಾತಂತ್ರ್ಯದ ಜ್ವಾಲೆಯನ್ನು ದೇದೀಪ್ಯಮಾನವಾಗಿ ಪ್ರಕಾಶಿಸುವಂತೆ ಮಾಡಿ, ಸ್ವಾತಂತ್ರ್ಯ ಸಂಗ್ರಾಮದ ದಿಶೆಯನ್ನು ನಿಚ್ಚಳಗೊಳಿಸಿದ ಶ್ರೇಯಸ್ಸು ಭಾರತೀಯ ವರ್ಣಚಿತ್ರಕಾರರಿಗೆ ಸಲ್ಲುತ್ತದೆ. ವರ್ಣಚಿತ್ರಕಲೆಯ ಅಸ್ತಿತ್ವ ಭಾರತದಲ್ಲಿ ಅನಾದಿ ಕಾಲದಿಂದಲೂ ಇದ್ದು, ವಿವಿಧ ಉದ್ದೇಶಗಳಲ್ಲಿ ಇದರ ಬಳಕೆಯನ್ನು ಕಾಣಬಹುದಾಗಿದೆ. ಹಳ್ಳಿಗಾಡಿನ ಮಣ್ಣಿನ ಗೋಡೆಗಳ ಮೇಲೆ ಹಾಗೂ ದೇಗುಲಗಳ ಪ್ರಾಂಗಣದ ಗೋಡೆಗಳ ಮೇಲೆ ವರ್ಣಚಿತ್ರಗಳು ಇದ್ದುದ್ದು ಇತಿಹಾಸದಲ್ಲಿ ದಾಖಲಾಗಿದೆ. ಪುರಾತನ ಕಾಲದಿಂದಲೂ ಇಂತಹ ವರ್ಣಚಿತ್ರಗಳು ಭಾರತೀಯ ಶೈಲಿಯಲ್ಲಿ ಇದ್ದದ್ದು ಮಾತ್ರ ಸತ್ಯ. ತದನಂತರ ಹದಿನೆಂಟನೆಯ ಶತಮಾನದಲ್ಲಿ ಬ್ರಿಟಿಷರ ಆಗಮನದಿಂದ ಯುರೋಪಿಯನ್ನಿನ ಚಿತ್ರಕಲೆಯು ಸಹ ಭಾರತಕ್ಕೆ ಬಂದಂತಾಯಿತು. ಅದೇ ಬ್ರಿಟಿಷ್ ವಸಾಹಾತು ಶಾಹಿಯ 'ಕಂಪನಿ ವರ್ಣಚಿತ್ರ' ಎಂದು ಕರೆಯಲ್ಪಟ್ಟಿತ್ತು. ಈ ಕಾಲಘಟ್ಟದಲ್ಲಿದ್ದ ದೇಶಿ ವರ್ಣಚಿತ್ರಕಾರರು ಸೃಜಿಸಿದ ವರ್ಣಚಿತ್ರಗಳು ಒಂದರ್ಥದಲ್ಲಿ ಭಾರತೀಯ ಕಲೆಗೆ ಪಾಶ್ಚಿಮಾತ್ಯ ಕಲೆಯ ನುಸುಳುವಿಕೆಯನ್ನು ತಡೆದದ್ದು, ಆ ಮೂಲಕ ಭಾರತೀಯ ಕಲೆಯನ್ನು ಸಂರಕ್ಷಣೆ ಮಾಡಿದ್ದು, 'ಭಾರತೀಯ ಕಲೆಯ ಮೌನಕ್ರಾಂತಿ' ಎಂದೇ ಗುರುತಿಸಬಹುದಾಗಿದೆ. ಭಾರತೀಯ ಕಲೆಯಲ್ಲಾದ ಇಂತಹ ಕ್ರಾಂತಿಯಿಂದ ಉಂಟಾದ 'ಪರ್ಯಾಯ ಸಾಂಸ್ಕೃತಿಕತೆ' ಬ್ರಿಟಿಷರಿಗೆ ತಲೆನೋವಾಗಿ ಪರಿಣಮಿಸಿತ್ತು. ಇದೇ ಮುಂದೆ ರಾಷ್ಟ್ರೀಯತೆಗೆ ಭದ್ರ ಬುನಾದಿ ಒದಗಿಸಿದ್ದು. ಈ ಕಾಲಘಟ್ಟದ ದೇಶಿ ವರ್ಣಚಿತ್ರಗಳು ಅಂದಿನ ಸಮಾಜದಲ್ಲಿದ್ದ ಶಿಕ್ಷಣ ಪಡೆದ ವರ್ಗ ಮತ್ತು ಶಿಕ್ಷಣ ವಂಚಿತ ವರ್ಗದವರ ನಡುವಿನ ಅಂತರ ಕಡಿಮೆ ಮಾಡಿ ಏಕತೆ ಉಂಟುಮಾಡಿ ಪ್ರತಿಯೊಬ್ಬರನ್ನು ಬ್ರಿಟಿಷರ ವಿರುದ್ಧದ ಆಂದೋಲನದಲ್ಲಿ ತೊಡಗಿಸಿದ್ದು ಕಲೆಯ ಕ್ರಾಂತಿ ಅಲ್ಲದೇ ಮತ್ತೇನು?

ಭಾರತೀಯ ವರ್ಣಚಿತ್ರಕಾರರು ಸೃಜಿಸಿದ ವರ್ಣಚಿತ್ರಗಳಿಂದ ಆದ ಆಂದೋಲನ ರಾಷ್ಟ್ರೀಯ ಸ್ವರೂಪ ಪಡೆದುಕೊಂಡು ರಾಷ್ಟ್ರವ್ಯಾಪಿ ಆಂದೋಲನವಾಗಿ ಮೂಡಿದ್ದು, ಭಾರತೀಯರನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸಿ ರಾಷ್ಟ್ರಭಾವ ಜಾಗರಣಕ್ಕೆ ಅನುವು ಮಾಡಿಕೊಟ್ಟಿದ್ದು ಇತಿಹಾಸದ ಸ್ಮರಣೀಯ ಸಂಗತಿಗಳಲ್ಲಿ ಒಂದೆಂದು ಘಂಟಾಘೋಷವಾಗಿ ಹೇಳಬಹುದು. ಉತ್ಕೃಷ್ಟ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಗಳ ಉತ್ಥಾನಕ್ಕೆ ಭದ್ರ ಬುನಾದಿ ಹಾಕಿಕೊಟ್ಟ 'ಸ್ವದೇಶಿ ಕಲೆ' ಸ್ವಾತಂತ್ರ್ಯ ಹೋರಾಟದ ತೀವ್ರತೆಗೆ ನಾಂದಿ ಹಾಡಿದ್ದು ಈಗ ಇತಿಹಾಸ. ಅನನ್ಯ ಮತ್ತು ವಿಭಿನ್ನ ಆಯಾಮದ ಆಂದೋಲನವಾಗಿ ಅಂದಿನ ಕಾಲಘಟ್ಟದಲ್ಲಿ ವಸಾಹತು

ಶಾಹಿ ಭಾರತದಲ್ಲಿ 'ವರ್ಣಚಿತ್ರಕಲೆ'ಯ ಪುನರುತ್ಥಾನ ವಾಯಿತು ಎಂದರೆ ಅತಿಶಯೋಕ್ತಿಯಲ್ಲ.

ದೇಶಿ ವರ್ಣಚಿತ್ರ ಕಲೆಯ ಮೂಲಕ ಸಾಂಸ್ಕೃತಿಕ ಕ್ರಾಂತಿ ಮಾಡಿ ಸಮಸ್ತ ದೇಶವಾಸಿಗಳಲ್ಲಿ ರಾಷ್ಟ್ರೀಯ ಭಾವ ಜಾಗರಣೆ ಉಂಟುಮಾಡಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೊಸ ಆಯಾಮ ತಂದ ಶ್ರೇಯಸ್ಸಿಗೆ ಭಾಜನರಾದ ಸುಪ್ರಸಿದ್ಧ ವರ್ಣಚಿತ್ರಕಾರರೆಂದರೆ ರಾಜಾ ರವಿವರ್ಮ, ರವೀಂದ್ರನಾಥ ಠಾಗೋರ್, ಅವನೀಂದ್ರನಾಥ ಠಾಗೋರ್, ಗಗನೇಂದ್ರನಾಥ ಠಾಗೋರ್, ನಂದಲಾಲ್ ಬೋಸ್, ಅಸಿತಕುಮಾರ ಹಲ್ದಾರ, ಕ್ಷಿತಿನೀಂದ್ರ ಮುಜುಂದಾರ್, ಅಬ್ದುಲ್ ರೆಹಮಾನ್, ಚೌಗತಿ, ಸುಮನೇಂದ್ರನಾಥ ಗುಪ್ತ ಹಾಗೂ ಕರ್ನಾಟಕದ ಕೆ.ವೆಂಕಟಪ್ಪ.

### ರಾಜಾ ರವಿವರ್ಮ( 1848–1906)

ವರ್ಣಚಿತ್ರಕಲೆಯ ರಾಷ್ಟ್ರೀಯ ಪರಂಪರೆಯನ್ನು ಪುನರ್‌ಸ್ಥಾಪಿಸಿದ ಶ್ರೇಯಸ್ಸು ರಾಜಾ ರವಿವರ್ಮರಿಗೆ ಸಲ್ಲುತ್ತದೆ. ರಾಮಾಯಣ ಮತ್ತು ಮಹಾಭಾರತದ ಅನೇಕ ಪೌರಾಣಿಕ ಪ್ರಸಂಗಗಳನ್ನು ಚಿತ್ರಿಸಿದ ರೀತಿ ಅದ್ಭುತ ಹಾಗೂ ಭಾರತೀಯರ ಮನ–ಮನೆ ತಲುಪಿದ ರೀತಿ ಇಂದಿಗೂ ಅಚ್ಚರಿ ಉಂಟುಮಾಡುತ್ತದೆ. ಇವರ ಕುಂಚ ದಿಂದ ಸೃಜಿಸಲ್ಪಟ್ಟ ತೈಲವರ್ಣ ಚಿತ್ರಗಳು ಸಾಂಸ್ಕೃತಿಕವಾಗಿ ಭಾರತೀಯರನ್ನು ಒಂದುಗೂಡಿಸಿದ್ದು ಹಾಗೂ ರಾಷ್ಟ್ರೀಯ ಪೌರಾಣಿಕ ಏಕತೆ ತಂದದ್ದು, ಆ ಮೂಲಕ ಸ್ವಾತಂತ್ರ್ಯ ಹೋರಾಟವನ್ನು ಹೆಚ್ಚು ಆತ್ಮವಿಶ್ವಾಸದ ಹೋರಾಟ ವನ್ನಾಗಿ ಪರಿವರ್ತನೆಗೊಳಿಸಿದ್ದು ಅಕ್ಷರಶಃ ಸತ್ಯವೇ ಆಗಿದೆ.

ರಾಜಾ ರವಿವರ್ಮ ಚಿತ್ರಿಸಿದ ಜಟಾಯು ಸಂಹಾರ, ಶಾಕುಂತಲ, ಲಕ್ಷ್ಮೀ, ಭೀಷ್ಮ ಪ್ರತಿಜ್ಞೆ, ಕೃಷ್ಣ–ಯಶೋದ, ಗಂಗಾವತರಣ, ಅಹಲ್ಯೆ, ರಾಮನ ಪಟ್ಟಾಭಿಷೇಕ ಹೀಗೆ ಅಸಂಖ್ಯಾತ ವರ್ಣಚಿತ್ರಗಳು ಭಾರತೀಯರಿಗೆ ಮತ್ತೊಮ್ಮೆ ಪೌರಾಣಿಕ ಮಹಾಪುರುಷರನ್ನು ವರ್ಣಚಿತ್ರ ಕಲೆಯ ದೃಶ್ಯ ಮಾಧ್ಯಮದಲ್ಲಿ ನೋಡಿದ್ದು, ತಮ್ಮ ಸನಾತನ



ಜಟಾಯು ಸಂಹಾರ–ನಮ್ಮ ಪೌರಾಣಿಕ ಸಂಪತ್ತಿನತ್ತ ಗಮನಸೆಳೆಯುವ ಚಿತ್ರ

ಸಂಸ್ಕೃತಿ ಮತ್ತು ಪರಂಪರೆಯ ರಕ್ಷಣೆಗಾಗಿ ಪಣತೊಟ್ಟ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೀವ್ರತೆಯನ್ನು ಹೆಚ್ಚಿಸಿದ್ದು ಈಗ ಇತಿಹಾಸ. ರಾಜಾರವಿವರ್ಮರ ವರ್ಣಚಿತ್ರಗಳು ಕೇವಲ ಭಾರತದಲ್ಲಿ ಮಾತ್ರವಲ್ಲದೆ ವಿದೇಶದಲ್ಲೂ ಅತೀ ಬೇಡಿಕೆಯ ಕಲಾಕೃತಿಗಳಾಗಿದ್ದವು. ರಾಜಾ ರವಿವರ್ಮರ ಮೇರು ಸೃಜನಶೀಲತೆ ವಿದೇಶೀ ನೆಲದಲ್ಲೂ ಭಾರತೀಯ ಜೀವನಶೈಲಿಯನ್ನು ಅನಾವರಣ ಗೊಳಿಸಿತ್ತು. ಅಮೇರಿಕಾದ ಚಿಕಾಗೋದಲ್ಲಿ ನಡೆದ ವರ್ಣಚಿತ್ರ ಪ್ರದರ್ಶನಕ್ಕೆ ರಾಜಾ ರವಿವರ್ಮರ ಹತ್ತು ಕಲಾಕೃತಿಗಳನ್ನು ಬರೋಡದ ಮಹಾರಾಜರು ಕಳುಹಿಸಿ ಕೊಟ್ಟಿದ್ದರು. ಈ ಮೇರು ಕಲಾಕೃತಿಗಳಿಗೆ ಎರಡು ಪ್ರಶಸಿಗಳು ಲಭಿಸಿದ್ದವು. ಆಗ ಅಮೇರಿಕಾದಲ್ಲಿದ್ದ ಸ್ವಾಮಿ ವಿವೇಕಾನಂದರು ರಾಜಾ ರವಿವರ್ಮರ ತೈಲವರ್ಣ ಚಿತ್ರಗಳನ್ನು ನೋಡಿ ವಿಸ್ಮಯಕ್ಕೆ ಒಳಗಾಗಿದ್ದರು. ಇವುಗಳನ್ನು ಚಿತ್ರಿಸಿದ ಮಹಾಕಲಾಕಾರನನ್ನು ಭೇಟಿ ಮಾಡುವ ಇಂಗಿತ ವ್ಯಕ್ತಪಡಿಸಿದ್ದರು. ಸ್ವಾಮೀಜಿ ಭಾರತಕ್ಕೆ

ಮರಳಿ ಬಂದ ನಂತರ ಬೊಂಬಾಯಿಯ ರಾಜಾ ರವಿವರ್ಮರ ಮನೆಯಲ್ಲಿ ಒಂದು ದಿನ ತಂಗಿದ್ದು ಸಹ ಭಾರತೀಯ ಕಲಾಪ್ರೌಢಿಮೆಗೆ ತೋರಿದ ಗೌರವವೇ ಆಗಿದೆ.

## ಅವನೀಂದ್ರನಾಥ ಠಾಗೋರ್ (1871–1951)

ಅವನೀಂದ್ರನಾಥ ಠಾಗೋರ್‌ರವರು ಭಾರತೀಯ ಕಲೆಯಲ್ಲಿ ಸ್ವದೇಶಿ ಮೌಲ್ಯಗಳನ್ನು ಪ್ರತಿ ಪಾದಿಸಿದ ಬಂಗಾಳದ ಸುಪ್ರಸಿದ್ಧ ಕಲಾಕಾರರಾಗಿದ್ದರು. ಇವರು ರವೀಂದ್ರ ನಾಥ ಠಾಗೋರ್ ರವರ ಸೋದರ ಸಂಬಂಧಿ. ಭಾರತದ ರಾಷ್ಟ್ರೀಯ ಪರಂಪರೆಯನ್ನು ಚಿತ್ರಕಲೆಯ ಮೂಲಕ ಪುನರುಜ್ಜೀವನಗೊಳಿಸಿದ ಕೀರ್ತಿಗೆ ಭಾಜನರಾದವರು. ಇವರ ಅದ್ಭುತ ಕುಂಚದಿಂದ ಸೃಷ್ಟಿಯಾದ 'ಭಾರತ ಮಾತಾ', 'ನನ್ನ ತಾಯಿ', 'ಫೇರಿಲ್ಯಾಂಡ್ ವಿವರಣೆ', 'ಜರ್ನಿಸ್ ಎಂಡ್' ಕಲಾಕೃತಿಗಳು ಅಂದಿನ ಕಾಲಘಟ್ಟ ದಲ್ಲಿದ್ದ ಸರ್ವರನ್ನು ರಾಷ್ಟ್ರೀಯತೆಯ ಪ್ರವಾಹಕ್ಕೆ ತರಲು ಸಹಕಾರಿಯಾಯಿತು. ತತ್ಪರಿಣಾಮ ಭಾರತೀಯರ ಮನದಲ್ಲಿ ರಾಷ್ಟ್ರೀಯ ಭಾವಜಾಗರಣ ಉಂಟಾಗಿ ಸ್ವಾತಂತ್ರ್ಯ ಸಂಗ್ರಾಮದ ಹುಮ್ಮಸ್ಸು ತೀವ್ರವಾಯಿತು.



ಭಾರತಮಾತಾ

## ನಂದಲಾಲ್ ಬೋಸ್ (1882–1966)

ನಂದಲಾಲ್ ಬೋಸ್ 'ಭಾರತೀಯ ಶೈಲಿ'ಯ ಕಲಾಕೃತಿ ಗಳನ್ನು ರಚಿಸಿದ ಸುಪ್ರಸಿದ್ಧ ಕಲಾಕಾರರು. ಇವರು ಅವನೀಂದ್ರನಾಥ ಠಾಗೋರ್‌ರವರ ಶಿಷ್ಯ



ಬ್ರಿಟಿಷರ ಅಮಾನವೀಯತೆಯ ದರ್ಶನ

ರಾಗಿದ್ದರು. ಅಜಂತದ ಭಿತ್ತಿಚಿತ್ರಗಳಿಂದ ಪ್ರಭಾವಿತರಾಗಿದ್ದ ನಂದಲಾಲ್ ಬೋಸ್‌ರವರು ಸೃಜಿಸಿದ ಶ್ರೇಷ್ಠ ಚಿತ್ರಗಳು ಭಾರತೀಯ ಪುರಾಣ, ಮಹಿಳೆಯರು ಮತ್ತು ಹಳ್ಳಿಯ ಜೀವನದ ದೃಶ್ಯಗಳನ್ನು ಒಳಗೊಂಡಿದ್ದು, ಅಂದಿನ ಸಮಾಜದ ಎಲ್ಲ ಸ್ತರದ ಜನರನ್ನು ರಾಷ್ಟ್ರೀಯ ವಿಚಾರಧಾರೆಗೆ ತಂದದ್ದು ಸೋಜಿಗವೇ ಸರಿ.

1930ರಲ್ಲಿ ಬ್ರಿಟಿಷರು ಉಪ್ಪಿನ ಮೇಲೆ ವಿಧಿಸಿದ್ದ ತೆರಿಗೆಯನ್ನು ಪ್ರತಿಭಟಿಸಿ ಗಾಂಧೀಜಿ ಬಂಧನಕ್ಕೆ ಒಳಗಾಗಿದ್ದರು. ಆಗ ನಂದಲಾಲ್ ಬೋಸ್‌ರವರು ಊರುಗೋಲು ಹಿಡಿದು ನಡೆಯುತ್ತಿರುವ ಬಾಪೂಜಿಯವರ ಕಪ್ಪು–ಬಿಳುಪಿನ ಲಿನೋಕಟ್ ಮುದ್ರಣದ ಮೇಲೆ ಚಿತ್ರಿಸಿದ ವರ್ಣಚಿತ್ರ ಅಹಿಂಸಾ ಚಳುವಳಿಯ ಪ್ರತಿರೂಪವಾಯಿತು. ಗಾಂಧೀಜಿ ಬಿಡುಗಡೆಗೆ ಇದೊಂದು ಪ್ರಬಲ ಅಸ್ತ್ರವಾಯಿತು. ಇದೇ ವರ್ಣಚಿತ್ರ ಗಾಂಧೀಜಿ ಹಾಗೂ ಅಹಿಂಸಾ ಹೋರಾಟಗಾರರಿಗೆ ಆಸರೆಯಾದದ್ದು ಅನೇಕರಿಗೆ ತಿಳಿಯಲಾರದ ಸತ್ಯವೇ ಆಗಿತ್ತು. ಭಾರತ ಸ್ವಾತಂತ್ರ್ಯಾನಂತರದಲ್ಲಿ 'ಭಾರತರತ್ನ',



ಅಪ್ರತಿಮ ಹೋರಾಟಗಾರ

'ಪದ್ಮಶ್ರೀ' ಸೇರಿದಂತೆ ಭಾರತ ಸರ್ಕಾರದ ಲಾಂಛನಗಳನ್ನು ಚಿತ್ರಿಸಿದ ಕೀರ್ತಿ ನಂದಲಾಲ್‌ಬೋಸ್ ಅವರಿಗೆ ಸಲ್ಲುತ್ತದೆ. 1938ರಲ್ಲಿ ನಡೆದ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರ ಇಚ್ಛೆಯಂತೆ ಏಳು ವರ್ಣಚಿತ್ರಗಳನ್ನು ಸೃಜಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಶೆಯನ್ನು ನೀಡಿದ ಶ್ರೇಯಸ್ಸು ನಂದಲಾಲ್ ಬೋಸ್‌ರಿಗೆ ಸಲ್ಲುತ್ತದೆ. ತಮ್ಮ ಜೀವಿತದಲ್ಲಿ ಧೀಮಂತ ಕಲಾಶಿಷ್ಯರನ್ನು ಸೃಜಿಸಿದ ಮಹಾನ್ ಚಿತ್ರಕಾರ ನಂದಲಾಲ್ ಬೋಸ್. ಬೆನಾಡೆ ಬಿಹಾರಿ ಮುಖರ್ಜಿ, ರಾಮ್ ಕಿಂಕರ್ ಬೈಜ್, ರಾಮಮನೋಹರ ಸಿನ್ಹಾ, ಪ್ರತಿಮಾ ಠಾಕೂರ್, ಸತ್ಯಜಿತ್‌ರೇ, ದಿನಕರ ಕೌಶಿಕ್ ಮತ್ತು ಕೊಂಡಪಲ್ಲಿ ಶೇಷಗಿರಿರಾವ್ ಇವರ ಶಿಷ್ಯವರ್ಗದಲ್ಲಿನ ಪ್ರಮುಖರು.

## ಜೈನುಲ್ ಅಬೇದಿನ್(1917–1976)



ಶಿಲ್ಪಾಚಾರ್ಯ ಜೈನುಲ್ ಅಬೇದಿನ್ ಬಂಗಾಳದ ಪ್ರಸಿದ್ಧ ವರ್ಣಚಿತ್ರಕಾರರಲ್ಲಿ ಒಬ್ಬರು. ಇವರು ಅಂದಿನ ಬ್ರಿಟಿಷ್ ರಾಜ್‌ನಲ್ಲಿ ಭಾರತದ ನಿರ್ದಯ ಚಿತ್ರಗಳನ್ನು ಸೃಜಿಸಿದವರಲ್ಲಿ ಅಗ್ರಗಣ್ಯರು.

ಸ್ತ್ರೀಸಂವೇದನೆ, ಸ್ತ್ರೀಯರ ಅಮಾನುಷ ಬದುಕು, ರಸ್ತೆಬದಿಯ ಅಸ್ಥಿಪಂಜರ, ಮಾನವನ ಸಂಘರ್ಷ ಮತ್ತು ಸಂಕಟಗಳನ್ನು ಚಿತ್ರಿಸಿದ ರೀತಿ ಅದ್ಭುತವಾಗಿತ್ತು. ಇಂತಹ ಕಲಾಕೃತಿಗಳು ಸಮಾಜದಲ್ಲಿ ಜಾಗೃತಿ ಮೂಡಿಸಲು ನೆರವಾಗಿ, ಬ್ರಿಟಿಷ್ ಆಧಿಪತ್ಯದ ವಿರುದ್ಧ ಜನಸಾಮಾನ್ಯರು ತಿರುಗಿ ಬೀಳುವಂತಾಯಿತು.

## ಅಮೃತಾ ಶೇರ್ಗಿಲ್ (1913–1941)

ಅಮೃತಾ ಶೇರ್ಗಿಲ್ ಆಧುನಿಕ ಭಾರತೀಯ ಕಲೆಯ



ಪ್ರಮುಖ ಪ್ರವರ್ತಕರಾಗಿದ್ದರು. ಬಂಗಾಳದ ಕಲೆಯ ಪರಂಪರೆಯ ಪುನರುಜ್ಜೀವನದ ಆದ್ಯ ಪ್ರವರ್ತಕರಾಗಿದ್ದ ಇವರು ಸೃಜಿಸಿದ ವರ್ಣಚಿತ್ರಗಳು ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ನೀಡಿದ್ದವು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟದಲ್ಲಿದ್ದ ನೂರಾರು ವರ್ಣಚಿತ್ರಕಾರರು ಭಾರತೀಯರ ಸಂವೇದನೆಗಳಿಗೆ ಸ್ಪಂದಿಸಿದ ರೀತಿ ಅದ್ಭುತ. ಭಾರತೀಯರಲ್ಲಿ ರಾಷ್ಟ್ರದ ಬಗ್ಗೆ ಸದುದ್ದೇಶ ಭಾವನೆಗಳು ಪುಟಿದೇಳುವಂತೆ ಮಾಡಿ, ರಾಷ್ಟ್ರಭಾವದ ಜಾಗರಣದ ಬೀಜವನ್ನು ಪೋಷಿಸಿ, ಹೆಮ್ಮರವಾಗಿ ಬೆಳೆಯಲು ಕಾರಣಕರ್ತರಾದ ವರ್ಣಚಿತ್ರಕಾರರ ಕುಂಚಕ್ಕೆ ಇಡೀ ರಾಷ್ಟ್ರವೇ ಋಣಿಯಾಗಿರಬೇಕು. ಸಾಂಸ್ಕೃತಿಕ ಅನನ್ಯತೆಯ ತಾದಾತ್ಮ್ಯ, ದೇಶಭಕ್ತಿ, ರಾಷ್ಟ್ರೀಯತೆಯ ಅಂಕುರಕ್ಕೆ ಮುನ್ನುಡಿ ಬರೆದದ್ದು ವರ್ಣಚಿತ್ರಕಾರರೆಂದರೆ ಅತಿಶಯೋಕ್ತಿಯಲ್ಲ. ಅಂದಿನ ಕಾಲಘಟ್ಟದಲ್ಲಿದ್ದ ವರ್ಣಚಿತ್ರಕಾರರ ಕುಂಚದಿಂದ ಮೂಡಿದ್ದ ವೈವಿಧ್ಯಮಯ ಚಿತ್ರಗಳಿಗೆ ಭಾಷೆ, ಪ್ರಾದೇಶಿಕತೆಯ ಮಿತಿ ಇರಲಿಲ್ಲ. ಸಮಾಜದ ಸಂಕುಚಿತತೆಯ ಎಲ್ಲಾ ಮಿತಿಗಳನ್ನು ಮೀರಿ ರಾಷ್ಟ್ರಕ್ಕಾಗಿ ಹುತಾತ್ಮರಾಗ ಬಯಸಿದ ಕೆಚ್ಚೆದೆಯ ಹೋರಾಟಗಾರರನ್ನು ಭಾರತಮಾತೆಯ ಪಾದಾರವಿಂದಗಳಿಗೆ ಸಮರ್ಪಿಸಿ, ತಾಯಿ ಭಾರತಿಯನ್ನು ದಾಸ್ಯದ ಸಂಕೋಲೆಯಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದ ರೀತಿ ಸ್ಮರಣೀಯ.

# ಕರ್ನಾಟಕ ಏಕೀಕರಣದ ಕಥೆ


– ಜೆ.ಎಂ. ಜೋಶಿ
ಖಜಾಂಚಿಗಳು
ಕ.ರಾ.ಮ.ಶಿ.ಸಂ.




ಸ್ವಾತಂತ್ರ್ಯದ ಅಮೃತೋತ್ಸವದ ಆಚರಣೆಯ ಶುಭ ಸಂದರ್ಭದಲ್ಲಿ, ಈ ನವೆಂಬರ್ ತಿಂಗಳಿನಲ್ಲಿ ನಾವು ನೆನಪು ಮಾಡಿಕೊಳ್ಳಲೇಬೇಕಾದ ಮತ್ತೊಂದು ಐತಿಹಾಸಿಕ ಮಹತ್ವದ ಸಂಗತಿಯೆಂದರೆ ಕರ್ನಾಟಕದ ಏಕೀಕರಣ. ಹಲವು ಭಾಷೆಗಳನ್ನು ಹೊಂದಿರುವ ನಮ್ಮ ದೇಶಕ್ಕೆ ಸ್ವರಾಜ್ಯವೆಂಬುದು ಎಷ್ಟು ಮುಖ್ಯವೋ ಅಷ್ಟೇ ಪ್ರಾಮುಖ್ಯವನ್ನು ಭಾಷಾವಾರು ಪ್ರಾಂತ್ಯಗಳಲ್ಲಿನ ಆಂತರಿಕ ಐಕ್ಯತೆಗಾಗಿ ನೀಡುವುದು ಕೂಡ ಅಗತ್ಯವಾದ ಅಂಶವಾಗಿದೆ. ಅಂತೆಯೇ ನಮ್ಮ ಕರ್ನಾಟಕದ ರಾಜ್ಯೋತ್ಸವದ ಆಚರಣೆಯ ಹಿನ್ನೆಲೆಯನ್ನು, ಅಂದರೆ ಏಕೀಕರಣದ ಮುಖ್ಯ ಘಟನೆಗಳನ್ನು, ಅವುಗಳ ಹಿಂದಿರುವ ಕಾರಣಕರ್ತರನ್ನು ಸ್ಮರಿಸದಿದ್ದರೆ ಅವೆಲ್ಲವೂ ಮುಂದಿನ ಪೀಳಿಗೆಗೆ ಅಪರಿಚಿತವಾಗಿಯೇ ಉಳಿದುಹೋಗಿಬಿಡುತ್ತವೆ. ಸ್ವಾತಂತ್ರ್ಯ ಹೋರಾಟಗಾರರಿಗೆ ನಮಿಸುವಂತೆಯೇ ಈ ವೀರ, ಧೀರ ವ್ಯಕ್ತಿಗಳಿಗೂ ನಮ್ಮ ವಿಶೇಷ ನಮನವನ್ನು ಅರ್ಪಿಸಲೇಬೇಕು. ಆ ಕಾರಣಕ್ಕಾಗಿ ಪ್ರಸ್ತುತ ಲೇಖನ.



ಕ್ರಿ.ಶ.ಒಂಭತ್ತನೇ ಶತಮಾನದ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲದಲ್ಲಿ ರಚಿತವಾದ ಶ್ರೀ ವಿಜಯನ 'ಕವಿರಾಜ ಮಾರ್ಗ'ದಲ್ಲಿ 'ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್' ಎಂದು ನಾಡಿನ ಗಡಿಗಳನ್ನು ಉಲ್ಲೇಖಿಸಲಾಗಿದೆ. ಆದರೆ ಕಾಲಾಂತರದಲ್ಲಿ ನಾಡು ರಾಜಕೀಯ ಏಳುಬೀಳುಗಳ ಕಾರಣದಿಂದಲೂ, ವಿದೇಶೀಯರ ದುರಾಡಳಿತದ ಫಲವಾಗಿಯೂ ಹರಿದು ಹಂಚಿಹೋಯಿತು. ಮುಂಬಯಿ, ಮದರಾಸು, ಕೊಡಗು ಪ್ರಾಂತಗಳಲ್ಲಿನ ಅನೇಕ ಪ್ರದೇಶಗಳಲ್ಲಿ ಸಾವಿರಾರು ಕನ್ನಡಿಗರು ಅತಂತ್ರರಾಗಿ ನೆಲೆಸುವಂತಾಗಿಬಿಟ್ಟಿತು. ಸಹಜವಾಗಿಯೇ ಅವರೆಲ್ಲರೂ ಸ್ಥಳೀಯ ಭಾಷೆಗಳ ಪ್ರಭಾವಕ್ಕೆ ಒಳಗಾಗುವಂತಾಗಿತ್ತು. ಅವರೆಲ್ಲರನ್ನು ತಾಯ್ನಾಡಿಗೆ ಬರಮಾಡಿಕೊಳ್ಳುವುದು ಅಗತ್ಯವಾಗಿತ್ತು. ಅದಕ್ಕಾಗಿ ಅಲ್ಲಿನ ಎಲ್ಲ ವಿಭಾಗಗಳ ಆಡಳಿತಗಾರರ ಮನವೊಲಿಸುವ ಕಠಿಣ ಕಾರ್ಯ ಆ ಉದ್ದೇಶದಿಂದ ರಚಿತವಾದ ಸಮಿತಿಯಾದ ಕರ್ನಾಟಕ ಏಕೀಕರಣದ ಮುಂದಾಳುಗಳಿಗೆ ಇತ್ತೇ ಹೊರತು ಕೇಂದ್ರ ಸರ್ಕಾರದಲ್ಲಿರುವವರಿಗೆ ಇರಲಿಲ್ಲ. ಹಾಗಾಗಿ ಏಕೀಕರಣದ ಕಾರ್ಯವು ವಿಳಂಬವಾಗುತ್ತಲೇ ಹೋಗಿತ್ತು. ಸುಮಾರು ಇಪ್ಪತ್ತಕ್ಕೂ ಹೆಚ್ಚು ಆಡಳಿತಗಳಲ್ಲಿ ವಿಲೀನವಾಗಿದ್ದ ಕನ್ನಡ ನಾಡನ್ನು ಒಂದು ಮಾಡುವುದೇನೂ ಸುಲಭದ ಕೆಲಸವಾಗಿರಲಿಲ್ಲ. ಮೊದಲಿಗೆ ಸಾರ್ವಜನಿಕ ವಲಯದ ಎಲ್ಲ ಕ್ಷೇತ್ರಗಳ ಜನರಲ್ಲಿ ಇದರ ಅರಿವನ್ನು ಮೂಡಿಸುವದರಿಂದ ಚಟುವಟಿಕೆಗಳನ್ನು ಆರಂಭಿಸಲಾಗಿತ್ತು. ಈ ನಿಟ್ಟಿನಲ್ಲಿ ವಿಶೇಷವಾಗಿ ಸಾಹಿತಿಗಳು, ಪತ್ರಿಕೆಗಳು ನಡೆಸಿದ ಜಾಗೃತಿ ಕಾರ್ಯಗಳು ಅನನ್ಯವೆನಿಸಿದುವು. ನಾಡಿನ ಮೂಲೆಮೂಲೆಗಳಲ್ಲಿ ಜನಾಂದೋಲನ ನಡೆಸಲಾಯಿತು.






ಸಾರ್ವಜನಿಕರ ಪ್ರತಿಕ್ರಿಯೆ ಮತ್ತು ಸಹಕಾರವಂತೂ ಈ ಕಾರ್ಯಕ್ಕೆ ಅಪರಿಮಿತವಾಗಿ ದೊರಕಿತ್ತು.

ಮೊದಲಿಗೆ ನೆನಪು ಮಾಡಿಕೊಳ್ಳಬೇಕಾದದ್ದು 'ಕನ್ನಡ ಕುಲಪುರೋಹಿತ'ರೆಂದೇ ಹೆಸರಾದ ಆಲೂರು ವೆಂಕಟರಾಯರು. 'ಕನ್ನಡದ ಕುಲ ಒಂದು, ಜನ ಒಂದು, ನುಡಿ ಒಂದು' ಎಂಬ ಅವರ ಘೋಷವಾಕ್ಯ ಎಲ್ಲರಲ್ಲಿ ನಾಡಿನ ಪ್ರೇಮವನ್ನು, ಭಾಷೆಯ ಕಾಳಜಿಯನ್ನು ತುಂಬುತ್ತಿತ್ತು. ಖ್ಯಾತ ಕಾದಂಬರಿಕಾರ ಅ.ನ.ಕೃಷ್ಣರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರರು, ಖಾದ್ರಿ ಶಾಮಣ್ಣ, ಕೆ.ಶಿವರಾಮ ಕಾರಂತ, ಕಯ್ಯಾರ ಕಿಞ್ಞಣ್ಣರೈ, ಪಾಟೀಲ ಪುಟ್ಟಪ್ಪ, ಬೆನಗಲ್ ರಾಮರಾಯರು, ಗಳಗನಾಥರು, ಅದರಗುಂಚಿ ಶಂಕರಗೌಡ ಪಾಟೀಲರು, ಮೊಹರೆ ಹಣಮಂತರಾಯರು, ಶಾಂತಕವಿಗಳು, ಹುಯಿಲುಗೋಳ ನಾರಾಯಣರಾಯರು, ಹೀಗೆ ನಾಡಿನ ಎಲ್ಲ ಭಾಗಗಳಿಂದ ಸರಸ್ವತೀಪುತ್ರರ ದಂಡು ಒಕ್ಕೊರಲಿನಲ್ಲಿ ಏಕೀಕರಣಕ್ಕಾಗಿ ದನಿಗೂಡಿಸಿತು. "ಬೆಂಕಿ ಬಿದ್ದಿದೆ ಮನೆಗೆ ಓ ಬೇಗನೇ ಬನ್ನಿ! ಎಲ್ಲರೂ ಎದ್ದೆದ್ದು ಓಡಿ ಬನ್ನಿ! ಕನ್ನಡದ ಗಡಿ ಕಾಯೇ ನುಡಿ ಕಾಯೇ, ಕಾಯಲಾರೆನೇ ಸಾಯೇ। ಓ ಬನ್ನಿ ಬನ್ನಿ" ಎಂಬ ಕವಿಯು ಮನದಾಳದ ನುಡಿಗಳು, ಜನರ ಜಡತೆಯನ್ನು ಬಡಿದೋಡಿಸಿತ್ತು. ಒಟ್ಟಾರೆ ಏಕೀಕರಣದ ಹೋರಾಟ ಪ್ರಬಲವಾಗಲು ಈಗಿನ



ಉತ್ತರ ಕರ್ನಾಟಕದ ಧಾರವಾಡವೇ ಮುಖ್ಯ ಕ್ರಿಯಾಕೇಂದ್ರವಾಗಿತ್ತು. 1890ರಲ್ಲಿ ಸ್ಥಾಪನೆಯಾದ ಕರ್ನಾಟಕ ವಿದ್ಯಾವರ್ಧಕ ಸಂಘ ತಾಯಿಯೆನಿಸಿದರೆ ನಂತರದಲ್ಲಿ ಹಲವಾರು ಕಡೆಗಳಲ್ಲಿ ಹಲವು ಸಂಘಟನೆಗಳು ತಲೆಯೆತ್ತಿದುವು. ಹೈದರಾಬಾದ್ ಕರ್ನಾಟಕದಿಂದ, ಕಾರವಾರ, ಮಂಗಳೂರುಗಳಿಂದ, ಕೋಲಾರ, ಬೆಂಗಳೂರು, ಮೈಸೂರು, ದಾವಣಗೆರೆ, ಶಿವಮೊಗ್ಗ, ಬೆಳಗಾವಿ ಹೀಗೆ ಎಲ್ಲ ಪ್ರದೇಶಗಳಿಂದಲೂ ಕನ್ನಡ ಮನಗಳು ಹೋರಾಟದಲ್ಲಿ ಪಾಲ್ಗೊಂಡವು.

ಈ ಸಮಯದಲ್ಲಿ ಅ.ನ.ಕೃಷ್ಣರಾಯರು ಹಳ್ಳಿಗಳಿಗೂ ಹೋಗಿ ಮಾಡುತ್ತಿದ್ದ ಭಾಷಣಗಳು ಯಾರೂ ಮರೆಯುವಂತಿರಲಿಲ್ಲ. ಹುಬ್ಬಳ್ಳಿಯಲ್ಲಿ ತಲೆಯೆತ್ತಿದ್ದ 'ಸಂಯುಕ್ತ ಕರ್ನಾಟಕ'ವೆಂಬ ಪತ್ರಿಕೆ ಮಾಡಿದ ಕೆಲಸ ಅದ್ಭುತವಾದ ಜನಪ್ರತಿಕ್ರಿಯೆಯನ್ನು ಪಡೆದುಕೊಳ್ಳುತ್ತಿತ್ತು. ಕನ್ನಡದ ಜನರಿಗಾಗಿಯೇ ಒಂದು ನಾಡು ಕಟ್ಟಬೇಕೆಂಬ ಆಲೂರರ ಸಂಕಲ್ಪ, ಅವರಲ್ಲಿದ್ದ ಬದ್ಧತೆ, ಪ್ರಾಮಾಣಿಕತೆ ಜನರಲ್ಲಿ ಅಗಾಧ ಶಕ್ತಿಯನ್ನು ತುಂಬುತ್ತಿತ್ತು. ಕರ್ನಾಟಕವನ್ನು ರಾಜಕೀಯವಾಗಿ ಒಂದುಗೂಡಿಸಲು ಏಕೀಕರಣ ಸಮಿತಿ ರಚಿಸಿದ ಆಲೂರರು ಕರ್ನಾಟಕದ ಗತವೈಭವವನ್ನು ಜನರ ಮುಂದಿಡುವುದರೊಂದಿಗೆ, ತಮ್ಮ ಸರ್ವ ಸಂಪತ್ತನ್ನೆಲ್ಲ

ಕನ್ನಡ–ಕರ್ನಾಟಕದ ಹಿತಕ್ಕೆ ಬಳಸಿದರು.

ಎಲ್ಲಕ್ಕಿಂತ ಕರ್ನಾಟಕದ ಸಂಸ್ಕೃತಿ ಯ ವೈವಿಧ್ಯತೆಯನ್ನು ಕಾಪಾಡಿಕೊಂಡೇ ಕನ್ನಡ ನಾಡನ್ನು ಒಗ್ಗೂಡಿಸುವ ಅವರ ಸಂಕಲ್ಪಶಕ್ತಿಯನ್ನು ಕಂಡೇ ಎಲ್ಲರೂ ಅಂದಿಗೂ, ಇಂದಿಗೂ ಅವರನ್ನು 'ಕನ್ನಡ ಕುಲ ಪುರೋಹಿತರು' ಎಂದು ಗೌರವಿಸುತ್ತಿರುವುದು.

1915 ರಿಂದ 1955ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಒಟ್ಟು 38 ಸಾಹಿತ್ಯ ಸಮ್ಮೇಳನಗಳನ್ನು ದೇಶದ ಬೇರೆ ಬೇರೆ ಭಾಗಗಳಲ್ಲಿ ಸಂಘಟಿಸಿತ್ತು. ಇವುಗಳಲ್ಲಿ ಹನ್ನೊಂದು ಸಮ್ಮೇಳನಗಳು ಹಳೇ ಮೈಸೂರಿನ ಭಾಗದಲ್ಲಿ, ಹದಿಮೂರು ಮುಂಬೈ ಕರ್ನಾಟಕ ಭಾಗದಲ್ಲಿ, ಐದು ಮದರಾಸು ಪ್ರಾಂತದ ಪ್ರದೇಶದಲ್ಲಿ, ನಾಲ್ಕು ಹೈದರಾಬಾದ್ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದ ಈಗಿನ ಕಲ್ಬುರ್ಗಿ ವಿಭಾಗದಲ್ಲಿ ನಡೆದಿದ್ದುವು. ಕೊಡಗಿನಲ್ಲಿ ಒಂದು, ಮುಂಬೈಯಲ್ಲಿ ಎರಡು, ಮದರಾಸಿನಲ್ಲಿ ಮತ್ತು ಹೈದರಾಬಾದಿನಲ್ಲಿ ಒಂದೊಂದು ಸಾಹಿತ್ಯ ಸಮ್ಮೇಳನಗಳು ನಡೆದಿದ್ದುವು. ಈ ರೀತಿಯಲ್ಲಿ ಇವೆಲ್ಲವೂ ಕರ್ನಾಟಕ ಏಕೀಕರಣದ ಅಗತ್ಯವನ್ನು ಪ್ರತಿಪಾದಿಸಿದ್ದುವು. ಸಮ್ಮೇಳನಗಳಲ್ಲಿ ಕನ್ನಡನಾಡಿನ ಭವ್ಯ ಇತಿಹಾಸವನ್ನು, ವಿಶಾಲ ಗಡಿಯನ್ನು ಹೊಂದಿ ಮೆರೆದಿದ್ದ ಸಮಗ್ರ ವೈಭವವನ್ನು ಜನರ ಮುಂದೆ ತೆರೆದಿಡುವ ಪ್ರಯತ್ನವು ಸಾಹಿತಿಗಳಿಂದ ಅವ್ಯಾಹತವಾಗಿ ನಡೆದಿತ್ತು. ಈ ಎಲ್ಲ ಕಾರ್ಯಗಳಲ್ಲಿ ಹತ್ತಾರು ಸಂಘ–ಸಂಸ್ಥೆಗಳ ಪಾತ್ರವೂ ಹಿರಿದಾಗಿಯೇ ಇತ್ತು.

ಇವುಗಳೊಂದಿಗೆ ಕೈ ಜೋಡಿಸಿದವರಲ್ಲಿ ಮಹಿಳೆಯರೇನೂ ಹಿಂದೆ ಬೀಳಲಿಲ್ಲ. ಏಕೀಕರಣದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ಉತ್ತರ ಕರ್ನಾಟಕವು ಈ ವಿಷಯದಲ್ಲಿಯೂ ಮುಂದಾಗಿಯೇ ಇತ್ತು. ಬಳ್ಳಾರಿ ಸಿದ್ದಮ್ಮನ ಹೆಸರು ಇಲ್ಲಿ ಮುಂಚೂಣಿಯಲ್ಲಿ ಕಂಡು ಬರುತ್ತದೆ. ಮಹಿಳೆಯರೂ ಈ ಹೋರಾಟದಲ್ಲಿ ಪಾಲ್ಗೊಳ್ಳಬೇಕೆಂದು ಆಲೂರರು ನೀಡಿದ್ದ ಕರೆ ಎಲ್ಲರನ್ನು ಸೆಳೆದುಕೊಂಡಿತ್ತು. ಅದುವರೆಗಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಹೆಣ್ಣುಮಕ್ಕಳು ಭಾಗವಹಿಸಿದ್ದರೂ ಸಂಪ್ರದಾಯದ ಬಿಗಿಬಂಧದ ಕಾರಣದಿಂದ ಹಲವು ಕಡೆಗಳಲ್ಲಿ ಅವರು ಮನೆಬಿಟ್ಟು ಹೊರಬರಲಾಗದಂತೆ ಅಲಿಖಿತ ನಿಯಮ ತಡೆಹಿಡಿದಿತ್ತು. ಆದರೆ ಹೋರಾಟದ ಮಹತ್ವದ ಅರಿವಾಗುತ್ತಿದ್ದಂತೆ ಅನೇಕ ಕಡೆಗಳಲ್ಲಿ ಮನೆಯ ಗಂಡಸರೇ ತಮ್ಮ ಮನೆಯ ಹೆಂಗಸರನ್ನು ಹೊರಗೆ ಕರೆತಂದು ಹೋರಾಟದಲ್ಲಿ ತೊಡಗಿಸಿಕೊಂಡಿದ್ದರು.

ಕರ್ನಾಟಕದ ಏಕೀಕರಣವಾಗದಿದ್ದರೆ ಏನೇನು ಸಮಸ್ಯೆಗಳಾಗುತ್ತವೆಯೆಂಬುದನ್ನು ಮನೆ–ಮನೆಗಳಿಗೆ ಹೋಗಿ ತಿಳಿಸಿಕೊಡುವ ಕಾರ್ಯವನ್ನು ಮಾಡುತ್ತ, ಹೆಣ್ಣುಮಕ್ಕಳು ಅವೆಲ್ಲದರ ಬಗ್ಗೆ ಚಿಂತನೆ ಮಾಡುವಂತೆ ಆತತ್ತು. ಪರಿಣಾಮವಾಗಿ ಏಕೀಕರಣದ ಅನೇಕ ಸಭೆಗಳಲ್ಲಿ ಹೆಣ್ಣುಮಕ್ಕಳು ಪಾಲ್ಗೊಳ್ಳತೊಡಗಿದ್ದರು. ಸೊಲ್ಲಾಪುರದ ಜಯದೇವಿತಾಯಿ ಲಿಗಾಡೆಯವರ ಹೆಸರನ್ನು ಇಲ್ಲಿ ನೆನೆಯಬೇಕು. ಅವರು ಕಲಿತದ್ದು ಕೇವಲ ನಾಲ್ಕನೆಯ ತರಗತಿಯಾಗಿದ್ದರೂ ಕನ್ನಡದ ಅಭಿಮಾನಕ್ಕೇನೂ ಕೊರತೆಯಿರಲಿಲ್ಲ. ಇವರಷ್ಟೇ ಅಲ್ಲ, ಬೇರೆಬೇರೆ ಊರುಗಳಿಂದ












ನೂರಾರು ಹೆಣ್ಣುಮಕ್ಕಳು ಈ ಕಾರ್ಯದಲ್ಲಿ ಭಾಗವಹಿಸು ತ್ತಿದ್ದರು. ಅವರಲ್ಲಿ ಕೆಲವರ ಹೆಸರನ್ನಾದರೂ ಸಾಂಕೇತಿಕ ವಾಗಿಯಾದರೂ ಸ್ಮರಿಸುವುದು ಅಗತ್ಯ. ಕಲಬುರಗಿಯ ವಿಮಲಾಬಾಯಿ, ಕಾಸರಗೋಡಿನ ಸರಸ್ವತೀಬಾಯಿ, ಬೆಳಗಾವಿಯ ಅಶಾತಾಯಿ, ಸಾವಿತ್ರೀದೇವಿ ಹಳ್ಳೀಕೇರಿ, ಶಾಂತಾದೇವಿ ಮಾಳವಾಡ, ಸರೋಜಿನಿ ಶಿಂತ್ರಿ, ಬಸಲಿಂಗಮ್ಮ ಬಾಳೆಕುಂದ್ರಿ, ಮಹಾದೇವಿತಾಯಿ ಹೀಗೆ ನೂರಾರು ಹೆಣ್ಣುಮಕ್ಕಳು ಸೇರಿಕೊಂಡರು. ಕೇವಲ ಬೀದಿಗಿಳಿದು ಹೋರಾಟ ಮಾಡುವುದಷ್ಟೇ ಅಲ್ಲ, ಕನ್ನಡದ ಪರವಾಗಿ, ನಾಡನ್ನು ಒಂದುಗೂಡಿಸುವ ಸಲುವಾಗಿ ಬೀದರ್, ಬೆಳಗಾವಿ, ಸಾಂಗ್ಲಿ ಮುಂತಾದ ಅನೇಕ ಪ್ರದೇಶಗಳಲ್ಲಿ ಕನ್ನಡ ಶಾಲೆಗಳನ್ನು ತೆರೆದು, ಏಕೀಕರಣದ ಪಾಠ ಮಾಡಿಸಿದರು. ಹೀಗೆ ಅಕ್ಷರಗಳ ಮೂಲಕ ಹೋರಾಟ ಮಾಡಿದ ಹಿರಿಮೆಯಲ್ಲಿ ಮಹಿಳೆಯರ ಪಾತ್ರವೂ ಇತ್ತು. ರಾಜ್ಯ ಪುನರ್ವಿಂಗಡಣಾ ಆಯೋಗದ ವರದಿಯ ಪ್ರಕಾರ ಬಳ್ಳಾರಿ ಆಂಧ್ರಕ್ಕೆ ಸೇರಬೇಕೆಂದಾಗಿತ್ತು. ಆಗ ಬಳ್ಳಾರಿ ಸಿದ್ದಮ್ಮ ಹಳ್ಳಿಹಳ್ಳಿಗೆ ಹೋಗಿ, ಮಹಿಳೆ ಯರಿಗೆ, ಒಂದುವೇಳೆ ಬಳ್ಳಾರಿ ಆಂಧ್ರಕ್ಕೆ ಹೋದರೆ ಪರಿಸ್ಥಿತಿ ಏನಾಗಬಹುದೆಂಬುದರ ಬಗ್ಗೆ ಮನವರಿಕೆ ಮಾಡಿಕೊಟ್ಟರು. ನಂತರ ನೂರಾರು ಮಹಿಳೆಯರನ್ನು ಕಟ್ಟಿಕೊಂಡು ಆಯೋಗದ ಮುಖಂಡರನ್ನು ಚಿತ್ರದುರ್ಗ ದಲ್ಲಿ ಭೇಟಿಮಾಡಿ, ಬಳ್ಳಾರಿ ಕರ್ನಾಟಕದಲ್ಲಿಯೇ ಉಳಿಯಬೇಕೆಂಬುದನ್ನು ಸಮರ್ಥವಾಗಿ ಮನವರಿಕೆ ಮಾಡಿಕೊಟ್ಟರು. ಹಾಗಾಗಿ ಬಳ್ಳಾರಿ ಕರ್ನಾಟಕದಲ್ಲಿಯೇ ಉಳಿಯಿತು.

ಹೀಗೆ ಎಲ್ಲ ವರ್ಗದವರಿಂದ, ಎಲ್ಲ ಕಡೆಗಳಿಂದ ನಾನಾ ರೀತಿಗಳಲ್ಲಿ ನಡೆದ ಸುದೀರ್ಘ ಹೋರಾಟದ ಫಲವಾಗಿ, 1956 ರಲ್ಲಿ ಏಕೀಕರಣದ ಕನಸು ನನಸಾದರೂ ಪೂರ್ತಿ ಏಕೀಕರಣ ಸಾಧ್ಯವಾಗಲಿಲ್ಲ.

ಅನೇಕ ಪ್ರದೇಶಗಳು ಹೊರಗೇ ಉಳಿದುಹೋದವು. ಇಂದಿಗೂ ಅಲ್ಲಿನ ಕನ್ನಡಿಗರ ಹಂಬಲ ನಿರೀಕ್ಷೆಯಲ್ಲಿಯೇ ಉಳಿದುಕೊಂಡಿದೆ. ಏನೇ ಆದರೂ ಬೇರೆಬೇರೆ ಪ್ರಾಂತಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ಒಂದೇ ರಾಜ್ಯದ ಆಡಳಿತದ ವ್ಯಾಪ್ತಿಗೆ ಬಂದದ್ದು ಒಂದು ಐತಿಹಾಸಿಕ ಹೋರಾಟದ ಫಲ.

ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿ ರುವ ಕರ್ನಾಟಕ ಶತಮಾನಗಳ ಸಂಕೋಲೆ ಕಳಚಿಕೊಂಡು, ಎಲ್ಲರೀತಿಯಿಂದ ಒಂದಾಯಿತು. ಏಕೀಕರಣದ ಕನಸು ಈಡೇರುವ ಮೂಲಕ ಕನ್ನಡಿಗರ ಸಾಂಸ್ಕೃತಿಕ ಐಕ್ಯತೆಗೂ ಬಲ ಬಂದಿತು. ಇಂತಹ ಕನಸನ್ನು ನನಸು ಮಾಡಲು ಹೋರಾಡಿದ, ತ್ಯಾಗ, ಬಲಿದಾನ ಮಾಡಿದ ಮಹಾನ್ ವ್ಯಕ್ತಿಗಳನ್ನು ಗೌರವಪೂರ್ವಕವಾಗಿ ನೆನೆಯೋಣ. ತಾಯ್ನಾಡಿನ ಬಗ್ಗೆ ಅವರೆಲ್ಲರೂ ಹೊಂದಿದ್ದ ಪ್ರೀತಿ ನಮ್ಮೆಲ್ಲರಿಗೂ ಸ್ಫೂರ್ತಿಯಾಗಲಿ.

ಜೈ ಕನ್ನಡ ಭುವನೇಶ್ವರಿ.

*ನಿನ್ನ ಶಕ್ತಿಯ ಮೀರಿದ ಕಾರ್ಯಕ್ಕೆ ಕೈ ಹಾಕಬೇಡ*

# ಅಖಿಲ ಭಾರತೀಯ ಶೈಕ್ಷಿಕ ಮಹಾ ಸಂಘದ ರೂವಾರಿ

## Founder of
## All India Shaikshik Maha Sangh



ಶ್ರೀ ಮುಕುಂದರಾವ್ ಕುಲಕರ್ಣಿ (Shri Mukundarao Kulkarni)

---

## ಅಖಿಲ ಭಾರತೀಯ ಶೈಕ್ಷಿಕ ಮಹಾ ಸಂಘವನ್ನು ಮುನ್ನಡೆಸುತ್ತಿರುವ ಚೈತನ್ಯ

## The leading power of All India Shaikshik Maha Sangh



ಶ್ರೀ ಕೃ. ನರಹರಿ (K. Narahari)

# ಗುರುಪಾದಪ್ಪ ನಾಗಮಾರಪಳ್ಳಿ

## ಮಲ್ಟಿ ಸೂಪರ್ ಸ್ಪೇಷಾಲಿಟಿ ಸಹಕಾರ ಆಸ್ಪತ್ರೆ ಮತ್ತು ಸಂಶೋಧನೆ ಕೇಂದ್ರ, ಬೀದರ



G.N. CITY OPD, INPATIENT & DIAGNOSTIC CENTRE

**FIRST TIME IN BIDAR DISTRICT ALL FACILITIES AVAILABLE UNDER ONE ROOF**

## 24X7 FACILITIES AVAILABLE:

* HIGHLY EQUIPPED MICU/SICU CARE WITH VENTILATOR SUPPORT
* HIGHLY EQUIPPED LEVEL III NICU CARE WITH VENTILATOR SUPPORT
* PICU CARE/GENERAL WARD/SPECIAL ROOM
* LABOUR ROOM & NORMAL DELIVERIES. (Hospital Charges at Affordable Prices Compared to other Private Hospitals)



1.5 Tesla MRI



16 Slice CT Scan



11 HD Ultrasound



Kidney Dialysis



Laboratory Facilities

OPD Fees 100/- Only

## 24X7 SPECIALITY AVAILABLE

- MEDICINE
- SURGERY
- PEDIATRICS
- SKIN & VD
- ORTHOPEDICS
- ENT
- UROLOGY
- NEUROLOGY
- GYNECOLOGY & OBSTETRIC

ಷೇರುದಾರರಿಗೆ 10% ರಿಂದ 20% ರಿಯಾಯಿತಿ ದರದಲ್ಲಿ ಚಿಕಿತ್ಸೆ

## ಬೀದರ ನಗರದಲ್ಲಿ ಉಚಿತ ಅಂಬುಲೆನ್ಸ್

**Ventilator Ambulance with Complete life Support System**



EVERY WEEK SUPER SPECIALITY DOCTOR AVAILABLE

**Health Scheme Available**

* AYUSHMAN BHARAT AROGYA KARNATAKA
* STAR HEALTH INSURANCE
* ESI HEALTH SCHEME



2.5ಲಕ್ಷಕ್ಕೂ ಮೇಲ್ಪಟ್ಟು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ

**ಕೋವಿಡ 19ರ 2ನೇ ಅಲೆಯ ಸಂದರ್ಭದಲ್ಲಿ ಬಡಜನತೆಗಳಿಗೆ ಆಹಾರ, ವಸತಿ ಮತ್ತು ಉಚಿತ ಚಿಕಿತ್ಸೆ ನೀಡಲಾಗಿದೆ.**

AKKA MAHADEVI COLONY, NEAR AXIS BANK HAROORGERI
BVB COLLEGE ROAD, BIDAR-585 403(KS) PH:08482-223038, 223039
Cell: 8548883999